ಮಂಗಳೂರು ವಿಶ್ವವಿದ್ಯಾನಿಲಯ

"ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ': ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ"

ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪಿಹೆಚ್.ಡಿ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಲಿರುವ ಪಿಹೆಚ್.ಡಿ. ಮಹಾಪ್ರಬಂಧದ ಸಾರಲೇಖ

ಸಂಶೋಧಕರು

ಲೋಕೇಶ ಐ.ಡಿ.

ಎಂ.ಎ., ಬಿ.ಇಡಿ., ಎಂ.ಫಿಲ್.

ಸಂಶೋಧನಾ ವಿದ್ಯಾರ್ಥಿ

ರಾಜ್ಯಶಾಸ್ತ್ರ ಅಧ್ಯಯನ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ–574199.

ಮಾರ್ಗದರ್ಶಕರು

ಡಾ. ದಯಾನಂದ ನಾಯ್ಕ್

ಎಂ.ಎ., ಪಿಹೆಚ್.ಡಿ., ಪಿ.ಜಿ.ಡಿ.ಹೆಚ್.ಆರ್.

ಸಹ ಪ್ರಾಧ್ಯಾಪಕರು

ರಾಜ್ಯಶಾಸ್ತ್ರ ಅಧ್ಯಯನ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ –574199.

ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ,

ಮಂಗಳಗಂಗೋತ್ರಿ–574199.

2020

“ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ ‘ಸಾಮಾಜಿಕ ನ್ಯಾಯ’: ವಿಶೇಷವಾಗಿ ‘ಅಹಿಂದ’ ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ”

ಪರಿವಿಡಿ

ಕ್ರ.ಸಂ	ವಿಷಯ	ಪುಟಸಂಖ್ಯೆ
1.1	ಪ್ರಸ್ತಾವನೆ.	1-3
1.2	ಸಾಮಾಜಿಕ ನ್ಯಾಯದ ಪರಿಕಲ್ಪನೆ.	3-10
1.3	ಸಂಶೋಧನೆಯ ಸಮಸ್ಯೆ.	10-11
1.4	ಸಮಸ್ಯೆಯ ನಿರೂಪಣೆ.	11-12
1.5	ಸಾಹಿತ್ಯ ಪರಾಮರ್ಶೆ.	12-17
1.6	ಸಂಶೋಧನಾ ಅಂತರ ಅಥವಾ ಗ್ಯಾಪ್.	17-18
1.7	ಅಧ್ಯಯನದ ಉದ್ದೇಶ	18-19
1.8	ಪ್ರಾಕ್‌ಕಲ್ಪನೆಗಳು	19
1.9	ಅಧ್ಯಯನ ವಿಧಾನ	19-20
1.10	ಅಧ್ಯಯನದ ಆಧಾರ	20-21
1.11	ಅಧ್ಯಯನದ ಮಾದರಿ ಅಥವಾ ವಿನ್ಯಾಸ	21
1.12	ಅಧ್ಯಯನದ ವ್ಯಾಪ್ತಿ ಮತ್ತು ಕ್ಷೇತ್ರ.	21-22
1.13	ಅಧ್ಯಯನದ ಪ್ರಸ್ತುತತೆ ಮತ್ತು ಅನಿವಾರ್ಯತೆ	22
1.14	ಅಧ್ಯಯನದ ಮಹತ್ವ	23
1.15	ಅಧ್ಯಯನದ ಪ್ರಮುಖ ಸವಾಲುಗಳು (ಸಾಮಾಜಿಕ ನ್ಯಾಯ ಮತ್ತು ಅಹಿಂದ ಚಳುವಳಿಯ ಸವಾಲುಗಳು)	23-24
1.16	ಅಧ್ಯಯನದ ಮಿತಿ	25
1.17	ಅಧ್ಯಯನದ ಕೊಡುಗೆಗಳು	25-26
1.18	ಅಧ್ಯಯನ ಯೋಜನೆ ಮತ್ತು ಫಲಿತಗಳು ಹಾಗೂ ಸಲಹೆಗಳು	26-35
1.19	ಸಂಶೋಧನಾ ಅಕಾಡೆಮಿಕ್ ಚಟುವಟಿಕೆಗಳು	35-38
1.20	ಪರಾಮರ್ಶನಾ ಗ್ರಂಥಗಳು	38-44

"ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ': ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ"

1.1 ಪ್ರಸ್ತಾವನೆ:

"ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ': ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ" ಎಂಬ ವಸ್ತು ವಿಷಯವು ಪ್ರಸ್ತುತ ಸಂದರ್ಭದಲ್ಲಿ ಅತ್ಯಂತ ಅವಶ್ಯಕ ಹಾಗೂ ಅನಿವಾರ್ಯವೂ ಕೂಡ ಆಗಿದೆ. ಏಕೆಂದರೆ ವೈವಿಧ್ಯಮಯ ಸಾಂಸ್ಕೃತಿಕ, ಸಹಿಷ್ಣು, ಬಹುತ್ವದ ಪರಂಪರೆಗೆ ಹೆಸರಾಗಿರುವ ಭಾರತದಲ್ಲಿ ಕರ್ನಾಟಕ ರಾಜ್ಯದ ಪಾತ್ರ ಬಹಳ ವಿಶಿಷ್ಟವಾದದ್ದು. ಅಹಿಂದ ಪರಿಕಲ್ಪನೆಯು ಕರ್ನಾಟಕದ ಆಧುನೀಕರಣದ ಹಿನ್ನಲೆಯೊಂದಿಗೆ ಒಡಮೂಡಿದೆ. ತಾತ್ವಿಕವಾಗಿ ಅಲ್ಪಸಂಖ್ಯಾತ, ಹಿಂದುಳಿದ ಮತ್ತು ದಲಿತ ವರ್ಗಗಳನ್ನು ಪ್ರತಿನಿಧಿಸುವುದಾದರೂ ವಿಶಾಲಾರ್ಥದಲ್ಲಿ ಎಲ್ಲಾ ವರ್ಗಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಬಡವರು, ಅನಕ್ಷರಸ್ಥರನ್ನು ಒಳಗೊಂಡಿರುವ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಚಳುವಳಿಯ ಸಂಘಟನೆಯಾಗಿದೆ. ಏಕೆಂದರೆ ಸಮಾಜದ ಅಂಚಿನ ಸಮುದಾಯಗಳ ಗುಂಪಿಗೆ ಸೇರುವ ಈ ಸೌಲಭ್ಯ ವಂಚಿತ ಅಥವಾ ಅವಕಾಶ ವಂಚಿತ ಸಮುದಾಯಗಳ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಬಲೀಕರಣವೇ ಅಹಿಂದದ ಪ್ರಮುಖ ಹಾಗೂ ವಿಶಿಷ್ಟ ಗುಣಲಕ್ಷಣವಾಗಿದೆ. ಈ ಹಿನ್ನಲೆಯಲ್ಲಿ ಕಾಂಗ್ರೆಸ್ ಪಕ್ಷದ ಭದ್ರಕೋಟೆಯೆಂದೇ ಕರೆಯಲ್ಪಡುವ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ವಿವಿಧ ಸರ್ಕಾರಗಳ ಅಧಿಕಾರಾವಧಿಯಲ್ಲಿ ಸಾಧಿಸಲ್ಪಟ್ಟ ಅಹಿಂದ ವರ್ಗಗಳ ಸಬಲೀಕರಣವನ್ನು ಕುರಿತು ಚರ್ಚಿಸಲಾಗಿದೆ.

ಭಾರತೀಯ ಸಮಾಜದ ಮೂಲ ಆಧಾರ ಸ್ತಂಭವಾಗಿರುವ ಮತ್ತು ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.80ಕ್ಕೂ ಅಧಿಕ ಸಂಖ್ಯೆಯಲ್ಲಿ ಬಹುಸಂಖ್ಯಾತ, ಬಹುಜನ ಸಮಾಜ ಅಥವಾ ಸಮುದಾಯಗಳಾಗಿರುವ ಹಾಗೂ ಭಾರತದ ಮೂಲನಿವಾಸಿಗಳು ಸಹ ಆಗಿರುವ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತರು (ಅಹಿಂದ) ದೇಶದ ಬೆನ್ನೆಲುಬಾಗಿದ್ದಾರೆ. ಅಹಿಂದಕ್ಕೆ ಜಾತಿಯಿಲ್ಲ ಅದೊಂದು ವರ್ಗ. ಕಾರಣ **'ಅಹಿಂದ'ಎನ್ನುವುದು ಒಂದು ಜಾತಿಯಲ್ಲ ಬದಲಿಗೆ ಹಲವು ಜಾತಿಗಳಿಂದ ಕೂಡಿದ ಅಥವಾ ಎಣೆದ ಒಂದು ವರ್ಗ. ಅಥವಾ ದಲಿತ–ತಳಸಮುದಾಯ–ಹಿಂದುಳಿದ–ಅಲ್ಪಸಂಖ್ಯಾತ ಜಾತಿಗಳನ್ನೊಳಗೊಂಡ ಒಂದು ವರ್ಗ(ಕ್ಲಾಸ್) ಎಂದರ್ಥ. ಸರಳವಾಗಿ ಜಾತಿರಹಿತ ವರ್ಗ (ಕ್ಯಾಸ್ಟ್‌ಲೆಸ್ ಕ್ಲಾಸ್) ಎನ್ನಬಹುದು**. ಜೊತೆಗೆ ಇದೊಂದು **ರಾಜಕೀಯ ಮಿಥ್ಯೆಯಲ್ಲ, ಬದಲಿಗೆ ಹಿಂದುಳಿದ ವರ್ಗಗಳ ರಾಜಕೀಯ ಧ್ರುವೀಕರಣ (ಕಾಲಗಟ್ಟದಲ್ಲಿ ಚಲನಶೀಲತೆಯಿಂದಿರುತ್ತದೆ)** ಎಂಬುದಾಗಿದೆ. ರಾಜ್ಯದಲ್ಲಿ ಅಹಿಂದವು ಒಂದೇ ಬ್ಯಾನರ್‌ನ ಅಡಿಯಲ್ಲಿ ಸಮಗ್ರ ಸಂಘಟನೆಗಳಿಲ್ಲ, ಬದಲಿಗೆ **ಹಿಂದುಳಿದ ಹಲವಾರು ಜಾತಿ ಸಂಘಟನೆಗಳ ಸಮೂಹವೇ ಅಹಿಂದ**. ಹೀಗೆ ಹಲವು ಜಾತಿಗಳ ಸಮ್ಮಿಲನವಾದ ಅಹಿಂದವು ಒಂದು ವರ್ಗವಾಗಿದೆ. ಹಲವಾರು ಜಾತಿ, ಧರ್ಮಗಳ ಸಮ್ಮಿಲನದ ಸಂಕೇತವೇ 'ಅಹಿಂದ' ಆದ್ದರಿಂದ ಬಹುಸಂಖ್ಯಾತರಾಗಿದ್ದಾರೆ.

ಪ್ರಪ್ರಥಮವಾಗಿ ಕಾಂಗ್ರೆಸ್ ಪಕ್ಷವು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅಹಿಂದ ವರ್ಗಗಳ ಕಲ್ಯಾಣವನ್ನೇ ತನ್ನ ಪ್ರಧಾನ ಅಜೆಂಡಾ ಮತ್ತು ಪ್ರಣಾಳಿಕೆಯನ್ನಾಗಿ ಘೋಷಿಸಿಕೊಂಡಿದೆ. ಇದಕ್ಕೆ ಉದಾಹರಣೆಯಾಗಿ 1947ರ ಸ್ವಾತಂತ್ರ್ಯಾದ ತರುವಾಯ ಹಾಗೂ 1956ರಲ್ಲಿ ಭಾಷಾವಾರು ರಾಜ್ಯಗಳ ಪುನರ್‌ವಿಂಗಡನಾ ಅನುಷ್ಠಾನದ ನಂತರ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದಾಗಲೆಲ್ಲ ಮೇಲ್ವರ್ಗಗಳಾದ ವೀರಶೈವ ಲಿಂಗಾಯಿತರು ಮತ್ತು ಒಕ್ಕಲಿಗ ಸಮುದಾಯಗಳಿಗೆ ಸೇರಿದವರೇ ಮುಖ್ಯಮಂತ್ರಿಗಳಾಗುತ್ತಿದ್ದರು. ಆದರೆ ಪ್ರಪ್ರಥಮ ಬಾರಿಗೆ ಡಿ. ದೇವರಾಜ ಅರಸುರವರು ಮುಖ್ಯಮಂತ್ರಿ ಆಗುವ ಅವಕಾಶವನ್ನು ಕಲ್ಪಿಸಿಕೊಟ್ಟ ಕಾಂಗ್ರೆಸ್ ಆ ಮೂಲಕ ಅಲ್ಪಸಂಖ್ಯಾತ ವರ್ಗಗಳಿಗೆ ದೇವರಾಜ ಅರಸುರವರು ತಮಗೆ ದೊರೆತ ಇಂತಹ ಸದಾವಕಾಶವನ್ನು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದರ ಮೂಲಕ ಕಾಂಗ್ರೆಸ್ ಪಕ್ಷದತ್ತ ಅಹಿಂದ ವರ್ಗಗಳನ್ನು ಸೂಜಿಗಲ್ಲಿನಂತೆ ಸೆಳೆಯುವುದರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಯಶಸ್ವಿಯಾದರು.

ದೇವರಾಜ ಅರಸುರವರು ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಗಳಲ್ಲಿ ಕೊಟ್ಟ ಭರವಸೆಗಳನ್ನು ಈಡೇರಿಸುವುದರೊಂದಿಗೆ 'ಅಹಿಂದ' ವರ್ಗಗಳಿಗೆ ವಿಧಾನಸಭಾ ಮತ್ತು ವಿಧಾನ ಪರಿಷತ್‌ಗಳ ಚುನಾವಣೆಗಳಲ್ಲಿ ಸ್ಪರ್ಧಿಸಲು ಹೆಚ್ಚಿನ ಆದ್ಯತೆ ನೀಡಿದರು. ಇದರಿಂದ 'ಅಹಿಂದ' ವರ್ಗಗಳಲ್ಲಿಯೇ ಅತ್ಯಂತ ಹಿಂದುಳಿದ ಸಣ್ಣ ಸಂಖ್ಯೆಯಲ್ಲಿದ್ದ ಅಲ್ಪಸಂಖ್ಯಾತ ಸಮುದಾಯಗಳಿಗೆ ರಾಜಕೀಯದ ಅಧಿಕಾರವು ಸಿಗುವಂತೆ ಮಾಡಿದರು. ಉದಾಹರಣೆಗೆ: ಎಸ್. ಬಂಗಾರಪ್ಪ, ಮಲ್ಲಿಕಾರ್ಜುನ ಖರ್ಗೆ, ವೀರಪ್ಪ ಮೊಯಿಲಿ, ಧರ್ಮಸಿಂಗ್,

ಹೆಚ್.ವಿಶ್ವನಾಥ್, ಎಲ್.ಜಿ. ಹಾವನೂರ್ ಮುಂತಾದ ಅನೇಕರು ಕಾಂಗ್ರೆಸ್ ಪಕ್ಷದಲ್ಲಿ ಮುಂಚೂಣಿಗೆ ಬಂದರಲ್ಲದೆ, ಮುಂದೆ ಅತ್ಯಂತ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಎಸ್. ಬಂಗಾರಪ್ಪ, ವೀರಪ್ಪ ಮೊಯಿಲಿ, ಧರ್ಮಸಿಂಗ್ ಮೊದಲಾದವರು ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದಾಗಲೆಲ್ಲಾ ಮುಖ್ಯಮಂತ್ರಿಗಳಾಗುವ ಸದಾವಕಾಶವು ದೊರಕಿತು. ಇದು ಕಾಂಗ್ರೆಸ್ ಪಕ್ಷವು ಅಹಿಂದ ವರ್ಗಗಳಿಗೆ ನೀಡಿದ ರಾಜಕೀಯ ಸಾಮಾಜಿಕ ನ್ಯಾಯದ ಅಧಿಕಾರವಾಗಿದ್ದು, ತನ್ಮೂಲಕ ಈ ವರ್ಗಗಳಿಗೆ ಸೇರಿದ ಅನೇಕರು ರಾಜಕೀಯ ನಾಯಕರಾಗಿ ಹೊರಹೊಮ್ಮಿದರು. ಉದಾಹರಣೆಗೆ: ಈಡಿಗ ಸಮುದಾಯಕ್ಕೆ ಸೇರಿದ ಜನಾರ್ದನ ಪೂಜಾರಿ, ಬಿ.ಕೆ ಹರಿಪ್ರಸಾದ್, ಕುರುಬ ಜನಾಂಗಕ್ಕೆ ಸೇರಿದ ಡಿ.ಕೆ ನಾಯ್ಕರ್, ಕ್ರೈಸ್ಥ ಸಮುದಾಯಕ್ಕೆ ಸೇರಿದ ಮಾರ್ಗರೇಟ್ ಆಳ್ವ, ಮೊಗವೀರ ಸಮುದಾಯದ ಮನೋರಮಾ ಮಧ್ವರಾಜ್, ಮುಸ್ಲಿಂ ಪಂಗಡದ ಜಾಫರ್ ಷರೀಫ್, ಯಾಹ್ಯ, ಫರೀದ್, ನಜೀರ್ ಸಾಬ್, ಅಜೀಜ್ ಸೇಠ್ ದಲಿತ ವರ್ಗಕ್ಕೆ ಸೇರಿದ ಬಿ. ಬಸವಲಿಂಗಪ್ಪ ಬಿ. ರಾಚಯ್ಯ, ಎನ್. ರಾಚಯ್ಯ, ಮಲ್ಲಿಕಾರ್ಜುನ ಖರ್ಗೆ ಅಲ್ಲದೆ ಕೆ.ಹೆಚ್. ರಂಗನಾಥ್, ಮಲ್ಲಿಕಾರ್ಜುನ ಸ್ವಾಮಿ, ಹೆಚ್. ಚಲುವಯ್ಯ. ಆರ್ಮುಗಂ, ರೇಣುಕಾ ರಾಜೇಂದ್ರನ್ ಇವರು ಸಹ ಈಡಿಗ, ಹಡಪದ (ಕ್ಷೌರಿಕ) ರಜಪೂತ ವರ್ಗ ಹೀಗೆ ಮುಂತಾದವರುಗಳು ರಾಜಕೀಯವಾಗಿ ಅಖಿಲ ಭಾರತ ಮತ್ತು ಕರ್ನಾಟಕ ಪ್ರಾಂತ್ಯದ ರಾಜಕೀಯ ಕ್ಷೇತ್ರಗಳಲ್ಲಿ ಪ್ರಮುಖ ನಾಯಕರಾಗಿ ಬೆಳೆದು 'ಅಹಿಂದ' ವರ್ಗಗಳನ್ನು ಪ್ರತಿನಿಧಿಸಿದರು. ಇದರಿಂದ ವಿಶೇಷವಾಗಿ ಕರ್ನಾಟಕದಲ್ಲಿ ಅಹಿಂದ ವರ್ಗಗಳು ಕಾಂಗ್ರೆಸ್ ಪಕ್ಷದ ಮತಬ್ಯಾಂಕ್‌ಗಳಾಗಿ ಪರಿವರ್ತನೆಯಾದವು. ದೇವರಾಜ ಅರಸ್ 'ಅಹಿಂದ'ದ ಚಾಂಪಿಯನ್ ಆಗಿ ಭಾರತದಾದ್ಯಂತ ಮನೆಮಾತಾದರು. ಮುಂದೆ ಅರಸುರವರು ಅನುಸರಿಸಿದ ಅಹಿಂದ ಸಂಘಟನೆಯ ಪರಿಕಲ್ಪನೆಯು ಭಾರತದ ಇತರೆ ರಾಜ್ಯಗಳಲ್ಲೂ 'ಕರ್ನಾಟಕದ ಮಾದರಿ'ಯಾಗಿ ಅತೀವ ಪ್ರಭಾವವನ್ನು ಬೀರಿತು.

ಡಿ.ದೇವರಾಜ ಅರಸುರವರು ಅನುಸರಿಸಿದ ಮೇಲ್ಪಂಕ್ತಿಯನ್ನು ಮುಂದೆ ಎಸ್. ಬಂಗಾರಪ್ಪ, ವೀರಪ್ಪ ಮೊಯಿಲಿ, ಧರ್ಮಸಿಂಗ್, ಸಿದ್ದರಾಮಯ್ಯ ಮುಂತಾದ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿಗಳು ಅನುಸರಿಸಿ ಅಹಿಂದ ವರ್ಗಗಳಿಗೆ ರಾಜಕೀಯ ಅಧಿಕಾರದಲ್ಲಿ ಹೆಚ್ಚಿನ ಪಾಲು ಹಾಗೂ ಸವಲತ್ತು ಸಿಗುವಂತೆ ಕ್ರಮ ಕೈಗೊಂಡರು.

ರಾಜಕೀಯದಂತೆ ಆರ್ಥಿಕ ಸಬಲೀಕರಣಕ್ಕೂ ಕಾಂಗ್ರೆಸ್ ಸರ್ಕಾರಗಳು ಕರ್ನಾಟಕದಲ್ಲಿ ರಾಜ್ಯದಲ್ಲಿ ಅನೇಕ ಯೋಜನೆಗಳನ್ನು ಜಾರಿಗೆ ತಂದವು. ಈ ಆರ್ಥಿಕ ಸುಧಾರಣೆಗಳಿಗೆ ಇಂದಿರಾ ಗಾಂಧಿಯವರು ಅನುಷ್ಠಾನಕ್ಕೆ ತಂದಿದ್ದ ಅತ್ಯಂತ ಜನಪ್ರಿಯ ಕಾರ್ಯಕ್ರಮವಾಗಿದ್ದ 20 ಅಂಶಗಳ ಕಾರ್ಯಸೂಚಿಯು ಆಧಾರ ಸ್ತಂಭವಾಗಿತ್ತೆಂಬುದು ಅತ್ಯಂತ ಗಮನಾರ್ಹ. 'ರೋಟ್, ಕಪಡಾ ಹೌರ್ ಮಕಾನ' ಘೋಷಣೆ ಮೂಲಕ ಮನುಷ್ಯನಿಗೆ ಅತೀ ಅವಶ್ಯಕವಾದ 'ಆಹಾರ, ಬಟ್ಟೆ, ಮತ್ತು ಮನೆ' ಒದಗಿಸುವ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ಬಡತನ ನಿವಾರಣೆಗಾಗಿ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಯಿತು. ಅವುಗಳಲ್ಲಿ ಭೂ ಒಡೆತನ ಕಾಯಿದೆಯ ಮೂಲಕ ಜಾರಿಗೆ ತಂದ "ಉಳುವವನೆ ಭೂ ಒಡೆಯ" ಹಾಗೂ ಖಾಸಗಿ ಬ್ಯಾಂಕುಗಳು, ಸಾರಿಗೆ ಸಂಸ್ಥೆಗಳು ಮುಂತಾದವುಗಳ ರಾಷ್ಟ್ರೀಕರಣದಂತಹ ಕ್ರಾಂತಿಕಾರಕ ಆರ್ಥಿಕ ಯೋಜನೆಗಳನ್ನು ಇಡೀ ರಾಷ್ಟ್ರದಲ್ಲಿಯೇ ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಯಿತು.

ಸಾಮಾಜಿಕವಾಗಿ ಅಹಿಂದ ವರ್ಗಗಳಿಗೆ ಸಾಮಾಜಿಕ ಸಮಾನತೆ ಹಾಗೂ ನ್ಯಾಯದ ಹಂಚಿಕೆಗಾಗಿ ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಹಲವಾರು ಕಾರ್ಯ ಸೂಚಿಗಳನ್ನು ಜಾರಿಗೆ ತಂದಿವೆ. ಅದಕ್ಕಾಗಿ ಎಲ್.ಜಿ ಹಾವನೂರ್, ಚಿನ್ನಪ್ಪ ರೆಡ್ಡಿ, ವೆಂಕಟಸ್ವಾಮಿ ಆಯೋಗ ಮುಂತಾದ ಹಿಂದುಳಿದ ಆಯೋಗಗಳನ್ನು ರಚಿಸಿ, ಅವುಗಳ ಶಿಫಾರಸ್ಸುಗಳನ್ನು ಜಾರಿಗೆ ತಂದು ಅಹಿಂದ ವರ್ಗಗಳ ಸಾಮಾಜಿಕ ನ್ಯಾಯಕ್ಕಾಗಿ ಪ್ರಯತ್ನ ಮಾಡಿವೆ.

ಡಿ. ದೇವರಾಜ ಅರಸುರವರ ಹಿಂಬಾಲಕರಾಗಿ, ಅವರ ಮಾದರಿಯಲ್ಲಿಯೇ ನಡೆದವರು **ಎಸ್. ಬಂಗಾರಪ್ಪನವರು,** ನಂತರ ವೀರಪ್ಪ ಮೊಯಿಲಿಯವರು ಸಹ ನಡೆದರು ಆದರೆ ಅವರನ್ನು ಸಾಮಾಜಿಕ ನ್ಯಾಯಪರ ಕೆಲಸಮಾಡಲು ಬಿಡಲಿಲ್ಲ. ತದ ನಂತರ ಅರಸು ಕನಸನ್ನು ನನಸಾಗಿಸಲು ಶ್ರೀ ಸಿದ್ದರಾಮಯ್ಯನವರು ಸಹ ಅಹಿಂದ ವರ್ಗಗಳ ಸಬಲೀಕರಣ ಮತ್ತು ಸಾಮಾಜಿಕ ನ್ಯಾಯವನ್ನು ಸಾಕಾರಗೊಳಿಸಿರುವುದಕ್ಕೆ ಅವರು ಜಾರಿ ಮಾಡಿದ ಉಚಿತ ಭಾಗ್ಯಯೋಜನೆಗಳೆ ಸಾಕ್ಷಿಕರಿಸಿರುವುದು ಈ ಸಂಶೋಧನೆಯ ಮುಖ್ಯಾಂಶವಾಗಿದೆ. ಆ ಮೂಲಕ ಕರ್ನಾಟಕದಲ್ಲಿ "ಸಾಮಾಜಿಕ ನ್ಯಾಯ" ಮತ್ತು ಸಮಾಜವಾದದ ಆಶಯವನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಅಹಿಂದ ಸಮುದಾಯಗಳ ಆಪ್ತ ಸರ್ಕಾರವಾಗಲು ಹೊರಟಿದ್ದನ್ನು ಸಹ ಕಂಡುಕೊಳ್ಳಲಾಗಿದೆ ಇದಕ್ಕೆ ನಿದರ್ಶನವೆಂಬಂತೆ ಸಿದ್ಧರಾಮಯ್ಯನವರ

ಆಡಳಿತದ ಕಾರ್ಯ ವೈಖರಿಯನ್ನು ರಾಜಕೀಯ ಪಂಡಿತರು **ಸಿದ್ದ್ ಸೋಷಿಯಾಲಿಸಂ** ಎಂದು ಕರೆದಿರುವುದು ಔಚಿತ್ಯಪೂರ್ಣವಾಗಿದೆ.

ಪ್ರಸ್ತುತ ಅಧ್ಯಯನವು ಅತ್ಯಂತ ವಿಸ್ತಾರವೂ, ಆಳವೂ, ಗಮನಾರ್ಹವೂ ಆಗಿದ್ದು ಜಾಗತೀಕರಣೋತ್ತರದ ಈ ಸಂದರ್ಭದಲ್ಲಿ ಸಾಮಾಜಿಕ ನ್ಯಾಯದ ಅನುಷ್ಠಾನದ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳು ಅನುಸರಿಸಬಹುದಾದ ಕಾರ್ಯಸೂಚಿಗಳನ್ನು ಪರಿಶೀಲಿಸಲಾಗಿದೆ. ವಿಸ್ತಾರ ಅಧ್ಯಯನ (Macro Study) ದ ಚೌಕಟ್ಟಿನಲ್ಲಿ "ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ': ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ" ಕುರಿತು ಕೈಗೊಂಡಿರುವ ಈ ಸಂಶೋಧನಾ ಕಾರ್ಯವು ಮುಂದಿನ ಸಂಶೋಧನಾ ಅಧ್ಯಯನಗಳ ಸಾಧ್ಯಾಸಾಧ್ಯತೆಗಳಿಗೆ ಪ್ರೇರಣೆಯಾಗಿದೆ. ಇದರಿಂದ ಅನೇಕ ಕಿರು ಅಧ್ಯಯನಗಳ (Micro Study)ನ್ನು ಕೈಗೊಳ್ಳಬಹುದಾಗಿದೆ. ಉದಾಹರಣೆಗೆ: ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಸಬಲೀಕರಣ, ಅಲ್ಪಸಂಖ್ಯಾತರ ಸಬಲೀಕರಣ, ದಲಿತರ ಸಬಲೀಕರಣ, ಮಹಿಳಾ ಮತ್ತು ಮಕ್ಕಳ ಸಬಲೀಕರಣ, ವಿಶೇಷ ಚೇತನರ ಸಬಲೀಕರಣ, ಮತ್ತು ಹಿಂದುಳಿದ ಅಹಿಂದ ವರ್ಗಗಳ ಆಯೋಗಗಳನ್ನು ಕುರಿತ ಅಧ್ಯಯನ ಹೀಗೆ ಹಲವು ಸಂಶೋಧನಾ ಅಧ್ಯಯನಗಳನ್ನು ಕೈಗೊಳ್ಳಲಾಗಿದೆ.

1.2 ಸಾಮಾಜಿಕ ನ್ಯಾಯದ ಪರಿಕಲ್ಪನೆ.

ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ, ಸಾಂಸ್ಕೃತಿಕವಾಗಿ ಅವಕಾಶವಂಚಿತ ಎಲ್ಲಾ ಜನ ಸಮುದಾಯಗಳಿಗೆ ಸಕಲ ಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ಸಮಾಜದ ಮುಖ್ಯವಾಹಿನಿಗೆ ತರುವುದಾಗಿದೆ. ಆ ಮೂಲಕ ಅಭಿವೃದ್ಧಿಯ ಹಿಂಬೀಳಿಕೆಗೆ ಅಥವಾ ಅಭಿವೃದ್ಧಿಯ ಹೊರಗೆ, ಉಳಿದಿರುವ ಜನಸಮುದಾಯಗಳನ್ನು ಅಭಿವೃದ್ಧಿಯ ಗೆರೆ ಅಥವಾ ರೇಖೆಯ ಪ್ರಕ್ರಿಯೆಯಲ್ಲಿ ಹೊರಗುಳಿಯಲ್ಪಟ್ಟ ಬಲಹೀನ ವರ್ಗಗಳನ್ನು ಒಳಗೊಳ್ಳುವಂತೆ ಮಾಡುವ ಮತ್ತು ಒಳಗೊಳ್ಳುವ ಮಾದರಿಗಳನ್ನು ಹಾಗೂ ಕಾರ್ಯನೀತಿಗಳನ್ನು ರೂಪಿಸಿ, ಸೃಷ್ಟಿಸಿ ಅನುಷ್ಠಾನ ಗೊಳಿಸುವುದೇ ಸಾಮಾಜಿಕ ನ್ಯಾಯ.

ಈ ಸಾಮಾಜಿಕ ನ್ಯಾಯ ಎಂಬ ಪದವು ಇತ್ತೀಚಿನದ್ದೇನಲ್ಲ. ಇದು ಪುರಾತನ ಕಾಲದಿಂದಲೂ ಚಾಲ್ತಿಯಲ್ಲಿದೆ. ಭಾರತದಲ್ಲಿ ಬುದ್ಧನ ಕಾಲದಲ್ಲೇ ಸಾಮಾಜಿಕ ನ್ಯಾಯವನ್ನು ಜಾರಿಗೊಳಿಸಿದ ಮೊದಲ ನಿದರ್ಶನಗಳು ಕಂಡುಬಂದಿವೆ. ಬುದ್ಧ ತನ್ನ ನೀತಿ ಧಮ್ಮ ಬೋಧನೆಗಳನ್ನು ಎಲ್ಲಾ ಸಮುದಾಯದ ಜನವರ್ಗಗಳಿಗೂ ಮತ್ತು ನದಿ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ಪ್ರತಿ ಸಮುದಾಯದ ಪ್ರಾಂತ್ಯಗಳು ಸಮಾನವಾಗಿ ಹಂಚಿಕೊಂಡು ಸಹಬಾಳ್ವೆ ಜೀವನ ನಡೆಸಲು ಅನುವು ಮಾಡಿಕೊಟ್ಟಿದ್ದಂತ ಐತಿಹಾಸಿಕ ಚಿಂತನೆಯನ್ನು ಗಮನಿಸಬೇಕಾದದ್ದು ಮುಖ್ಯಾಂಶವಾಗಿದೆ. ಇದಲ್ಲದೆ 12ನೇ ಶತಮಾನದಲ್ಲಿ ಭಕ್ತಿ ಭಂಡಾರಿ ಬಸವಣ್ಣ ತನ್ನ ಅನುಭವ ಮಂಟಪದ ಮೂಲಕ ಸರ್ವಧರ್ಮೀಯರಿಗೂ, ಎಲ್ಲಾ ಜಾತಿಯವರಿಗೂ ಲಿಂಗಾಧಾರಣೆ ಮಾಡಿಸಿರುವ ಬಹುದೊಡ್ಡ ಸಾಮಾಜಿಕ ಕ್ರಾಂತಿಕಾರಿ ನಮ್ಮ ನಡುವೆ ಇದ್ದಾರೆ. ಛತ್ರಪತಿ ಸಾಹುಮಹಾರಾಜ ಮತ್ತು ಬರೋಡ ಮಹಾರಾಜರು ಹಾಗೂ ನಮ್ಮ ಮೈಸೂರು ರಾಜ್ಯದ ಹೆಮ್ಮೆ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ತಮ್ಮ ಆಡಳಿತದಲ್ಲಿ ಶೇ.50 ರಿಂದ 75% ಮೀಸಲಾತಿ ನೀಡಿ ಪ್ರಜಾಮಿತ್ರ ಮಂಡಳಿ ಹಾಗೂ ಪ್ರಜಾಪ್ರತಿನಿಧಿ ಸಭೆಯ ಮೂಲಕ ದಕ್ಷಿಣ ಭಾರತದಲ್ಲೆ ಮೊದಲ ಬಾರಿಗೆ ಸಾಮಾಜಿಕ ಪರಿವರ್ತನೆಗೆ ನಾಂದಿಯಾಡಿದ್ದಾರೆ.

ಜಾಗತಿಕ ಸಂದರ್ಭದಲ್ಲಿ ಜಾತ್ಯಾತೀತ ನೆಲೆಗಟ್ಟಿನಲ್ಲಿ ಹಾಗೂ ಸೆಕ್ಯುಲರ್ ನೀತಿಯನ್ನು ಸಾಮಾಜಿಕ ನ್ಯಾಯದ ಅಡಿಯಲ್ಲಿ ಮೊಟ್ಟಮೊದಲ ಬಾರಿಗೆ ಸ್ಥಾಪಿಸಿ ರೋಮ್, ಗ್ರೀಕ್ ನಗರದಲ್ಲಿ ಚರ್ಚ್ ಮತ್ತು ರಾಜ್ಯದ ನಡುವಿನ ಧಾರ್ಮಿಕ ಬಿಕ್ಕಟ್ಟಿನ ವಿರುದ್ಧ ಮೊದಲ ಬಾರಿಗೆ ಜಾತ್ಯಾತೀತ ಹೋರಾಟ ಪ್ರಾರಂಭವಾಗುತ್ತದೆ. ಈ ಹೋರಾಟವು ಚರ್ಚ್‌ನ ಹಿಡಿತವನ್ನು ಪಾದ್ರಿಗಳು ನಿಯಂತ್ರಿಸುತ್ತಿದ್ದರು, ಜೊತೆಗೆ ರಾಜ್ಯದ ಆಡಳಿತದಲ್ಲಿ ಅಥವಾ ಚರ್ಚ್‌ನ ಆಡಳಿತದಲ್ಲಿ ಧರ್ಮದ ಅಥವಾ ಧಾರ್ಮಿಕ ಮುಖಂಡರಾದ ಪಾದ್ರಿಗಳ ಹಸ್ತಕ್ಷೇಪದ ವಿರುದ್ಧ ಬಂಡೆದ್ದರಿಂದ ಹೋರಾಟ ಅಂದರೆ ಶೋಷಕ– ಶೋಷಿತರ ನಡುವೆ ಹುಟ್ಟಿತು. ಇದಾದ ನಂತರ ಭಾರತ ಸೇರಿದಂತೆ ಅಮೇರಿಕಾ, ಫ್ರಾನ್ಸ್, ರಷ್ಯಾ ಯೂರೋಪ್ ದೇಶಗಳು ಸಾಮಾಜಿಕ ನ್ಯಾಯಕ್ಕಾಗಿ ಜಾತ್ಯಾತೀತತೆಯ ನೆಲೆಗಟ್ಟಿನಲ್ಲಿ ಸಮಾನತೆ, ಭ್ರಾತೃತ್ವ, ಸ್ವಾತಂತ್ರ್ಯ ಹೋರಾಟಕ್ಕೆ ಎಲ್ಲಾ ರಾಷ್ಟ್ರಗಳು ಪುಷ್ಠಿ ನೀಡಿದವು, ಇದಕ್ಕೆ ಜಗತ್ತಿನ ಎಲ್ಲಾ ರಾಷ್ಟ್ರ ಸಾಮಾಜಿಕ, ಧಾರ್ಮೀಕ, ರಾಜಕೀಯ ಸುಧಾರಕರ, ಚಿಂತಕರ ಹಾಗೂ ಸಾಮಾಜಿಕ ನ್ಯಾಯಪರ ಹೋರಾಟಗಾರರ ತ್ಯಾಗಗಳೆ ಸಾಕ್ಷಿಯಾಗಿವೆ.

ಸಾಮಾಜಿಕ ನ್ಯಾಯದ ಅರ್ಥ:

ಸಾಮಾಜಿಕ ನ್ಯಾಯ ಎಂಬ ಪದದ ಬಗ್ಗೆ ನಿರ್ದಿಷ್ಟ ಅರ್ಥ ವ್ಯಾಖ್ಯಾನವಿಲ್ಲ. ಆದರು ಸಹ ಇದಕ್ಕೆ ಅರ್ಥ ಕಂಡುಕೊಳ್ಳುವ ಪ್ರಯತ್ನವಾಗಿದೆ. **"ಸಮಾಜದ ಅವಕಾಶ ವಂಚಿತ ಎಲ್ಲಾ ಜನರಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವುದರ ಮೂಲಕ ಅವರ ಶ್ರೇಯಾಭಿವೃದ್ಧಿಗೆ ಶ್ರಮಿಸುವುದನ್ನು ಸಾಮಾನ್ಯವಾಗಿ ಸಾಮಾಜಿಕ ನ್ಯಾಯ"**ವೆಂದು ವ್ಯಾಖ್ಯಾನಿಸಬಹುದಾಗಿದೆ.

ಸಾಮಾಜಿಕ ನ್ಯಾಯ ಎಂಬುದು ಅತ್ಯಂತ ವಿಸ್ತಾರವಾದ ಅರ್ಥವುಳ್ಳಂತಹ ಪದವಾಗಿದೆ. ಇದು **ಸಮಾಜದ ಎಲ್ಲ ಸದಸ್ಯರುಗಳ ಸಾಮಾಜಿಕ ಕಲ್ಯಾಣದ ಗುರಿಯನ್ನು ಹೊಂದಿದೆ.** ಅನೇಕ ಚಿಂತಕರು ಸಾಮಾಜಿಕ ಪಿಡುಗುಗಳ ನಿರ್ಮೂಲನೆಗಾಗಿ ಧ್ವನಿ ಎತ್ತಿದ್ದು, ಸಾಮಾಜಿಕ ನ್ಯಾಯ ಎಂದರೆ **"ಸಮಾಜದಲ್ಲಿನ ಎಲ್ಲರೂ ಸಮಾನರು"** ಎಂದರ್ಥ. **'**ಸಮಾಜದಲ್ಲಿ ಯಾವುದೇ ರೀತಿಯ ಜಾತಿ, ಧರ್ಮ, ವರ್ಣ, ಲಿಂಗದ ಆಧಾರದ ಮೇಲೆ ಭೇದ ಅಥವಾ ಪಕ್ಷಪಾತ ಮಾಡಬಾರದಾಗಿದ್ದು, ಎಲ್ಲರು ಎಲ್ಲಾ ರೀತಿಯಾದ ಅವಕಾಶಗಳನ್ನು ಪಡೆಯಲು, ಅವರವರ ಇಷ್ಟಾನಿಷ್ಟಗಳನ್ನು ಪೂರೈಸಿಕೊಳ್ಳಲು ಸರ್ವ ಸ್ವತಂತ್ರರಿದ್ದಾರೆ**'** ಈ ಎಲ್ಲಾ ಬೇಡಿಕೆಗಳನ್ನು ಯಾರಿಗೂ ಸಹ ವಂಚಿಸದೇ ಸಮಾನತೆಯನ್ನು ಕಾಯ್ದುಕೊಳ್ಳುವುದು ಪ್ರಭುತ್ವದ ಆದ್ಯ ಕರ್ತವ್ಯವಾಗಿರುತ್ತದೆ. ಪ್ರಭುತ್ವವು ಈ ಭೂಮಿ ಮೇಲಿರುವ ಒಂದು ಸಣ್ಣ ನರಮಾನವನನ್ನು ಸಹ ಭಿನ್ನಬೇಧವ ಮಾಡದೇ ಯಾವುದು ಯಾರಿಗೇ ಸಲ್ಲಬೇಕೋ ಅದನ್ನು ದಕ್ಕಿಸಿಕೊಡುವುದು ಪ್ರಭುತ್ವದ ಜವಾಬ್ದಾರಿಯಾಗಿದೆ. ಹೀಗೆ ಎಲ್ಲರಿಗೂ ಸಾಮಾಜಿಕ ನ್ಯಾಯವನ್ನು ಹೊಂದುವ ಹಕ್ಕಿದ್ದು, ಮೇಲಿನ ಕಾರಣಗಳ ಆಧಾರದ ಮೇಲೆ ಪಕ್ಷಪಾತ ಮಾಡಿದರೆ ಅದು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದುದು ಎಂದರ್ಥವಾಗುತ್ತದೆ. ಜೊತೆಗೆ ಸಾಮಾಜಿಕ ನ್ಯಾಯಕ್ಕೆ ಬಗೆದ ದ್ರೋಹ ಕೂಡ ಆಗುತ್ತದೆ. ಆದ್ದರಿಂದ, **ಸಾಮಾಜಿಕ ನ್ಯಾಯವೆಂದರೆ:**[1]

- ಜಾತಿ, ವರ್ಣ, ಧರ್ಮ, ಜನಾಂಗ, ಲಿಂಗದ ಆಧಾರವನ್ನು ಇಟ್ಟುಕೊಂಡು ಪಕ್ಷಪಾತತೆ ಮಾಡುವುದಕ್ಕೆ ವಿರೋಧವಾದುದಾಗಿದೆ.
- ಸಮಾಜದ ಪ್ರತಿಯೊಬ್ಬ ಪ್ರಜೆಯ ಅಭಿವೃದ್ಧಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವುದು.
- ವ್ಯಕ್ತಿಯು ವ್ಯಕ್ತಿಯನ್ನು, ವರ್ಗವು ವರ್ಗವನ್ನು ಶೋಷಿಸುವುದನ್ನು ನಿಷೇಧಿಸುವುದು.
- ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ರಕ್ಷಿಸುವುದು.
- ಸಮಾಜದಲ್ಲಿ ಹಿಂದುಳಿದ ವರ್ಗಗಳು, ದುರ್ಬಲ ವರ್ಗದವರು, ನಿರ್ಲಕ್ಷಿತ ವರ್ಗಗಳ ಹಿತಾಸಕ್ತಿಗಳನ್ನು ರಕ್ಷಿಸುವುದು.
- ಕೆಲಸಗಾರರು ಕಾರ್ಯನಿರ್ವಹಿಸುವ ಸ್ಥಳದಲ್ಲಿ ಸರಿಯಾದ ಪರಿಸ್ಥಿತಿಯನ್ನು ನಿರ್ಮಿಸುವುದು.
- ಸಾರ್ವಜನಿಕ ಸ್ಥಳಗಳನ್ನು ಉಪಯೋಗಿಸುವುದನ್ನು ಕುರಿತಂತೆ ಪಕ್ಷಪಾತತೆ ಮಾಡದಿರುವುದು.
- ವಯೋವೃದ್ಧರು, ಮಹಿಳೆಯರು ಮತ್ತು ಮಕ್ಕಳಿಗೆ ವಿಶೇಷ ರಕ್ಷಣೆಯನ್ನು ನೀಡುವುದು.
- ಸಹನೆಯ ತತ್ವವನ್ನು ಅನುಸರಿಸುವುದು.
- ಅಸ್ಪೃಷ್ಯತೆಯನ್ನು ನಿಷೇಧಿಸುವುದು
- ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಡುವುದು. ಈ ಮೇಲಿನ ಹನ್ನೊಂದು ಅಂಶಗಳ ಆಧಾರದ ಮೇಲೆ ವಿವಿಧ ವಿದ್ವಾಂಸರು, ಪ್ರಗತಿಪರ ಚಿಂತಕರು, ಬುದ್ಧಿಜೀವಿಗಳು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಸಂಗ್ರಹಿಸಿ ಕ್ರೂಢೀಕರಿಸಲಾಗಿದೆ.

ನವ ಉದಾರವಾದಿ ಚಿಂತಕ ಹಯಾಸ್ ಎಂಬುವವರ ಪ್ರಕಾರ: ಸಾಮಾಜಿಕ ನ್ಯಾಯವೆಂದರೆ ಅದೊಂದು ಬಹಳ ಗೊಂದಲಪೂರಿತವಾದ ಅಂಶ ಎಂಬುದಾಗಿ ತಿಳಿಸಿದ್ದಾರೆ. ಏಕೆಂದರೆ ಅದು ಯಾರಿಗೂ ಕೂಡ ಗೋಚರಿಸುವುದಿಲ್ಲ ಬೇರೆ ಬೇರೆ ಕಾಲಘಟ್ಟಗಳ ಸಂದರ್ಭಗಳಲ್ಲಿ ಬೇರೆ ಬೇರೆ ಆಯಾಮಗಳನ್ನು ತೆರೆದುಕೊಳ್ಳುತ್ತದೆ.

ಜಾಟರವರು ಎಂಬ ಭಾರತೀಯ ಸಂಶೋಧಕರ ಪ್ರಕಾರ:[2] ಜಾತಿಯ ಬಗ್ಗೆ ವಿಮರ್ಶೆ ಮಾಡಿದ್ದಾರೆ, ಜಾತಿ ವ್ಯವಸ್ಥೆ ಯಾವಾಗ ಇತ್ತು ಎಂದರೆ ಋಗ್ವೇದದ ಕಾಲದಿಂದಲೂ ಇತ್ತು ಎನ್ನುತ್ತಾರೆ. ಬಹಳ ಮುಖ್ಯವಾಗಿ ಇಂಡಿಯಾದ ಕಾಂಟೆಕ್ಸ್ಟ್‌ನಲ್ಲಿ ಲೇಟಿನ್ ವೇಧಿಕ್ ಪಿರಡ್‌ನಲ್ಲಿ ಬಂತು ಎಂಬುದು. ಆದರೆ ಜಾಟರವರು ವೇಧಿಕ್ ಕಾಲದ ಆರಂಭದ

---

[1] ಡಾ.ಸುರೇಶ್ ಕೆ. ಜೆ (2014) ಸಮಕಾಲೀನ ರಾಜಕೀಯ ಸಿದ್ಧಾಂತ, ಚೇತನ ಬುಕ್ ಹೌಸ್, ಮೈಸೂರು. ಪು.ಸಂ.121

[2] ಪ್ರೊ. ಮುಜಾಫರ್ ಅಸ್ಸಾದಿಯವರ (27-02-2020) ಸಂದರ್ಶನ ಮಾಹಿತಿ

ಕಾಲದಲ್ಲಿತ್ತು ಎನ್ನುತ್ತಾರೆ. ಜಾಟರು ಕೂಡ ಜಾತಿಯನ್ನು ಸಾಮಾಜಿಕ ನ್ಯಾಯದ ಪರಿಕಲ್ಪನೆಯ ದೃಷ್ಟಿಯಲ್ಲಿ ನೋಡುತ್ತಾರೆ. ಇವರು ಮುಖ್ಯವಾಗಿ ಹೇಳುವುದೇನೆಂದರೆ ಜಾತಿ ಒಂದು ಸಾಮಾಜಿಕ ನ್ಯಾಯದ ಸಾಮಾಜಿಕ ಚೌಕಟ್ಟನ್ನು ನಿರ್ಮಿಸಿತ್ತು ಎಂದು ಹೇಳುತ್ತಾರೆ. ಇದರ ಮೂಲಕ ಇತಿಹಾಸಕ್ಕೆ ಮರಳಿರುವುದನ್ನು ಮನಗಾಣಬಹುದಾಗಿದೆ.

ಅಮರ್ತ್ಯಸೇನ್‌ರವರ ಪ್ರಕಾರ: ಐಡಿಯಾ ಆಫ್ ಜಸ್ಟೀಸ್‌ನಲ್ಲಿ ಪ್ರತಿಯೊಂದು ಜಾತಿ, ಸಮುದಾಯಕ್ಕೆ ತನ್ನದೇ ಆದಂತಹ ಪರಿಕಲ್ಪನೆ ಇದೆ. ಸಮಾನತೆಯನ್ನು ಕಾಯ್ದುಕೊಳ್ಳುವ ಹಕ್ಕುಗಳನ್ನೆ ಸಾಮಾಜಿಕ ನ್ಯಾಯ ಎನ್ನುತ್ತಾರೆ. ಈ ಮೂಲಕ ವಾಸ್ತವವಾಗಿ ಜಾನ್‌ರಾಲ್ಸ್‌ನ ಥಿಯರಿ ಆಫ್ ಜಸ್ಟೀಸ್‌ನ್ನು ಮತ್ತು ರ್‍ಯಾಷಿನಲ್ ಥಿಯರಿಯನ್ನು ಕ್ರಿಟಿಸೈಸ್ ಮಾಡುತ್ತಾರೆ.

ಗಜೇಂದ್ರ ಗಟಾ ಮುಖ್ಯ ನ್ಯಾಯಾಧೀಶರ ಪ್ರಕಾರ: ಸಾಮಾಜಿಕ ನ್ಯಾಯ ಎಂಬುದು ಪ್ರಜಾಪ್ರಭುತ್ವದ ಬುನಾಧಿ ಅಂದರೆ ಪ್ರತಿಯೊಬ್ಬ ವ್ಯಕ್ತಿಗೂ ನ್ಯಾಯವನ್ನು ಒದಗಿಸಿ ಕೊಡಬೇಕೆಂದು ಹೇಳುತ್ತಾರೆ.

ವಾಸ್ತವವಾಗಿ ಸಾಮಾಜಿಕ ನ್ಯಾಯದ ಪರಿಕಲ್ಪನೆ ಹುಟ್ಟಿದ್ದು 1845ರ ಯೂರೋಪಿಯನ್ ಸಂದರ್ಭದಲ್ಲಿ ಕಾರ್ಲ್‌ಮಾರ್ಕ್ಸ್‌ರ ಪುಸ್ತಕ ಫಿಲಾಸಫಿಕಲ್ ಕಮ್ಯೂನಿಸ್ಟ್ ಮಾನಿಪೆಸ್ಟೋ1848 ಮತ್ತು ಇಂಡಸ್ಟ್ರೀಯಲ್ ರೆವ್ಯೂಲೂಷನ್, ಸೋಷಿಯಲ್ ಜಸ್ಟೀಸ್ ಐಡಿಯಾಲಜಿಗಳು ಹ್ಯೂಮನ್ ಥಿಯರಿ ಪಾಶ್ಚಮಾತ್ಯ ದೇಶದ ಓಟಿನ ಥಿಯರಿ, **ಸಮಾಜವಾದಿಗಳ ಅಥವಾ ಮಾರ್ಕ್ಸ್ ಪ್ರಕಾರ ಸಾಮಾಜಿಕ ನ್ಯಾಯವೆಂದರೆ:** ವರ್ಕಿಂಗ್ ಕ್ಲಾಸ್ (ಶ್ರಮಿಕ ವರ್ಗ) ಪರವಾಗಿ ಬಂಡವಾಳಶಾಹಿ ಸಮಸ್ಯೆಯ ಸಂದರ್ಭದಲ್ಲಿ ವರ್ಗಗಳು ಯಾಕೆ ವಂಚಿತವಾಗುತ್ತವೆ ಎಂದರೆ 1 ವ್ಯವಸ್ಥೆಯನ್ನು ಪಲ್ಲಟ ಮಾಡಿವುದು, 2.ಅಧಿಕಾರವನ್ನು ಸ್ಥಾನಮಾನವನ್ನು ಕೊಟ್ಟು ಅವರನ್ನು ಗುರುತಿಸಿಬೇಕು ಅಥವಾ ಅವರವರಲ್ಲಿರುವ ವರ್ಗಬೇಧವನ್ನು ಕಡಿಮೆ ಮಾಡಬೇಕು ಎಂಬುದಾಗಿದೆ.

ಜೆ.ಎಸ್.ಮಿಲ್ ಮತ್ತು ಬೆಂಥ್ಯಾಮ್‌ನ ಯುಟಿಲಿಟೇರಿಯನ್‌ನ ವಾದ ತುಷ್ಟೀಕರಣದವಾದ ಕೂಡ ಸಾಮಾಜಿಕ ನ್ಯಾಯಪರವಾಗಿತ್ತು. ಎಂಬುದು ವಿಶೇಷವಾದದ್ದು.

ಹಯಾಸ್ ಮತ್ತು ನೊಜಿಕ್‌ನ ನಿಯೋ ಲಿಬರಿಟೇರಿಯನ್‌ನ ವಾದವು ಕೂಡ ಸಾಮಾಜಿಕ ನ್ಯಾಯವನ್ನು ಪ್ರತಿಪಾಧಿಸುತ್ತದೆ. **ರಾಲ್ಸ್‌ನ ಥಿಯರಿ ಆಫ್ ಜಸ್ಟೀಸ್‌ನಲ್ಲಿ** ಜನಸಾಮಾನ್ಯನ ಹಕ್ಕು ಮತ್ತು ಸ್ವತಂತ್ರ್ಯದ ಬಗ್ಗೆ ತಿಳಿಸುತ್ತದೆ. ಆದರೆ ಭಾರತದ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ತಂದಾಗ ಅದು ಜಾತಿಯನ್ನು ಕೂಡ ಮುಂಚೂಣಿಗೆ ತಂದಿತು. ಏಕೆಂದರೆ ಭಾರತದಲ್ಲಿ ಜಾತಿಯನ್ನು ಬಿಟ್ಟು ಏನನ್ನು ಸಹ ಪ್ರತಿಪಾದನೆ ಮಾಡಲು ಅಸಾಧ್ಯವಾಗಿದೆ. ಭಾರತದ ಪ್ರಜಾಪ್ರಭುತ್ವ ರೂಪುಗೊಂಡಿರುವುದೇ ಈ ಜಾತಿವ್ಯವಸ್ಥೆಯ ಆಧಾರದ ಮೇಲೆ ಆದ್ದರಿಂದ ಈ ಸಾಮಾಜಿಕ ನ್ಯಾಯವು ವೈರುದ್ಯಗಳಿದ ಕೂಡಿದೆ.

"ಸಾಮಾಜಿಕ ನ್ಯಾಯಕ್ಕಾಗಿ ಡಾ. ಅಂಬೇಡ್ಕರ್ ಎಸ್ಸಿ–ಎಸ್ಟಿ ಮತ್ತು ಇತರೆ ಹಿಂದುಳಿದ ವರ್ಗಗಳು ಒಟ್ಟಾಗಿ ರಾಜಕೀಯ ಅಧಿಕಾರ ಇಡಿಯಬೇಕೆಂದಿದ್ದರು ಆದರೆ ಒಬಿಸಿಗಳು ಎಸ್ಸಿ–ಎಸ್ಟಿಗಳನ್ನು ಸಹೋಧರರಾಗಿ ಭಾವಿಸದೇ ಇದ್ದದ್ದು ಸಹ ಅಹಿಂದದ ತಾತ್ವಿಕ ವಿಫಲತೆಗೆ ಕಾರಣವಾಗಿದೆ. ಇದರಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಪ್ರತ್ಯೇಕವಾಗಿ ಇರಲಿಲ್ಲ ಒಬಿಸಿ ಪಟ್ಟಿಯಲ್ಲಿಯೇ ಇದ್ದುದ್ದರಿಂದ ಅಹಿಂದದ ಪರಿಕಲ್ಪನೆಯನ್ನು ಸ್ವಾತಂತ್ರ ಪೂರ್ವ ಮತ್ತು ಸಂವಿಧಾನದ ಜಾರಿಯ ಸಂದರ್ಭದಲ್ಲೇ ಅಹಿಂದದ ಪ್ರಸ್ತುತತೆ ಬಗ್ಗೆ ಅಂಬೇಡ್ಕರ್ ಒಲವು ಒಂದಿದ್ದರು." ಏಕೆಂದರೆ ಈ ಶೂದ್ರ ಜಾತಿಗಳೆಲ್ಲವೂ ಒಂದು ವರ್ಗವಾಗಿ ಅಧಿಕಾರಸ್ಥರಾಗಲೆಂದು[3]

ನ್ಯಾ. ಹೆಚ್.ಎನ್. ನಾಗಮೋಹನ ದಾಸ್:[4] ಸಾಮಾಜಿಕ ನ್ಯಾಯವೆಂದರೆ ಹಿಂದುಳಿದವರ, ಬಡವರ, ದುರ್ಬಲರ, ತುಳಿತಕ್ಕೆ ಮತ್ತು ಶೋಷಣೆಗೆ ಒಳಪಟ್ಟ ಅಸಹಾಯಕರನ್ನು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಮೇಲೆ ತರಲು ಶಾಸನಗಳನ್ನು, ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ರೂಪಿಸಿ ಅವುಗಳನ್ನು ಜಾರಿಗೊಳಿಸುವುದು. ಆ ಮೂಲಕ ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವುದು. ಕಳೆದ 70 ವರ್ಷಗಳ ಸ್ವತಂತ್ರ ಭಾರತದಲ್ಲಿ ಸಾಮಾಜಿಕ ನ್ಯಾಯ ಸಾಧಿಸಲು ಹಲವು ಶಾಸನಗಳನ್ನು ಮತ್ತು ಕಾರ್ಯಕ್ರಮಗಳನ್ನು ತಂದು ಒಂದಷ್ಟು ಸುಧಾರಣೆಯಾಗಿದೆ. ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ, ಮಹಿಳೆಯರ, ವಿಕಲಚೇತನರ, ವೃದ್ಧರ ಬಡವರ, ಇತ್ಯಾದಿ ವಿಭಾಗದ ಬದುಕು ಸ್ವಲ್ಪ ಮಟ್ಟಿಗೆ ಸುಧಾರಣೆಯಾಗಿದೆ.

---

[3] ಹೆಚ್.ಸಿ ಮಹದೇವಪ್ಪ ಮಾಜಿ ಸಚಿವರು, ಕರ್ನಾಟಕ ಸರ್ಕಾರ, ಸಂದರ್ಶನದ ಮಾಹಿತಿ.

[4] ನಾಗಮೋಹನ ದಾಸ್ ಎಚ್.ಎನ್.(2018) "ಸಂವಿಧಾನ ಓದು" ಸಹಯಾನ, ಉತ್ತರಕನ್ನಡ.ಪು.ಸಂ.66-67.

ಶಾಸನಕಾಂಗದಲ್ಲಿ, ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡುವುದು ಸಾಮಾಜಿಕ ನ್ಯಾಯದ ಒಂದು ಭಾಗ ಮಾತ್ರ. ಆದರೆ ಮೀಸಲಾತಿ ಒಂದೇ ಸಾಮಾಜಿಕ ನ್ಯಾಯವಲ್ಲ. ಎಲ್ಲಾ ರೀತಿಯ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯನ್ನು ತರುವುದೇ ಸಾಮಾಜಿಕ ನ್ಯಾಯದ ಗುರಿ. ದುಡಿಮೆಗೆ ಸಮನಾದ ಪ್ರತಿಫಲ ನೀಡುವುದು, ಜನರ ಕನಿಷ್ಠ ಅಗತ್ಯತೆಗಳನ್ನು ಪೂರೈಸುವುದು ಸಹ ಸಾಮಾಜಿಕ ನ್ಯಾಯ ಎಂದಿದ್ದಾರೆ.

ಸಂಶೋಧನೆಯ ಸೈದ್ಧಾಂತಿಕ ಚೌಕಟ್ಟಿನ ಹಿನ್ನೆಲೆ: ಸಾಮಾಜಿಕ ಸಂಶೋಧನೆಯಲ್ಲಿ ಒಂದು ನಿರ್ದಿಷ್ಟವಾದ ವಸ್ತುವಿಷಯದ ಬಗ್ಗೆ ಸೈದ್ಧಾಂತಿಕ ಚೌಕಟ್ಟನ್ನು ನಿರ್ಮಿಸಿಕೊಳ್ಳುವುದು ವಾಡಿಕೆ. ಅದರಂತೆ "ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ' ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ" ಎಂಬಂತಹ ಸಂಶೋಧನಾ ವಸ್ತುವಿಷಯವು ತನ್ನದೇ ಆದ ನಿರ್ದಿಷ್ಟವಾದ ಸೈದ್ಧಾಂತಿಕ ಚೌಕಟ್ಟನ್ನು ಒಳಗೊಂಡಿದೆ. ಇದು ಮಾನವ ಜೀವಿತದ ಇತಿಹಾಸ ಪೂರ್ವಕಾಲದಿಂದಲೂ ಭಾರತವನ್ನು ಒಳಗೊಂಡಂತೆ ಸಮಕಾಲಿನ ಜಗತ್ತಿನಲ್ಲಿ ಅತ್ಯಂತ ಚರ್ಚಿತ ವಿಷಯವಾದ **'ಸಾಮಾಜಿಕ ನ್ಯಾಯ'**ದ ಅಂತರಾಳದ ವಸ್ತುವಿಷಯವಾದ **"ರಾಜಕೀಯ ಸಾಮಾಜಿಕರಣ"**ದ ಮೂಲವಸ್ತುವಾಗಿದೆ. ಜೊತೆಗೆ ಸಾಂವಿಧಾನಿಕ ಮೂಲ ಆಶಯವೂ ಕೂಡ ಆಗಿರುವ **'ಸಾಮಾಜಿಕ ನ್ಯಾಯ, ವಿತರಣಾತ್ಮಕ ನ್ಯಾಯ'**ದ ಜಾರಿಯಲ್ಲಿ ಮೇರುಸ್ಥಾನವನ್ನು ಹೊಂದಿರುವ ಸಾಂವಿಧಾನಿಕ–ಸಾಮಾಜಿಕ–ರಾಜಕಾರಣಕ್ಕೆ ಸಂಬಂಧಿಸಿದಂತೆ, ಸಾಮಾಜಿಕ ನ್ಯಾಯದ **ಸೈದ್ಧಾಂತಿಕ ಮಾದರಿಗಳನ್ನು** ಹಾಗೂ ಸಾಮಾಜಿಕ ನ್ಯಾಯವನ್ನು ಕುರಿತು ಭಾರತೀಯ ಹಾಗೂ ವಿದೇಶಿ ಚಿಂತಕರು ಮತ್ತು ವಿದ್ವಾಂಸರ ಅಭಿಪ್ರಾಯಗಳನ್ನು ಮುಂದೆ ಸಂಗ್ರಹಿಸಿ ಚರ್ಚಿಸಲಾಗಿದೆ.

ಗೌತಮ ಬುದ್ಧ ಮತ್ತು ಸಾಮಾಜಿಕ ನ್ಯಾಯ: ಪ್ರಜಾಪ್ರಭುತ್ವ ಪ್ರಾರಂಭವಾದುದ್ದು ಬುದ್ಧರಿಂದ ಸಮಾನತೆ, ಸ್ವಾತಂತ್ರ್ಯ, ಬ್ರಾತೃತ್ವ, ನ್ಯಾಯ ಈ ನಾಲ್ಕು ಆಧಾರಸ್ತಂಭಗಳನ್ನು ಇಡೀ ಜಗತ್ತಿಗೆ ನೀಡಿದ ಕೀರ್ತಿ ಬುದ್ಧರಿಗೆ ಸಲ್ಲುತ್ತದೆ. ಇದು ಬುದ್ಧನ ಅಹಿಂಸಾತ್ಮಕ ಕ್ರಾಂತಿಯಿಂದ ಸಿಕ್ಕಿರುವಂತಹ ಮಾನವೀಯ ಮೌಲ್ಯಗಳಾಗಿವೇ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಾಗಿವೆ. ಹಾಗಾಗಿ, ಇಂಗ್ಲೆಂಡಿಗೆ 18ನೇ ಶತಮಾನದಲ್ಲಿ ಪ್ರಜಾಪ್ರಭುತ್ವ ಲಭಿಸಿದ್ದರೆ ಬುದ್ಧ 2500 ವರ್ಷಗಳ ಹಿಂದೆಯೇ ಇಡೀ ಜಗತ್ತಿಗೆ ಪ್ರಜಾಪ್ರಭುತ್ವವನ್ನು ಬೋಧಿಸಿದ್ದಾರೆ. ಆ ಮೂಲಕ ಸಾಮಾಜಿಕ ನ್ಯಾಯ ಬೋಧಿಸಿದ ಮೊಟ್ಟ ಮೊದಲ ದಾರ್ಶನಿಕರಾಗಿದ್ದಾರೆ. "ಧರ್ಮ ಇರುವುದು ಮನುಷ್ಯನಿಗಾಗಿ, ಮನುಷ್ಯ ಇರುವುದು ಧರ್ಮಕ್ಕಾಗಿ ಅಲ್ಲ" ಎಂದಿದ್ದಾರೆ.

ಬಸವಣ್ಣ ಮತ್ತು ಸಾಮಾಜಿಕ ನ್ಯಾಯ: ಭಾರತದಲ್ಲಿ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯದ ಭದ್ರಬುನಾದಿ ಹಾಕಿದ್ದು ಕರ್ನಾಟಕದಲ್ಲಿ. ಈ ಪರಿಕಲ್ಪನೆ 12ನೇ ಶತಮಾನದ ಕ್ರಾಂತಿ ಜ್ಯೋತಿ ಬಸವಣ್ಣನವರ ಕೊಡುಗೆಯಾಗಿದೆ. ಅಲ್ಲದೆ ಇಡೀ ಜಗತ್ತಿಗೆ 2ನೇ ಬಾರಿ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯ ಸ್ಥಾಪಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಮೊದಲನೆ ಸ್ಥಾನ ಗೌತಮ ಬುದ್ದರ 'ಮಹಾಮನೆ'ಯಾಗಿದೆ. ಈ ಬಸವೇಶ್ವರರು ತಮ್ಮ 'ಅನುಭವ ಮಂಟಪ'ದಲ್ಲಿ ಎಲ್ಲಾ ವರ್ಗದ ಜನರಿಗೆ ಜಾತಿ, ಧರ್ಮ, ಲಿಂಗದ ತಾರತಮ್ಯ ಮಾಡದೆ ಲಿಂಗಧಾರಣೆ ಮಾಡಿ ಸಮಾನತೆ ಬೋಧಿಸಿದರು. ಹಾಗೂ ಅಂತರ್ಜಾತಿ ವಿವಾಹ, ಮಾಡಿಸಿ ಕ್ರಾಂತಿ ಕಹಳೆ ಮೊಳಗಿಸಿದರು. ಮತ್ತು ಮೂಢನಂಬಿಕೆ ವಿರುದ್ದ ಸಿಡಿದೆದ್ದು ಜನಪರ ವ್ಯಕ್ತಿಯಾಗಿ "ಇವನಾರವ, ಇವನಾರವ, ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯ, ಕೂಡಲ ಸಂಗಮ ದೇವಾ, ನಿಮ್ಮ ಮನೆಯ ಮಗನೆಂದೆನಿಸೆಯ್ಯ" ಎಂದು ಭೋದಿಸಿದರು. ಎಂದು ಚೇತನ್ ಹೇಳುತ್ತಾರೆ.[5]

ಸರ್ವಜ್ಞ ಮತ್ತು ಸಾಮಾಜಿಕ ನ್ಯಾಯ: ತ್ರಿಪದಿಗಳ ಮೂಲಕ ಇಡೀ ಸಮಾಜದ ಅಂಧತ್ವವನ್ನು ಕಂದಾಚಾರವನ್ನು ಹಾಗೂ ಮೂಢನಂಬಿಕೆಯನ್ನು ಬುಡಸಮೇತ ಕಿತ್ತೊಗೆಯಲು ಸಹಕಾರಿಯಾಗಿದೆ. !ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೆ ಜಾತಿ–ವಿಜಾತಿ ಎನಬೇಡ ದೇವ ನೊಲಿದಾತನೆ ಜಾತ ಸರ್ವಜ್ಞ![6] ಎಂದು ಜಾತಿಯ ಕೊಂಪೆಯಲಿ ಬಿದ್ದು ಬದುಕುವ ಮನುಷ್ಯರ ಮನೆಯಲ್ಲಿ ಜ್ಞಾನದ ಜ್ಯೋತಿ (ಬೆಳಕು) ಇರುವುದಿಲ್ಲ ಎಂದು ಜನರನ್ನು ಎಚ್ಚರಿಸಿದ್ದಾರೆ.

ಜ್ಯೋತಿಬಾ ಮತ್ತು ಸಾವಿತ್ರಿ ಬಾಫುಲೆ ಮತ್ತು ಸಾಮಾಜಿಕ ನ್ಯಾಯ: ಭಾರತದಲ್ಲಿ ಸಾಮಾಜಿಕ ನ್ಯಾಯದ ನಿಜವಾದ ಹರಿಕಾರರೆಂದರೆ, ಜ್ಯೋತಿ ಬಾಫುಲೆ ಮತ್ತು ಪತ್ನಿ ಸಾವಿತ್ರಿ ಬಾಫುಲೆಯವರು. ಇವರು ಇಡೀ ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ, ದಲಿತರಿಗೆ, ತಳ ಸಮುದಾಯಗಳಾದ ಹಿಂದುಳಿದವರಿಗೆ, ಶಿಕ್ಷಣ ನೀಡಿದ ಕೀರ್ತಿ ಈ ದಂಪತಿಗೆ

---

[5] ಚೇತನ್ ಅಹಿಂಸಾರವರ (25-02-2020) ಸಂದರ್ಶನ ಮಾಹಿತಿ

[6] ಶಂಕರ್ ರಾವ್ ಚ.ನ (2013) "ಸಾಮಾಜಿಕ ಚಿಂತನೆಯ ಅಧ್ಯಯನ. ಪು.ಸಂ. ೬೫.

ಸಲ್ಲುತ್ತದೆ. 1848ರಲ್ಲಿ ಶೂದ್ರಾತಿ ಶೂದ್ರ ಹೆಣ್ಣುಮಕ್ಕಳಿಗೆ ಶಾಲೆಯನ್ನು ತೆರೆದು ಸಾಮಾಜಿಕ ಕ್ರಾಂತಿ ಮಾಡಿದರು. ನಂತರ 1882ರಲ್ಲಿ ಹಂಟರ್ ಕಮೀಷನ್ ಮುಂದೆ ದೀನ ದಲಿತರ ಬೇಡಿಕೆಗಳಾದ ಉಚಿತ ಶಿಕ್ಷಣ, ಸ್ಕಾಲರ್‌ಶಿಫ್, ಹಾಸ್ಟೆಲ್ ಮತ್ತು ರೈತರಿಗೆ ಭದ್ರತೆ, ಒದಗಿಸಿದರು. ಹಾಗೂ 1873ರಲ್ಲಿ ಸತ್ಯಶೋಧಕ ಸಮಾಜ ಸ್ಥಾಪಿಸಿ, ವರ್ಣವ್ಯವಸ್ಥೆ, ಮೂರ್ತಿಪೂಜೆ ಹಾಗೂ ಕುಲಕಸುಬುಗಳಿಗೆ ವಿರೋಧ ಮಾಡಿದರು. ಸಮಾಜದಲ್ಲಿ ಸಮಾನತೆಗಾಗಿ ಹಲವು ಕಾರ್ಯಕ್ರಮ ಹಾಕಿಕೊಂಡು ಸಾಮಾಜಿಕ ಪರಿವರ್ತನೆ ರಥವನ್ನು ಎಳೆದರು.[7]

ನಾರಾಯಣ ಗುರು ಮತ್ತು ಸಾಮಾಜಿಕ ನ್ಯಾಯ. ಕೇರಳದಲ್ಲಿ ಸಾಮಾಜಿಕವಾಗಿ ಬೇರೂರಿದ್ದ ಅಸಮಾನತೆ ಮತ್ತು ಅಸ್ಪೃಶ್ಯತೆ, ಗುಲಾಮಗಿರಿಯ ವಿರುದ್ಧ ಹಾಗೂ ಪುರೋಹಿತ ಶಾಹಿಯಿಂದಾಗುತ್ತಿದ್ದ ಅನ್ಯಾಯವನ್ನು ಸರಿಪಡಿಸಿ ಸಮಾಜದಲ್ಲಿ ಸಮಾನತೆಯನ್ನು ತರಲು ಪಯತ್ನಿಸಿದ ಫಲವೇ ಸಾಮಾಜಿಕ ನ್ಯಾಯ. ಏಕೆಂದರೆ ಅವರು ಬೋಧಿಸಿದ "ಒಂದೇ ಜಾತಿ, ಒಂದೇ ಮತ, ಒಂದೇ ದೇವರು" ಎಂದು ಎಂದು ಹೇಳುವ ಮೂಲಕ ವೈಚಾರಿಕ ಕ್ರಾಂತಿ ಮೂಡಿಸಿದರು, ಜೊತೆಗೆ ದಲಿತರ ಬೀದಿಯಲ್ಲಿ ದೇವಸ್ಥಾನವನ್ನು ಕಟ್ಟಿಸಿ ಪುರೋಹಿತರ ಬದಲು ದಲಿತರ ಕೈಲಿ ಮಂತ್ರ ಪಠಿಸಿದರು, ಅಲ್ಲದೇ ನೂರಾರು ದೇವಸ್ಥಾನವನ್ನು ದಲಿತ ಬೀದಿಯಲ್ಲಿ ಸ್ಥಾಪಿಸುವುದರ ಮೂಲಕ ಎಲ್ಲರೂ ಸಮಾನರು ಎಂದು ತಿಳಿಸಿ ಸಾಮಾಜಿಕ ನ್ಯಾಯ ಒದಗಿಸಿಕೊಟ್ಟರು.

ಪೆರಿಯಾರ್ ಮತ್ತು ಸಾಮಾಜಿಕ ನ್ಯಾಯ: ದ್ರಾವಿಡ ಜನಾಂಗದ ಸ್ವಾಭಿಮಾನದ ಸಾಂಕೇತವಾಗಿ ಪೆರಿಯಾರ್ ರಾಮಸ್ವಾಮಿ ನಾಯ್ಕರು ಇದ್ದಾರೆ. ಭಾರತದಲ್ಲಿ ಇದ್ದ ಅನ್ಯಾಯ, ದಬ್ಬಾಳಿಕೆ, ಮೌಢ್ಯದ ವಿರುದ್ಧ ಹೋರಾಟ ನಡೆಸಿದರು. ದೇವಸ್ಥಾನ ಪ್ರವೇಶ ಮತ್ತು ಜಾತಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಜಾರಿಯಾಗಬೇಕೆಂದು ಹೇಳಿದರು. ಸ್ವಾಭಿಮಾನದ ಚಳುವಳಿಯ ಮೂಲಕ ದೇವರು, ಧರ್ಮ, ಕಾಂಗ್ರೆಸ್, ಗಾಂಧಿ ಮತ್ತು ಬ್ರಾಹ್ಮಣ ವಿರೋದಿ ಚಳುವಳಿ ಮಾಡಿದರು. ಮೌಢ್ಯ ನಿವಾರಣೆಯ ಪ್ರತೀಕವಾಗಿ 1927ರಲ್ಲಿ ಮನುಸ್ಮೃತಿಯನ್ನು ಸುಡಲಾಯಿತು. ಬ್ರಾಹ್ಮಣರ ಜುಟ್ಟು ಜನಿವಾರಗಳನ್ನು ಕತ್ತರಿಸುವ ಚಳುವಳಿ ಮುಂತಾದವುಗಳಿಂದ ತಮ್ಮದೇ ಆದ ಕೊಡುಗೆಯನ್ನು ಸಾಮಾಜಿಕ ನ್ಯಾಯಕ್ಕಾಗಿ ನೀಡಿದ್ದಾರೆ.

ಛತ್ರಪತಿ ಶಾಹು ಮಹಾರಾಜ್ ಮತ್ತು ಸಾಮಾಜಿಕ ನ್ಯಾಯ: ಸಾಮಾಜಿಕ ಪ್ರಜಾಪ್ರಭುತ್ವದ ರೂವಾರಿ ಎಂದೇ ಪ್ರತಿಬಿಂಬಿತರಾಗಿರುವ ಶಾಹು ಮಹಾರಾಜರು ಇಡೀ ಭಾರತದಲ್ಲೇ ಮೊಟ್ಟ ಮೊದಲ ಬಾರಿಗೆ ತಮ್ಮ ರಾಜ್ಯದಲ್ಲಿ ಮೀಸಲಾತಿ ನೀಡಿ ಪ್ರಜೆಗಳೇ ಪ್ರಭುಗಳೆಂದರು ಮತ್ತು ಅಸ್ಪೃಶ್ಯರು ಮತ್ತು ಹಿಂದುಳಿದವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿ ನೀಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕೊಲ್ಲಾಪುರದಲ್ಲಿ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಕಾನೂನನ್ನು ಜಾರಿಗೆ ತಂದು, ಅಸ್ಪೃಶ್ಯರಿಗೆ ಪ್ರತ್ಯೇಕ ಶಾಲೆ ತೆರೆದು ಹಾಸ್ಟೆಲ್ ವ್ಯವಸ್ಥೆ ಮಾಡಿದರು. ಹಾಗೂ ಸಾಮಾಜಿಕ ಸುಧಾರಣೆಗಳಾದ, ವಿಧವಾ ಪುನರ್ ವಿವಾಹ, ಶಾಹು ಸತ್ಯ ಶೋಧಕ ಸಮಾಜ; 1919ರಲ್ಲಿ ಅಂತರ ಜಾತಿ ವಿವಾಹ ಕಾಯ್ದೆ ಮತ್ತು ಅಂಬೇಡ್ಕರ್‌ಗೆ ವಿದೇಶ ವ್ಯಾಸಂಗಕ್ಕೆ ಸಹಾಯ ಮಾಡಿದರು. ಭೂ ಹೀನರಿಗೆ ಉಚಿತವಾಗಿ ಭೂಮಿಯನ್ನು ಸಹ ಹಂಚಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸಾಮಾಜಿಕ ನ್ಯಾಯ: ದಕ್ಷಿಣ ಭಾರತ ಅಥವಾ ಮೈಸೂರು ಪ್ರಾಂತ್ಯದ ಸಾಮಾಜಿಕ ಪರಿವರ್ತನೆಯ ರೂವಾರಿ ಆದ ಇವರು 1918ಲ್ಲಿ ಮಿಲ್ಲರ್ ಸಮಿತಿ ನೇಮಿಸಿ ಎಲ್ಲಾ ಸಮುದಾಯದ ಜನರಿಗೆ ಸರ್ಕಾರಿ ಉದ್ಯೋಗದಲ್ಲಿ ಪ್ರಾತಿನಿಧ್ಯ ದೊರಕುವಂತೆ ಮಾಡಿದರು ಮತ್ತು 1921ರಲ್ಲಿ ಪ್ರಥಮ ಬಾರಿಗೆ ಎಲ್ಲಾ ಹಿಂದುಳಿದ ಸಮುದಾಯಗಳಿಗೆ ಶೇ.75ರಷ್ಟು ಮೀಸಲಾತಿ ನೀಡಿದರು ಆ ಮೂಲಕ ಬ್ರಾಹ್ಮಣೇತರ ಚಳುವಳಿಗಳಿಂದಾಗಿ ಹಿಂದುಳಿದವರಿಗೆ ರಾಜಕೀಯ ಅಧಿಕಾರ ದೊರೆಯಲು ಕಾರಣಕರ್ತರಾದರು. ಬುಡಕಟ್ಟು ಅರಣ್ಯ ವಾಸಿಗಳಿಗೆ, ಸ್ತ್ರೀಯರಿಗೆ ಶಿಕ್ಷಣ ನೀಡಿದರು, ಆರ್ಥಿಕ ಸುಧಾರಣೆಗಳ ಜೊತೆಗೆ ಕೈಗಾರಿಕಾಭಿವೃದ್ಧಿ ಮಾಡಿ ಮಾದರಿ ಸಂಸ್ಥಾನವನ್ನಾಗಿ ಮಾಡಿದರು. ಈ ಮೂಲಕ ಸಮಾನತೆಯ ರಾಜ್ಯವಾಗಿ ಪರಿವರ್ತಿಸಿದರು.

ರಾಜಾರಾಮ್ ಮೋಹನ್ ರಾಯ್ ಮತ್ತು ಸಾಮಾಜಿಕ ನ್ಯಾಯ: ರಾಜಾರಾಮ್ ಮೋಹನ್ ರಾಯ್ ರವರು ಭಾರತದಲ್ಲಿ ಸಾಮಾಜಿಕ ಸುಧಾರಣೆಯ ಕಟ್ಟಾಳುಗಳಾಗಿ ಇದ್ದವರು. ಇವರ ಸಾಮಾಜಿಕ ಸುಧಾರಣಾ ಅಂಶಗಳಾದ ಮೌಢ್ಯತೆ, ಅಂಧಕಾರ, ಮತ್ತು ಸಾಮಾಜಿಕ ಪಿಡುಗುಗಳಾದ ಸತಿ ಪದ್ಧತಿ, ಪರ್ದಾ ಪದ್ಧತಿ, ಬಾಲ್ಯ ವಿವಾಹ, ದೇವದಾಸಿ

---

[7] ಎನ್. ಮಹೇಶ್ (06-03-2020) ವಿಧಾನಸಭಾ ಅಧಿವೇಶನದ ಸಂವಿಧಾನದ ಮೇಲಿನ ಚರ್ಚೆಯ ಮಾಹಿತಿ

ಪದ್ಧತಿಗಳ ವಿರುದ್ಧ ಜಾಗೃತಿ ಮೂಡಿಸಲು ಪ್ರಯತ್ನಿಸಿದರು, ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಸಾಮಾಜಿಕ ಸುಧಾರಣೆಗಾಗಿ ಬ್ರಹ್ಮ ಸಮಾಜ ಸ್ಥಾಪಿಸಿದರು.

ಗಾಂಧಿ ಮತ್ತು ಸಾಮಾಜಿಕ ನ್ಯಾಯ: ಮಹಾತ್ಮ ಗಾಂಧಿಯವರು ಭಾರತದಲ್ಲಿ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯದ ಕಟ್ಟಾ ಬೆಂಬಲಿಗರಾಗಿದ್ದಾರೆ. "ದೇಶದ ಆರ್ಥಿಕ ಸ್ವಾತಂತ್ರಗಳಿಸುವುದಕ್ಕೆ ಚರಕ ಹೇಗೆ ಸಾಧನವೊ ಹಾಗೆಯೇ, ಸಮಾಜದ ಉನ್ನತಿಯ ಸಾಧನೆಗೆ ಅಸ್ಪೃಶ್ಯತಾ ನಿವಾರಣೆ ಬೀಗದ ಕೈ ಎಂದು ಘೋಷಿಸಿದ್ದಾರೆ. ಆ ಮೂಲಕ ಸಮಾನತೆ ಸಾರಿದರು ಮತ್ತು ಅಂತರತೆಯನ್ನು ಸಡಿಲಗೊಳಿಸುವ ಕಾರ್ಯ ಮಾಡಿದ್ದರು. ಅಸ್ಪೃಶ್ಯರನ್ನು ಶ್ರೀಹರಿಯ ಮಕ್ಕಳೆಂದು ಕರೆದರು, ಕೃಷಿಕರು ಹಾಗೂ ಕುಶಲ ಕರ್ಮಿಗಳ ದುಡಿಮೆಯೇ ಸಾರ್ಥಕ ದುಡಿಮೆ ಎಂದರು ಹಾಗೂ ದಲಿತರು ಮೊದಲು ಶಿಕ್ಷಣ ಕಲಿಯಬೇಕು ಆ ಮೂಲಕ ಅಭಿವೃದ್ಧಿ ಕಾಣಬೇಕು, ಹರಿಜನೋದ್ಧಾರ ಕುರಿತು ಹಲವು ಕಾರ್ಯಕ್ರಮಗಳನ್ನು ಮಾಡಿದರು. ರಾಮ ರಾಜ್ಯದ ಕನಸು ಹಾಗೂ ಹಳ್ಳಿಗಳ ಉದ್ಧಾರ, ಗಾಂಧಿಯ ಕನಸಾಗಿತ್ತು. ಆ ಮೂಲಕ ಗ್ರಾಮ ಸ್ವರಾಜ್ ಕಲ್ಪನೆಯ ಮೂಲಕ ಭಾರತದ ಪ್ರತಿಹಳ್ಳಿಯ ಎಲ್ಲಾ ನಗರದ ಜನರ ಅಭಿವೃದ್ಧಿಗೆ ಮೀಸಲಿಡಬೇಕು ಆ ಮೂಲಕ ಸಮ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಕರೆಕೊಟ್ಟಿದ್ದಾರೆ.[8]

ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರಕಾರ ಸಾಮಾಜಿಕ ನ್ಯಾಯ: ವಿಶ್ವಜ್ಞಾನಿ ಮತ್ತು ಆಧುನಿಕ ಭಾರತದಲ್ಲಿ ಸಾಮಾಜಿಕ ನ್ಯಾಯವನ್ನು ಸ್ಥಾಪನೆ ಮಾಡಿದವರಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಒಬ್ಬ ಮೇರು ವ್ಯಕ್ತಿತ್ವವುಳ್ಳ ಮಹಾನ್ ಮಾನವತಾವಾದಿಯಾಗಿದ್ದಾರೆ. ಅವರೇ ಹೇಳುವಂತೆ, "ಸಾಮಾಜಿಕ ನ್ಯಾಯ"ವೆಂದರೆ ಎಲ್ಲಾ ಮಾನವರ ನಡವಳಿಕೆಯಲ್ಲಿ ಸ್ವತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ತತ್ವಗಳು ಅಡಗಿರಬೇಕೆಂದು ಹೇಳಿದ್ದಾರೆ. ಮತ್ತು ಎಲ್ಲಾ ತರಹದ ಅಸಮಾನತೆ ಹೋಗಲಾಡಿಸುವುದಾಗಿರುತ್ತದೆ. ಅಂದರೆ ಜಾತಿ, ಮತ, ಲಿಂಗ, ಅಧಿಕಾರ, ಧರ್ಮ ಸಂಪತ್ತಿನ ಅಸಮಾನತೆಯಿಂದ ಸಮಾನತೆ ತರುವುದು, ಆ ಮೂಲಕ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಅವಕಾಶ ವಂಚಿತ ಸಮುದಾಯಗಳನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲುದಾರರನ್ನಾಗಿ ಮಾಡಲು ಶ್ರಮಿಸುವುದೇ ಸಾಮಾಜಿಕ ನ್ಯಾಯ' ಮತ್ತು One man, One Vote, – One Value ಎಂಬುದಾಗಿ ಸಂವಿಧಾನದಲ್ಲಿ ಬಾಬಾ ಸಾಹೇಬರು ಎಲ್ಲಾ ಭಾರತೀಯರು ಒಂದೆ ಎಂದು ಸಾಮಾಜಿಕ ನ್ಯಾಯ ನೀಡಿದ್ದಾರೆ. ಮತ್ತು ಜನವರಿ 26, 1950ರಂದು ಸಂವಿದಾನ ಬರೆದು ಸಮರ್ಪಿಸುವ ಸಂದರ್ಭದಲ್ಲಿ "ಹಿಂದುಳಿದ ಜಾತಿಗಳು, ದಲಿತರು ಮತ್ತು ಧಾರ್ಮಿಕ ಅಲ್ಪ ಸಂಖ್ಯಾತರು ಈ ದೇಶದ ಬಹು ಸಂಖ್ಯಾತರಾಗಿರುವುದರಿಂದ ನೀವೆ ಒಂದು ಸ್ವತಂತ್ರ ರಾಜಕೀಯ ಶಕ್ತಿಯಾದರೆ, ಸರ್ಕಾರ ನಿಮ್ಮ ಕೈಗೆ ಬರುತ್ತದೆ. ಆಗ ಸಂವಿದಾನ ಬದ್ಧವಾಗಿ ನೀವು ನಿಮ್ಮ, ಸಾಮಾಜಿಕ, ಆರ್ಥಿಕ ಸಮಾನತೆಯನ್ನು ಗಳಿಸಿಕೊಳ್ಳುವ ಮೂಲಕ ದೇಶದ ಸಮಗ್ರತೆ, ಐಕ್ಯತೆ ಮತ್ತು ಸಾರ್ವಭೌಮತೆಯನ್ನು ಕಾಪಾಡಬಹುದೆಂದು, ಇದನ್ನೆಲ್ಲಾ ದೇಶದ ಪ್ರಜೆಗಳೆಲ್ಲರು ಸಾಧಿಸಬೇಕು, ಇದೇ ಸಂವಿಧಾನದ ಆಶಯವು ಕೂಡ ಆಗಿದೆ" ಎಂದು ಹೇಳಿದ್ದಾರೆ.

ರಾಮ್ ಮನೋಹರ್ ಲೋಹಿಯಾ ಮತ್ತು ಸಾಮಾಜಿಕ ನ್ಯಾಯ: ಭಾರತದಲ್ಲಿ ಲೋಹಿಯಾ ಚಳುವಳಿಯು ಇಡೀ ಭಾರತದ ಒಂದು ಪರಿವರ್ತನೀಯ ಭಾಗವಾಗಿತ್ತು. ಅವರು ಸಂಪತ್ತಿನ ಹಂಚಿಕೆ ಪರವಾದ ನಿಲುವುಗಳು ಕ್ರಾಂತಿಕಾರಕವಾಗಿತ್ತು. ಜಾತಿ ನಾಶದ ಬಗ್ಗೆ ತುಂಬ ಕುತೂಹಲ ಹೊಂದಿದ್ದ ಲೋಹಿಯರವರು ಭಾರತ ಹಿಂದುಳಿಯಲು ಜಾತಿ ವ್ಯವಸ್ಥೆಯೇ ಕಾರಣವೆಂದು ತಿಳಿಸಿದರು. ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾಜವಾದದ ಪ್ರತಿಪಾದಕರಾಗಿದ್ದರು. ಜಾತಿ ಪದ್ಧತಿಯು ನಮ್ಮ ರಾಷ್ಟ್ರದ ಅಭಿವೃದ್ಧಿಗೆ ಮಾರಕ ಎಂದು ಹೇಳುತ್ತಿದ್ದರು. ಮಾರ್ಕ್ಸ್ ಚಿಂತನೆಯ ಸಮಾಜವಾದ ಸ್ಥಾಪನೆ ಅವರ ಆಶಯವಾಗಿತ್ತು.

ಜಾನ್‌ರಾಲ್ಸ್ ಪ್ರಕಾರ ಸಾಮಾಜಿಕ ನ್ಯಾಯ: "ದೇಶದ ಸಂಪತ್ತು ಉದ್ಯೋಗವಕಾಶಗಳು ಸಂಪನ್ಮೂಲಗಳು, ಸರಕು ಮತ್ತು ಸೇವೆಗಳು ಎಲ್ಲ ಪ್ರಜೆಗಳಿಗೂ ಸಮಾನವಾಗಿ ಹಂಚಿಕೆಯಾಗುವುದೇ ನ್ಯಾಯ: ಅಂತಹ ವ್ಯವಸ್ಥೆಯೇ ನಿಜವಾದ ಪ್ರಜಾ ಪ್ರಭುತ್ವ. ಸಮಾಜದ ಕಟ್ಟಕಡೆಯ ಶೋಷಿತ ಜನರಿಗೆ ಸಮಾನವಾದ ಹಕ್ಕುಗಳನ್ನು, ಅವಕಾಶಗಳನ್ನು, ಆರೋಗ್ಯವನ್ನು ನೀಡಿ ಅವರ ಸಬಲೀಕರಣಕ್ಕೆ ವಿಶೇಷ ನೀತಿ ನಿಯಮಗಳನ್ನು ರೂಪಿಸುವುದರ ಮೂಲಕ ಅವರ ಹಕ್ಕು ಮತ್ತು ಸ್ವಾತಂತ್ರ್ಯ, ಅವಕಾಶ, ಆರೋಗ್ಯ, ಜೀವನದ ಭದ್ರತೆಯನ್ನು ಕಲ್ಪಿಸುವುದರ ಮೂಲಕ ಅವರ ಏಳಿಗೆಗೆ ಶ್ರಮಿಸುವುದೇ ಸಾಮಾಜಿಕ ನ್ಯಾಯ.

---

[8] ಪ್ರೊ. ವಲೇರಿಯನ್ ರೋಡ್ರಿಗಸ್ (17-01-2020)) jnu-ಪ್ರಖ್ಯಾತ ರಾಜಕೀಯ ವಿಜ್ಞಾನಿಗಳ ಸಂದರ್ಶನ ಮಾಹಿತಿ

ಮಾರ್ಟಿನ್ ಲೂಥರ್ ಕಿಂಗ್ ಮತ್ತು ಸಾಮಾಜಿಕ ನ್ಯಾಯ.: ಜಗತ್ತು ಕಂಡಂತಹ ನಾಗರೀಕ ಹಕ್ಕುಗಳ ಹೋರಾಟಗಾರರಲ್ಲಿ ಮತ್ತು ಗುಲಾಮಗಿರಿಯ ವಿರುದ್ದ ಹೋರಾಟ ಮಾಡಿದವರಲ್ಲಿ ಅಗ್ರಗಣ್ಯ ನಾಯಕರಾಗಿ ಮಾರ್ಟಿನ್ ಲೂಥರ್‌ಕಿಂಗ್ ಕಂಡುಬರುತ್ತಾರೆ. ಜನಾಂಗೀಯ ಭಿನ್ನತೆ ಮತ್ತು ಬಡವರನ್ನು ಹಾಗೂ ಮೂಲ ನಿವಾಸಿಗಳು ಗುಲಾಮರಾಗಿದ್ದು ಎಲ್ಲಾ ಅವಕಾಶಗಳಿಂದ ವಂಚಿತರಾಗಿದ್ದರು. ಈ ಗುಲಾಮರನ್ನು 2ನೇ ದರ್ಜೆಯ ಪ್ರಜೆಗಳನ್ನಾಗಿ ಕಾಣುತ್ತಿದ್ದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಆರ್ಥಿಕವಾಗಿ ಹಾಗೂ ವರ್ಣದ ಆಧಾರದ ಗುಲಾಮರನ್ನಾಗಿ ಮಾಡಿಕೊಂಡಿದ್ದ ಯೂರೋಪಿನಲ್ಲಿ ಹಾಗೂ ಲ್ಯಾಟಿನ್ ಅಮೇರಿಕ–ಆಫ್ರಿಕ ಭಾಗದಲ್ಲಿ ಗುಲಾಮ ಗಿರಿಯಿಂದ ಜನರಿಗೆ ಸಾಮಾಜಿಕ ನ್ಯಾಯಯುತವಾದ ಸ್ವತಂತ್ರ್ಯದ ಬಗ್ಗೆ ಕಲ್ಪನೆ ಮೂಡಿಸಿ ಎಲ್ಲರಂತೆ ಗುಲಾಮರಲ್ಲೂ ಸ್ವಾಭಿಮಾನ ಆತ್ಮಾಭಿಮಾನದಿಂದ ಬದುಕಲು ಆತ್ಮಸ್ಥೈರ್ಯ ತುಂಬಿ ಸರ್ವ ಸ್ವತಂತ್ರರಾಗಿ ಜೀವಿಸುವಂತೆ ಮತ್ತು ಸಾಮಾಜಿಕ ನ್ಯಾಯದ ಅಡಿಯಲ್ಲಿ ಸಮಾನತೆಯನ್ನು ಬೋಧಿಸಿ ಜಗತ್ತಿನಾದ್ಯಂತ ಜಾಗೃತಿ ಮಾಡಿದ ಮಹಾನ್ ಮಾನವತಾವಾದಿ.[9]

ಅಬ್ರಹಾಂ ಲಿಂಕನ್ ಮತ್ತು ಸಾಮಾಜಿಕ ನ್ಯಾಯ.: ಅಮೇರಿಕಾದಲ್ಲಿ ವರ್ಣಭೇಧ ನೀತಿ, ಗುಲಾಮಗಿರಿ, ಜನಾಂಗೀಯ ಭಿನ್ನತೆಯ ವಿರುದ್ಧ ಸಮಾನತೆಗಾಗಿ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿ ಅಬ್ರಹಾಂ ಲಿಂಕನ್‌ರವರು. ಲಿಂಕನ್ ಪ್ರಜಾಪ್ರಭುತ್ವ ಮಾದರಿಗೆ ಹೊಸ ಆಯಾಮವನ್ನು ನೀಡಿದವರು ಜೊತೆಗೆ ನಾಗರೀಕ ಜನರ ಹಕ್ಕುಗಳಿಗಾಗಿ ವಿಶೇಷವಾಗಿ ಗುಲಾಮಗಿಯ ಮೂಲಕ ಕರಿಯರನ್ನು ಅಮೆರಿಕಾದಲ್ಲಿ ಜೀವನದ ಎಲ್ಲಾ ರಂಗದಲ್ಲಿ ವಂಚಿತರನ್ನಾಗಿ ಮಾಡಲಾಗಿತ್ತು. ಅಸಮಾನತೆಯ ವಿರುದ್ಧ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿ ನ್ಯಾಯ ಒದಗಿಸಿದರು.

ನೆಲ್ಸನ್ ಮಂಡೇಲಾ ಮತ್ತು ಸಾಮಾಜಿಕ ನ್ಯಾಯ.: ಕಪ್ಪು ಎಂಬ ಕಾರಣಕ್ಕೆ ಬಿಳಿಯರಿಂದ ವಂಚನೆಗೆ, ಜನಾಂಗಿಯ ದೌರ್ಜನ್ಯಕ್ಕೆ ಬಲಿಯಾಗಿದ್ದ ಕಪ್ಪು ವರ್ಣಿಯರಿಗೆ ಸಾಮಾಜಿಕ ನ್ಯಾಯ ನೀಡಿದ್ದೇ ಮಂಡೇಲಾರು. ದಕ್ಷಿಣ ಆಫ್ರಿಕದಲ್ಲಿ ವರ್ಣಬೇಧ ನೀತಿಯ ವಿರುದ್ಧ ಹೋರಾಡಿದ ಹಾಗೂ ಕಪ್ಪು ಎಂಬ ಕಾರಣಕ್ಕೆ ಎಲ್ಲಾ ಅವಕಾಶಗಳಿಂದ ವಂಚಿತರಾಗಿದ್ದ ಕಪ್ಪು ಜನಾಂಗಕ್ಕೆ ಧ್ವನಿ ನೀಡಲು ಸಾಮಾಜಿಕ ಸಮಾನತೆಯನ್ನು ತರಲು ಹೋರಾಡಿ ಕಪ್ಪುವರ್ಣೀಯರಿಗೆ ಸ್ವಾಭಿಮಾನ ಕಲ್ಪಿಸಿಕೊಟ್ಟ ಮಾನವತಾವಾದಿ ನೆಲ್ಸನ್ ಮಂಡೇಲಾರವರು ಕಪ್ಪು ಬಣ್ಣದ ಸಂಕೇತವಾಗಿ ಕಂಡುಬಂದಿದ್ದಾರೆ.

ಕಾಂಗ್ರೆಸ್ ಮತ್ತು ಸಾಮಾಜಿಕ ನ್ಯಾಯ: ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದ ಕಾಂಗ್ರೆಸ್ ದೇಶವನ್ನು ದಾಸ್ಯದಿಂದ ಮುಕ್ತಿಗೊಳಿಸಲು ಹಾಗೂ ಸಾಮರಸ್ಯ ಹಾಗೂ ಸಾಮಾಜಿಕ ನ್ಯಾಯದಿಂದ ಎಲ್ಲರೂ ಒಟ್ಟಾಗಿ ಸಹಬಾಳ್ವೆ ಮಾಡುವು ಉದ್ದೇಶವನ್ನು ಹೊಂದಿತ್ತು ಎಂಬುದಾಗಿ ರಮೇಶ್‌ಕುಮಾರ್ ಇತಿಹಾಸಕ್ಕೆ ಹಿಂದಿರುಗುತ್ತಾರೆ.[10] ಭಾರತದಲ್ಲಿ ಸ್ವತಂತ್ರ ಪೂರ್ವದಿಂದಲೂ ಕಾಂಗ್ರೆಸ್ ಪಕ್ಷ 'ಅಹಿಂದ' ಸಮುದಾಯಗಳ ಏಳಿಗೆಗಾಗಿ ಮತ್ತು ಅಭಿವೃದ್ಧಿಗಾಗಿ ದುಡಿಯುತ್ತಿರುವ ಪಕ್ಷವಾಗಿ, ಭಾರತವನ್ನು ಒಂದು ನಿಟ್ಟಿನಲ್ಲಿ ಪರಿವರ್ತನೆ ಮತ್ತು ಅಭಿವೃದ್ಧಿಯತ್ತಾ ಸಾಗಲು ನೇರ ಕಾರಣವಾಗಿದೆ. ನಮಗೆ ಸ್ವಾತಂತ್ರ್ಯ ಬಂದು 7 ದಶಕಗಳು ಕಳೆದಿವೆ ದೇಶವನ್ನು ಸರಿ ಸುಮಾರು 50ಕ್ಕೂ ಅಧಿಕ ವರ್ಷ, ಕಾಂಗ್ರೆಸ್ ಆಳ್ವಿಕೆ ನಡೆಸಿದೆ. ಇದರಲ್ಲಿ ದಲಿತರು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಇವರ ಆಧಾರದ ಮೇಲೆ ಈ ಪಕ್ಷ ನಿಂತಿದ್ದು, ಇವರ ಅಭಿವೃದ್ಧಿಗಾಗಿ ಹಲವಾರು ಜನಪ್ರಿಯ ಕಾರ್ಯಕ್ರಮಗಳನ್ನು ರೂಪಿಸಿ ಈ ಸಮುದಾಯಗಳ ಬೆಳವಣಿಗೆಗೆ ಪರೋಕ್ಷವಾಗಿ ಕಾರಣವಾಗಿದೆ. ಆ ಮೂಲಕ ಸಾಮಾಜಿಕ ನ್ಯಾಯ ಎತ್ತಿಹಿಡಿದಿದೆ. ಜೊತೆಗೆ ಇತ್ತೀಚೆಗೆ ಸಾಮಾಜಿಕ ನ್ಯಾಯವೇ ಇದರ ಅಜೆಂಡಾವನ್ನಾಗಿಸಿಕೊಂಡಿದೆ. ಈ ಮೂಲಕ ಪ್ರಗತಿಪರವಾದ, ತಳ ಸಮುದಾಯಗಳ, ಮತ್ತು ಅಲ್ಪಸಂಖ್ಯಾತರ ಪರವಾದ ತಮ್ಮ ಅಹಿಂಸಾತ್ಮಕ ಸಿದ್ಧಾಂತದಿಂದ ಈ 'ಅಹಿಂದ' ಸಮುದಾಯಗಳನ್ನು ಸಬಲೀಕರಣಗೊಳಿಸುವತ್ತಾ ಹೆಜ್ಜೆ ಇಡುತ್ತಿರುವುದನ್ನು ಕಾಣಬಹುದಾಗಿದೆ.

ಸಾಮಾಜಿಕ ನ್ಯಾಯದ ವಿತರಣೆಗಾಗಿ ಸಂವಿಧಾನಾತ್ಮಕ ರಕ್ಷಣೆ ಮತ್ತು ಅವಕಾಶಗಳು: ಭಾರತದಲ್ಲಿ ಸಂವಿಧಾನ ಜಾರಿಗೆ ಬಂದು 70 ವರ್ಷಗಳು ಸಂದಿವೆ. ಈ ಸಂವಿಧಾನದ ಮೂಲ ಆಶಯವಾದ ಸಾಮಾಜಿಕ ನ್ಯಾಯ ಮಾತ್ರ ಇನ್ನು ಜಾರಿಯಾಗಿಲ್ಲ ಜೊತೆಗೆ ನಿಗೂಡವಾಗಿದೆ. ಕಾರಣ, ಸಂವಿಧಾನದ ಆಶಯಗಳನ್ನು ಯಥಾವತ್ತಾಗಿ ಜಾರಿ ಮಾಡುವ ಜಾಗದಲ್ಲಿ ಇಚ್ಛಾ ಶಕ್ತಿ ಧೋರಣೆಯ ಸರ್ಕಾರಗಳು ಇಲ್ಲದಿರುವಿಕೆಯೇ ಆಗಿದೆ. ಭಾರತ ಸಂವಿಧಾನದ ಮೂಲ ಆಶಯ ಅಥವಾ ಅಜೆಂಡವಾದ ಸಾಮಾಜಿಕ ನ್ಯಾಯವನ್ನು ಆಳುವ ಸರ್ಕಾರಗಳು ತಮ್ಮ ಕರ್ತವ್ಯಗಳಾಗಿ ಮಾರ್ಪಡಿಸುವಲ್ಲಿ ವಿಫಲವಾಗಿವೆ. ಮತ್ತು ನಮ್ಮ ಸಂವಿಧಾನವನ್ನು ನಿಜಾರ್ಥದಲ್ಲಿ ಜಾರಿಗೊಳಿಸುವ ಅನಿವಾರ್ಯತೆ

---

[9] ಚೇತನ್ ಅಹಿಂಸಾರವರ(25-02-2020) ಸಂದರ್ಶನ ಮಾಹಿತಿ

[10] ಕೆ.ಆರ್. ರಮೇಶ್‌ಕುಮಾರ್ (05-03-2020) ವಿಧಾನಸಭಾ ನಡಾವಳಿಯ ಸಂವಿಧಾನದ ಮೇಲಿನ ಚರ್ಚೆಯ ಮಾಹಿತಿ.

ಕೂಡ ಇದೆ. ಇದನ್ನು ನಮ್ಮನ್ನಾಳುವ ಪ್ರಭುಗಳು ಅರ್ಥಮಾಡಿಕೊಳ್ಳಬೇಕಿದೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ **ಪ್ರಜೆಗಳೇ ಪ್ರಭುಗಳು** ಇದನ್ನು ಗಮನದಲ್ಲಿಟ್ಟುಕೊಂಡು ಆಳ್ವಿಕೆ ನಡೆಸಿದರೆ ಸಂವಿಧಾನದ ಸಾರ್ಥಕ ಜಾರಿ ಮಾಡಿದಂತೆಯೇ ಸರಿ! ಹಾಗಾಗಿ ಭಾರತದ ಸಂವಿಧಾನದಲ್ಲಿ ಭಾರತೀಯ ಪ್ರಜೆಗಳೆಲ್ಲರು ಒಂದೇ ಎಂಬ ಅರ್ಥದಲ್ಲಿ ನಿರೂಪಿಸಲಾಗಿದೆ. ನಮ್ಮ ಸಂವಿಧಾನದ ಪ್ರಕಾರ ಯಾವೊಬ್ಬ ವ್ಯಕ್ತಿ ಕೂಡ ದೊಡ್ಡವರಲ್ಲ ಎಲ್ಲರು ಸಮಾನರು ಎಂದು ಹೇಳುತ್ತದೆ. ಆ ಕಾರಣಕ್ಕಾಗಿ ವೋಟು ನೀಡುವ ಹಕ್ಕನ್ನು ನೀಡಿದೆ. One man, One Vote, – One Value ಅಂದರೆ ಒಬ್ಬ ವ್ಯಕ್ತಿಗೆ ಒಂದೇ ಮತ ಆ ಮತಕ್ಕೆ ಒಂದೇ ಮೌಲ್ಯ ಹಾಗಾಗಿ ರಾಷ್ಟ್ರಪತಿ ಮತ್ತು ಸಾಮಾನ್ಯ ನಾಗರಿಕನ ಮಧ್ಯೆ ವ್ಯತ್ಯಾಸ ಗುರ್ತಿಸಲು ಸಾಧ್ಯವಿಲ್ಲದಾಗಿದೆ.[11]

ಭಾರತದಲ್ಲಿ ಸಂವಿಧಾನದ 14ನೇ ವಿಧಿ, ಕಾನೂನಿನ ಮುಂದೆ ಇಡೀ ಭಾರತೀಯರೆಲ್ಲರು ಒಂದೇ ಎಂದು ಹೇಳುತ್ತದೆ. ಸಂವಿಧಾನದ 12 ರಿಂದ 35 ವಿಧಿಗಳು ಇಡೀ ಭಾರತದ ಎಲ್ಲಾ ಪ್ರಜೆಗಳಿಗೂ ಒಂದೇ ರೀತಿಯಾದ ಮೂಲಭೂತ ಹಕ್ಕುಗಳನ್ನು ನೀಡಿದೆ. ಆ ಮೂಲಕ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುತ್ತದೆ. ಇದರಲ್ಲಿ ಯಾವುದೇ ಜಾತಿ, ಧರ್ಮ, ವರ್ಣ, ಲಿಂಗ ಪಂಥಗಳ ಭೇದ ಮಾಡದೆ ಇಡೀ ಭಾರತೀಯ ಪ್ರಜೆಗಳೆಲ್ಲರು ಒಂದೇ ಎಂದು ಹೇಳುತ್ತದೆ. ಎಸ್ಸಿ ಮತ್ತು ಎಸ್ಟಿ ಗಳಿಗೆ ವಿಶೇಷವಾದ ಪ್ರಾತಿನಿಧ್ಯತೆ ಮತ್ತು ಅವಕಾಶಗಳ ಗುರುತಾಗಿ ಮೀಸಲಾತಿ ನೀಡಿದೆ. ಹಾಗೂ 32ನೇ ವಿಧಿಯು ಕಾನೂನಿನಿಂದ ರಕ್ಷಣೆ ಪಡೆಯಲು ನಾಗರೀಕರಿಗೆ ಅವಕಾಶ ಕಲ್ಪಿಸಿಕೊಟ್ಟಿದೆ. ಆದ್ದರಿಂದ 32 ವಿಧಿಯನ್ನು "ಸಂವಿಧಾನದ ಆತ್ಮ ಮತ್ತು ಹೃದಯ" ಎಂದು ಡಾ. ಅಂಬೇಡ್ಕರ್ ಹೇಳಿರುವುದರಿಂದ ಸಾಮಾಜಿಕ ನ್ಯಾಯದ ವಿತರಣೆ ಮತ್ತು ಪರಿಕಲ್ಪನೆಗೆ ಸಂವಿಧಾನದಿಂದ ಆನೆ ಬಲ ಬಂದಂತೆ ಇರುವುದನ್ನು ಕಾಣಬಹುದು. ಆದ್ದರಿಂದ ನಮ್ಮನ್ನಾಳುವ ಸರ್ಕಾರಗಳಿಗೆ ಸಂವಿಧಾನವು ಒಂದು ಮಾರ್ಗದರ್ಶಿ ಗ್ರಂಥವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

1.3 ಸಂಶೋಧನೆಯ ಸಮಸ್ಯೆ:

'ಧರ್ಮ' ಮತ್ತು **'ಜಾತಿ'**ಯ ಕಾರಣಕ್ಕಾಗಿ ಭಾರತದಲ್ಲಿ ಅಹಿಂದ ವರ್ಗದವರು ಸಾವಿರಾರು ವರ್ಷಗಳಿಂದಲೂ ಜೀವನದ ಎಲ್ಲಾ ರಂಗಗಳಲ್ಲೂ ಒಂದು ಸವಾಲಾಗಿಯೆ (ಹಿಂದುಳಿದಿದ್ದಾರೆ?) ಇದು ನನ್ನ ಸಂಶೋಧನೆಯ ಮುಖ್ಯವಾದ ಸಮಸ್ಯೆಯಾಗಿದೆ. ಅಲ್ಲದೆ ಅಹಿಂದವನ್ನು ಕೇವಲ ರಾಜಕೀಯವಾಗಿ (ಮತ ಬ್ಯಾಂಕಾಗಿ) ಉಪಯೋಗಿಸಿಕೊಳ್ಳಲಾಗುತ್ತಿದೆಯೋ ಹೊರತು ಅಹಿಂದದ ಸಹಸ್ರ ಸಮಸ್ಯೆಗಳನ್ನು ಗೌಣವಾಗಿಸಿದ್ದಾರೆ, ಅಹಿಂದ ಸಮುದಾಯಗಳ ಸಮಗ್ರ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರವನ್ನು ಪ್ರಭುತ್ವ ಕಂಡುಕೊಳ್ಳದೆ ಇರುವುದು ಸಹ ಈ ಸಂಶೋಧನೆಯ ಮತ್ತೊಂದು ಸಮಸ್ಯೆಯಾಗಿದೆ. ಹಾಗೂ ತಮ್ಮ ಎಲ್ಲಾ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ರಾಜಕೀಯ ಅಧಿಕಾರದ ಚುಕ್ಕಾಣಿಯಲ್ಲಿ ಅಡಗಿರುವುದರಿಂದ ಅಹಿಂದವು ಒಗ್ಗಟ್ಟಾಗಿ **"ಬಹುತ್ವದ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ರಾಜಕೀಯ ಶಕ್ತಿಯಾಗಲು ವಿಫಲವಾಗಿರುವುದು ಸಹ ಈ ಸಂಶೋಧನೆಯ ಸಮಸ್ಯೆಯಾಗಿದೆ"**. ಈ ಕಾರಣಕ್ಕಾಗಿಯೇ ಇಪ್ಪತ್ತನೇ ಶತಮಾನದ ಕೊನೆಯ ದಶಕ ಮತ್ತು ಇಪ್ಪತ್ತೊಂದನೇ ಶತಮಾನದ ಮೊದಲ ದಶಕದ ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಒಂದು ಹೊಸ 'ರಾಜಕೀಯ ಅಲೆ' ಸೃಷ್ಟಿಯಾಗಿದ್ದು **"ಅಹಿಂದ"** ಎಂಬ ಸಂಘಟನೆಯಿಂದ. ಇದು ಸಂಭವಿಸಿ, ಸ್ವಲ್ಪ ಹೆಚ್ಚು ಕಡಿಮೆ ಕಾಲು ಶತಮಾನ ಅಥವಾ ಮೂರು ದಶಕಗಳು ಈಗಾಗಲೇ ಕಳೆದಿವೆ. ಈ ದಿನಮಾನಗಳಲ್ಲಿ, ಈ ಸಂಘಟನೆಯ ಇತಿಹಾಸದಲ್ಲಾದ ಬದಲಾವಣೆಗಳೆಂದರೆ, ಕೆಲವು ರಾಜಕಾರಣಿಗಳು ಇದರ ಮೂಲ ಸಂಘಟಕರೂ ತತ್ವಪ್ರತಿಪಾದಕರೂ ಆಗಿ ಅದರ ನೆರಳಲ್ಲಿ ತಮ್ಮ ರಾಜಕೀಯ ಜೀವನವನ್ನು ಕಟ್ಟಿಕೊಳ್ಳುವ ಹಂಬಲದಿಂದ, ಅದಕ್ಕೆ ಕಟಿಬದ್ಧವಾಗಿ ನಿಂತರೆ, ಮತ್ತೆ ಕೆಲವರು ಇದನ್ನು ತೊರೆದು ಹೊರನಡೆದವರೂ ಉಂಟು ತಮ್ಮನ್ನು ಪ್ರಗತಿಪರರರೆಂದು ಕರೆದುಕೊಂಡ ಕೆಲವು ಸಾಹಿತಿಗಳು, ಬುದ್ಧಿ ಜೀವಿಗಳು, ಚಿಂತಕರೂ 'ಸ್ವಯಂಘೋಷಿತ ಅಹಿಂದ ಪ್ರತಿಪಾದಕರು ಎಂಬಂತೆ ತಮ್ಮದೇ ಆದ ದೃಷ್ಟಿಧೋರಣೆಗಳನ್ನೂ ಒಲವು–ನಿಲುವುಗಳನ್ನೂ ಅಹಿಂದದ ಪರವಾಗಿ ನೀಡುತ್ತಾ ಬಂದಿರುವುದು ಸ್ಪಷ್ಟ. ಇಷ್ಟೆಲ್ಲಾ ಇದ್ದಾಗ್ಯೂ, ಅಹಿಂದವು ಒಂದು ನಿರ್ದಿಷ್ಟ, ಅಧಿಕೃತ, ಸಂಘಟನೆಯ ಸ್ವರೂಪವನ್ನು ಪಡೆದೇ ಇಲ್ಲ ಎಂದರೆ ಆಶ್ಚರ್ಯವೆನಿಸಬಹುದು.

ಇದಕ್ಕೆ ನಿರ್ದಿಷ್ಟ ಸದಸ್ಯರೂ, ಕಾರ್ಯಕಾರಿ ಸಮಿತಿ, ಕಚೇರಿ, ತನ್ನದೇ ಆದ ಕಾನೂನು, ಇತ್ಯಾದಿಗಳಿಲ್ಲ. ಅದು ತನ್ನ ಕಾರ್ಯಕ್ಷೇತ್ರ ವ್ಯಾಪ್ತಿ, ಉದ್ದೇಶ–ಗುರಿಗಳನ್ನು ಸ್ಪಷ್ಟವಾಗಿ ಗೊತ್ತುಪಡಿಸಿಕೊಂಡು, "ನಿರ್ದಿಷ್ಟ ನಡೆ"ಗಳಿನ್ನಿಟ್ಟಂತೆ

[11] ಪ್ರೊ. ವಲೇರಿಯನ್ ರೋಡ್ರಿಗಸ್ (17-01-2020)) jnu-ಪ್ರಖ್ಯಾತ ರಾಜಕೀಯ ವಿಜ್ಞಾನಿಗಳ ಸಂದರ್ಶನ ಮಾಹಿತಿ

ಕಾಣುತ್ತಿಲ್ಲ. ಯಾರು 'ಅಹಿಂದ' ಎಂಬ ಪರಿಕಲ್ಪನೆಯನ್ನು ಸೃಷ್ಟಿಸಿ, ಅದನ್ನೊಂದು ಸಂಘಟನೆ ಎಂದು ಆರಂಭಿಸಿದ್ದಾರೋ ಆ ನಾಯಕರೂ ಮತ್ತವರ ಅನುಯಾಯಿಗಳು, ಕೆಲವು ಸಾಹಿತಿ–ಚಿಂತಕರು ಮಾತ್ರ ಅಹಿಂದದ ಬಗ್ಗೆ 'ಅರಿವು' ಉಳ್ಳವರಾಗಿದ್ದಾರೆಯೋ ಹೊರತು, ಆ ನಾಯಕರು ಯಾವ ಜನವರ್ಗಗಳನ್ನು ಈ "ಅಹಿಂದ" ಬಾಹುಳ್ಯದಲ್ಲಿ ಇರುವರೆಂದು ತಿಳಿದಿರುವರೋ ಅಥವಾ ಈ ಸಂಘಟನೆಯೊಳಕ್ಕೆ ತರಬೇಕೆಂದು ಕಲ್ಪಿಸಿಕೊಂಡಿರುವರೋ ಆ ಯಾವ ಜನವರ್ಗವೂ ಕೂಡ 'ನಾವು ಅಹಿಂದ' ಎಂಬ ಸಾಕ್ಷಿಪ್ರಜ್ಞೆಯನ್ನು ಹೊಂದಿಲ್ಲ. ಇಂಥ ಮತ್ತು ಇತರೆ ಅನೇಕ ಕಾರಣಗಳಿಂದಾಗಿ ಅಹಿಂದವು ಒಂದು ರಾಜಕೀಯ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯವಾಗಿಲ್ಲದಿರುವುದು ಸಂಶೋಧನೆಯ ಸಮಸ್ಯೆಯಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನಾ ಸಮಸ್ಯೆಯು ಕೆಲವು ಆಂತರಿಕ–ಬಾಹ್ಯ ಸಮಸ್ಯೆಗಳನ್ನು ಅಹಿಂದ ಚಳುವಳಿಗಾರರ, ಸಂಘಟಕರ, ರಾಜಕೀಯ ನಾಯಕರ ಹಾಗೂ ಪ್ರತಿಪಾದಕರ ಗಮನಕ್ಕೆ ವಿಶ್ಲೇಷಣಾತ್ಮಕವಾಗಿ ಮುಂದಿಡಬಯಸುತ್ತಿದೆ.

1. 'ಅಹಿಂದ'ವು ಪ್ರಸ್ತುತ ಯಾವ ಸ್ವರೂಪದ ಸಂಘಟನೆ ಆಗಿದೆ? ಇನ್ನು ಮುಂದೆ ಇದು ಎಂಥಾ ಸಂಘಟನೆ ಆಗಬೇಕು? ಇದನ್ನೊಂದು ರಾಜಕೀಯ ಶಕ್ತಿಯಾಗಿ ಬೆಳೆಸುವಲ್ಲಿ ಸಂಭವಿಸುವ ಎಡರು ತೊಡರುಗಳೇನು?

2. ಇದರ ಈಗಿನ ಉದ್ದೇಶವೇನು? ಮುಂದೆ ಇದು ಯಾವ ಉದ್ದೇಶ ಗುರಿಗಳನ್ನು ಹೊಂದಬೇಕು?

3. ಇದರ ತತ್ವ ಸಿದ್ಧಾಂತವೇನು? (ಐಡಿಯಾಲಜಿ ಅಥವಾ ಫಿಲಾಸಫಿ) ಮುಂದೆ ಇದು ಇನ್ನೂ ಯಾವ ಸೈದ್ಧಾಂತಿಕ ಆಯಾಮಗಳನ್ನು ಒಳಗೊಳ್ಳಬೇಕು? ಹೀಗೆ ಇಂತಹ ಕೆಲವು ಪ್ರಶ್ನೆಗಳ ಸುತ್ತ ಅಲೋಚಿಸಿ, 'ಅಹಿಂದ'ದ ಅರ್ಥವನ್ನು ವ್ಯಾಖ್ಯಾನಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

1.4 **ಸಮಸ್ಯೆಯ ನಿರೂಪಣೆ:**

ಭಾರತದ ಸಂದರ್ಭದಲ್ಲಿ ಸಾಮಾಜಿಕ ನ್ಯಾಯವನ್ನು ವಿಶ್ಲೇಷಿಸುವುದಾದರೆ ಅಸಮಾನತೆಯ ಸಮಾಜದಲ್ಲಿ ಸಮಾನತೆ ತತ್ವವನ್ನು ಜಾರಿಗೆ ತರಲು ಪ್ರಬಲ ಅಸ್ತ್ರವಾಗಿದೆ. ಅನೇಕ ಕಾರಣಗಳಿಂದ **'ಧರ್ಮ'** ಮತ್ತು **'ಜಾತಿ'**ಯ ಕಾರಣಕ್ಕಾಗಿ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತ ಸಮುದಾಯಗಳು ಅಭಿವೃದ್ಧಿಯ ಮುಖ್ಯವಾಹಿನಿಗೆ ಬಂದಿರಲಿಲ್ಲ ಇಂದಿಗೂ ಕೂಡ, ಹಾಗಾಗಿ ಈ 'ಅಹಿಂದ' ಸಮುದಾಯಗಳು ಸಾವಿರಾರು ವರ್ಷಗಳಿಂದ ಒಂದು ಸವಾಲಾಗಿಯೇ ಇವೆ. ಸ್ವಾತಂತ್ರ್ಯದ ನಂತರ ಸಂವಿಧಾನದ ಜಾರಿಯ ಕಾಂಗ್ರೆಸ್‌ನ 'ಸಾಮಾಜಿಕ ನ್ಯಾಯದ' ನಿಲುವಿನಿಂದಾಗಿ ಹೊಸ ಶಕೆ ಆರಂಭವಾಯಿತು. ಸಂವಿಧಾನತ್ಮಕವಾಗಿ ಕಲ್ಪಸಿರುವ ಅನೇಕ ಅವಕಾಶಗಳನ್ನು ಕಾಂಗ್ರೆಸ್ ಪಕ್ಷದ ಅಧಿಕಾರವಧಿಯಲ್ಲಿ ಅಹಿಂದವನ್ನು ಸಬಲೀಕರಿಸಲು ಕಾರ್ಯ ಸಾಧ್ಯವಾದ ಅನೇಕ ಪ್ರಯತ್ನವನ್ನು ಮಾಡಿರುವುದು ಸಂಶೋಧನೆಯ ಮೇಲ್ನೋಟಕ್ಕೆ ಕಂಡುಬಂದಿದೆ. ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಸಂದರ್ಭದಲ್ಲಿ ಅನೇಕ ನಿದರ್ಶನಗಳನ್ನು ಗುರುತಿಸಬಹುದು.

ಸಾಮಾಜಿಕ ನ್ಯಾಯ ಪರಿಕಲ್ಪನೆಯು ಸ್ವಾತಂತ್ರ್ಯದ ನಂತರ ಅತೀ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಏಕೆಂದರೆ ಸಮಾನತೆಯನ್ನು ದೇಶದಲ್ಲಿ ತರುವುದೇಯಾದರೆ ಬಲಹೀನ, ನಿಮ್ನ ವರ್ಗಗಳನ್ನು ಸಬಲೀಕರಿಸಬೇಕಾದ ಅಗತ್ಯತೆ ಬಹಳ ಇದೆ ಎಂಬುದನ್ನು ಮನಗಂಡ ಆಧುನಿಕ ಸರ್ಕಾರಗಳು ಅಹಿಂದದ ಅಭಿವೃದ್ಧಿಗಾಗಿ ಮತ್ತು ಸಬಲೀಕರಣಕ್ಕಾಗಿ ಅನೇಕ ರೀತಿ ನೀತಿಗಳನ್ನು ಜಾರಿಗೆ ತರುವ ಅನಿವಾರ್ಯತೆಗೆ ಒಳಗಾದವು. ಈ ನಿಟ್ಟಿನಲ್ಲಿ ದೇಶ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ನೇತೃತ್ವದ ಆಡಳಿತವಿದ್ದಾಗ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ನಿಜಾ ಅರ್ಥದಲ್ಲಿ ಅನುಷ್ಠಾನಕ್ಕೆ ತಂದಿರುವುದು ಸಹ ಕಂಡುಬಂದಿದೆ.

ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗ ಮತ್ತು ಬಲಹೀನ ಜಾತಿಗಳ ಸಮಸ್ಯೆಗಳಿಗೆ ಪರಿಹಾರವೆಂಬಂತೆ ಆ ವರ್ಗಗಳಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕಾದದ್ದು ಪ್ರಭುತ್ವದ ಸಾಂವಿಧಾನಿಕ ಕರ್ತವ್ಯ. ಮೈಸೂರು ಸಂಸ್ಥಾನದಲ್ಲಿ ಆ ಬಗ್ಗೆ ಸ್ವಾತಂತ್ರ್ಯ ಪೂರ್ವದಿಂದಲೂ ಅನೇಕ ಪ್ರಯತ್ನಗಳು ನಡೆದಿದ್ದವು ಸ್ವಾತಂತ್ರ್ಯಾನಂತರ ಅವು ಬಹುತೇಕ ಮುಂದುವರಿಬೇಕಾಗಿದ್ದು, ಆನಂತರ ಸರ್ಕಾರ ಬಹುತೇಕ ತಾತ್ಕಾಲಿಕ ಕ್ರಮ ತಗೆದುಕೊಳ್ಳುತ್ತಿದೆ. ಎಂಬ ಸಂಶಯ ಹಲವರಲ್ಲಿತ್ತು. ಇನ್ನೂ ಕೆಲವರಲ್ಲಿ ಸಮಸ್ಯೆಯ ಆಳ ಅರಿಯುವ ಬಗ್ಗೆ ಮೇಲ್ವರ್ಗದವರಿಂದಲೆ ನಿಯಂತ್ರಿಸಲ್ಪಡುತ್ತಿದ್ದ ಸರ್ಕಾರಕ್ಕೆ ಸಮಾನತೆಯ ಆಸಕ್ತಿಯಿರಲಿಲ್ಲವೆನ್ನುವ ಅಭಿಪ್ರಾಯವೂ ಇದೆ. ಜೊತೆಗೆ ಅಧಿಕಾರ ಹಂಚಿಕೆಯಲ್ಲಿಯೂ ಮೇಲ್ವರ್ಗದವರ ಪರವಾದ ತಾರತಮ್ಯ ಭಾವನೆಯಿತ್ತೆಂಬ ಅಪಾದನೆಯಲ್ಲೂ ಸತ್ಯಾಂಶವಿದೆ. ಹಾಗೆಯೇ ಕರ್ನಾಟಕದಲ್ಲಿ ಬಡವರ, ಭೂಹೀನರ ಸ್ಥಿತಿ ಎಳ್ಳಷ್ಟೂ ಉತ್ತಮವಾಗಿರಲಿಲ್ಲ ಅದಕ್ಕೆ ಬಲಾಢ್ಯ ಜಾತಿಯ ಶ್ರೀಮಂತರೇ ರಾಜ್ಯ ರಾಜಕಾರಣವನ್ನು ನಿಯಂತ್ರಿಸುತ್ತಿದ್ದು ಈ ಅಹಿಂದ ವರ್ಗಗಳಿಗೆ ಅನುಕೂಲವಾಗುವ

ಕಾರ್ಯಕ್ರಮಗಳನ್ನು ಸರಿಯಾಗಿ ಅನುಷ್ಠಾನ ಮಾಡದೆ ಉಪೇಕ್ಷಿಸುತ್ತಿದ್ದರು. ಹಾಗಾಗಿ ಭೂ ಸುಧಾರಣಾ ಕಾಯ್ದೆಯಾಗಲೀ, ಜೀತ ಪದ್ಧತಿಯಾಗಲಿ, ಕನಿಷ್ಠ ವೇತನವಾಗಲಿ, ಖಾಸಗಿ ಬಂಡವಾಳಿಗರ ಲೇವಾದೇವಿ ವ್ಯವಹಾರವನ್ನಾಗಲಿ ನಿಯಂತ್ರಿಸಿ ಕಾರ್ಯಗತಗೊಳಿಸುವ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇಲ್ಲದಂತೆ ಕಾಣುತ್ತಿವೆ. ಇದಕ್ಕೆ ಪೂರಕವಾಗಿ ಹಿಂದುಳಿದ ವರ್ಗಗಳಿಗೆ ಕಲ್ಪಿಸಿದ ಸವಲತ್ತುಗಳನ್ನು ನಿಭಾಯಿಸಿದ ಕ್ರಮ ಬಲವಾದ ಉದಾಹರಣೆಯಾಗಿದೆ. 1977ರವರೆಗೆ ವಿವಿಧ ಹಿಂದುಳಿದವರಿಗೆ ಶೇ.50% ಮೀಸಲಾತಿ ಇದ್ದರೂ ಕೇವಲ 28% ಮಾತ್ರ ಆ ವರ್ಗದವರಿಗೆ ದಕ್ಕಿತ್ತು. ಇದಕ್ಕೆ ಸರ್ಕಾರ ನಿರಾಸಕ್ತಿಯಲ್ಲದೆ ಬೇರೆ ಕಾರಣಗಳು ಇರಲು ಸಾಧ್ಯವೇ?.

ದೇವರಾಜು ಅರಸು ತಮ್ಮ ಆಡಳಿತಾವದಿಯಲ್ಲಿ ಈ ಸಮಸ್ಯೆಗಳ ಬಗ್ಗೆ ಗಮನ ಹರಿಸಿದ್ದರು. ಹಿಂದುಳಿದ ವರ್ಗಗಳನ್ನು ಕಾನೂನು ಚೌಕಟ್ಟಿನಲ್ಲಿ ವೈಜ್ಞಾನಿಕವಾಗಿ ಗುರ್ತಿಸುವ ಕೆಲಸಕ್ಕಾಗಿ ಎಲ್.ಜಿ ಹಾವನೂರು ಅವರ ಅಧ್ಯಕ್ಷತೆ ಅಯೋಗ ರಚಿಸಿದರು. 1977ರ ಫೆಬ್ರವರಿಯಲ್ಲಿ ಹಾವನೂರ ಅಯೋಗದ ವರದಿಯಾಧಾರಿತ ಸರ್ಕಾರಿ ಅಜ್ಞೆಯನ್ನು ಹೊರಡಿಸಲಾಯಿತು. ಆ ಸಂದರ್ಭದಲ್ಲಿ ಅವರು ಎದುರಿಸಿದ ರಾಜಕೀಯ ಸಮಸ್ಯೆಗಳು ಹಲವಾರು. ಹಾಗಾಗಿ ಈ ವರದಿಯ ಅನುಷ್ಠಾನಕ್ಕೆ ಗಂಭೀರ ರೂಪದ ವಿರೋಧವಿತ್ತು ಅದನ್ನು ಶಮನಗೊಳಿಸಲೆನ್ನುವಂತೆ ಹಾವನೂರರ ಶಿಫಾರಸ್ಸು ಹೊರತಾಗಿ ಎರಡು ಬದಲಾವಣೆಗಳನ್ನು ಮಾಡಲಾಯಿತು. **'ಮುಸ್ಲಿಂ ಸಮುದಾಯವನ್ನು'**. ಹಿಂದುಳಿದ ಸಮುದಾಯಕ್ಕೆ ಸೇರಿಸಿ ವರದಿಯ ಪ್ರಕಾರ ಯಾವ ಮೀಸಲಾತಿಗೂ ಅರ್ಹತೆಯಿಲ್ಲದೆ ಬ್ರಾಹ್ಮಣ, ವೈಶ್ಯ, ಲಿಂಗಾಯಿತ ಮುಂತಾದ ಸಮುದಾಯಗಳಿಗೆ ವಾರ್ಷಿಕ ವರಮಾನದ ಆಧಾರದ ಮೇಲೆ ವಿಶ್ಲೇಷ ವರ್ಗವೆಂದು ಅಜ್ಞೆಯಲ್ಲಿ ಮೀಸಲಾತಿ ಕಲ್ಪಿಸಲಾಯಿತು. ಇದನ್ನು ಅರಸುರವರ ಸಾಮಾಜಿಕ ಕ್ರಾಂತಿಯೆಂದು ಪರಿಗಣಿಸಬಹುದು.[12]

ದೇವರಾಜ ಅರಸು ಅವರ ನಂತರ ಹಿಂದುಳಿದ ವರ್ಗದ ರಾಜಕಾರಣ ಬಡವರ ಪರವಾದ ಒಂದಷ್ಟು ಕಾಳಜಿಯ ಕಾರ್ಯಗಳು ಸಂಭವಿಸಿದ್ದು **ಎಸ್. ಬಂಗಾರಪ್ಪನವರ** ಆಡಳಿತಾವದಿಯಲ್ಲಿ, ಆದರೆ ಬಂಗಾರಪ್ಪನವರು ಸಹ ಸಂಪೂರ್ಣವಾಗಿ ಅಧಿಕಾರವನ್ನು ಪೂರ್ಣಗೊಳಿಸಲಾಗಲಿಲ್ಲ. ಸಾಮಾಜಿಕ ನ್ಯಾಯ ಕೇಂದ್ರಿತ ಆಡಳಿತದ ವಿರುದ್ಧ ಪಟ್ಟಭದ್ರರು ಪಿತೂರಿ ನಡೆಸಿ ಬಂಗಾರಪ್ಪನವರನ್ನು ಅಧಿಕಾರದಿಂದ ಕೆಳಗಿಳಿಸಿದರು ನಂತರ ಮೂರು ದಶಕದ ನಂತರ ರಾಜ್ಯಕ್ಕೆ ಡಿ.ದೇವರಾಜ ಅರಸುರವರ ಸಾಮಾಜಿಕ ನ್ಯಾಯದ ಮುಂದುವರಿಕೆಯಲ್ಲಿ ಸ್ವತಃ ಅಹಿಂದ ನಾಯಕರಾಗಿ ಗುರ್ತಿಸಿಕೊಂಡಿರುವ ಸಿದ್ದರಾಮಯ್ಯನವರ ಸರ್ಕಾರ ಕೂಡ ಸಾಮಾಜಿಕ ನ್ಯಾಯದ ಅನುಷ್ಠಾನಕ್ಕೆ ಬದ್ಧರಾಗಿ ಐದು ವರ್ಷದ ಆಡಳಿತಾವದಿಯಲ್ಲಿ ಅಹಿಂದಪರ ಸರ್ಕಾರ ಎನಿಸಿಕೊಂಡು ಹಲವು ಪ್ರಗತಿಪರ ಪ್ರಗತಿದಾಯಕ ಹಾಗೂ ಸಬಲೀಕರಣ ಕೇಂದ್ರಿತ ಆಡಳಿತಕ್ಕೆ ಒತ್ತು ನೀಡಿ ರಾಜ್ಯಕ್ಕೆ ಹಲವು ಉಚಿತ ಭಾಗ್ಯಯೋಜನೆಗಳನ್ನು ನೀಡಿ "ಬಡವರ ಭಾಗ್ಯವಿಧಾತ" ಎನಿಸಿಕೊಂಡಿರುವುದು. ಸಾಕ್ಷಿಯಾಗಿದೆ.

ಸೈದ್ಧಾಂತಿಕ ಚೌಕಟ್ಟು: ಸಾಮಾಜಿಕ ಸಂಶೋಧನೆಯಲ್ಲಿ ಒಂದು ನಿರ್ದಿಷ್ಟವಾದ ವಸ್ತುವಿಷಯದ ಬಗ್ಗೆ ಸೈದ್ಧಾಂತಿಕ ಚೌಕಟ್ಟನ್ನು ನಿರ್ಮಿಸಿಕೊಳ್ಳುವುದು ವಾಡಿಕೆ. ಅದರಂತೆ "ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ' ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ" ಎಂಬಂತಹ ಸಂಶೋಧನಾ ವಸ್ತುವಿಷಯವು ತನ್ನದೇ ಆದ ನಿರ್ದಿಷ್ಟವಾದ ಸೈದ್ಧಾಂತಿಕ ಚೌಕಟ್ಟನ್ನು ಒಳಗೊಂಡಿದೆ. ಇದೂ ಮಾನವ ಜೀವಿತದ ಇತಿಹಾಸ ಪೂರ್ವಕಾಲದಿಂದಲೂ ಭಾರತವನ್ನು ಒಳಗೊಂಡಂತೆ ಸಮಕಾಲಿನ ಜಗತ್ತಿನಲ್ಲಿ ಅತ್ಯಂತ ಚರ್ಚಿತ ವಿಷಯವಾದ 'ಸಾಮಾಜಿಕ ನ್ಯಾಯ'ದ ಅಂತರಾಳದ ವಸ್ತುವಿಷಯವಾದ "ರಾಜಕೀಯ ಸಾಮಾಜಿಕರಣ"ದ ಮೂಲವಸ್ತುವಾಗಿದೆ. ಜೊತೆಗೆ ಸಾಂವಿಧಾನಿಕ ಮೂಲ ಆಶಯವೂ ಕೂಡ ಆಗಿರುವ 'ಸಾಮಾಜಿಕ ನ್ಯಾಯ, ವಿತರಣಾತ್ಮಕ ನ್ಯಾಯ'ದ ಜಾರಿಯಲ್ಲಿ ಮೇರುಸ್ಥಾನವನ್ನು ಹೊಂದಿರುವ ಸಾಂವಿಧಾನಿಕ–ಸಾಮಾಜಿಕ–ರಾಜಕಾರಣಕ್ಕೆ ಸಂಬಂಧಿಸಿದಂತೆ ಹಲವಾರು ವಿದ್ವಾಂಸರುಗಳ ಸಾಮಾಜಿಕ ನ್ಯಾಯದ ಮಾದರಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಅಂತಹ ಸೈದ್ಧಾಂತಿಕ ಚೌಕಟ್ಟುಗಳನ್ನು ಸಾಹಿತ್ಯಾವಲೋಕನದ ಮೂಲಕ ಈ ಕೆಳಕಂಡಂತೆ ಚರ್ಚಿಸಲಾಗಿದೆ.

1.5 ಸಾಹಿತ್ಯ ಪರಾಮರ್ಶೆ

ಯಾವುದೇ ಒಂದು ಸಂಶೋಧನಾ ಸೈದ್ಧಾಂತಿಕ ಚೌಕಟ್ಟನ್ನು (**Theoretical Framework**) ನಿರ್ಮಿಸುವಲ್ಲಿ ಸಾಹಿತ್ಯವು ಅತ್ಯಂತ ಮಹತ್ವಪೂರ್ಣವಾದ ಪಾತ್ರವನ್ನು ನಿರ್ವಹಿಸುತ್ತದೆ. ಆದ್ದರಿಂದಲೇ ಈಗಾಗಲೇ ನಡೆದಿರುವ ಸಂಶೋಧನ ಕಾರ್ಯಗಳ ಬಗೆಗೆ ಸ್ಪಷ್ಟ ಅರಿವು ಇರುವುದು ಸಂಶೋಧಕನಾದವನಿಗೆ ಅತ್ಯಾವಶ್ಯಕ. ಈ ಪರಿಜ್ಞಾನ ಇಲ್ಲದಿದ್ದರೆ ಪ್ರಸ್ತುತ ಸಂಶೋಧಕನಿಗೆ ಸಂಶೋಧನೆಯ ದಿಕ್ಕು–ದಿಸೆಗಳನ್ನು ನಿರ್ಧರಿಸಲಾಗದು. ಆದ್ದರಿಂದ

[12] ಪ್ರೊ. ಪುರುಷೋತ್ತಮ ಬಿಳಿಮಲೆ (7-12-2019) ಮಂಗಳೂರು 'ಜನನುಡಿ' ಕಾರ್ಯಕ್ರಮದ ಸಂದರ್ಶನದ ಮಾಹಿತಿ

ಪ್ರತಿಯೋರ್ವ ಸಂಶೋಧಕನು/ಳು ತನ್ನ ಅಧ್ಯಯನ ಕ್ಷೇತ್ರದ ಪ್ರಮುಖ ಅಂಶಗಳನ್ನು ಕುರಿತು ತಿಳಿಯಲು ಸಾಹಿತ್ಯ ಪರಾಮರ್ಶೆ ನಡೆಸುವವನು / ನಡೆಸುವವಳು ಇದನ್ನೆ ಸಾಹಿತ್ಯ ಪರಾಮರ್ಶೆ ಎಂದು ಕರೆಯುತ್ತೇವೆ.

"ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ' ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ"–ಎಂಬ ಸಂಶೋಧನಾ ವಿಷಯದಲ್ಲಿ ಅಹಿಂದ ವರ್ಗದವರ ಸಮಸ್ತ ಅಭಿವೃದ್ಧಿ ಮತ್ತು 'ಬೆಳವಣಿಗೆಯ ಪ್ರಕ್ರಿಯೆ'ಯನ್ನು ಅಂದರೆ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಪ್ರಗತಿ ಮತ್ತು ಅಭಿವೃದ್ಧಿಯನ್ನು ಸೂಕ್ಷ್ಮವಾಗಿ ಅವಲೋಕಿಸುವುದು ಇದರ ಪ್ರಮುಖ ಧ್ಯೇಯವಾಗಿದ್ದು. ಕಾಂಗ್ರೆಸ್ ಸರ್ಕಾರದ ಧ್ಯೇಯ ವ್ಯಾಕ್ಯವಾದ "ಸಾಮಾಜಿಕ ನ್ಯಾಯ"ವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಸಿಗುವ ಫಲಿತಾಂಶ ಅದರ ಮೂಲ ಸಿದ್ಧಾಂತದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಅಂದರೆ ಅಹಿಂದ ಸಮುದಾಯಗಳ ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯಕ್ರಮಗಳು ಎನ್ನುವುದು ಗುರಿಯಾಗಿದ್ದು, ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ' ಅದರ ಗುರಿಸಾಧನೆಗೆ ಸಾಧನ ಅಥವಾ ಅಸ್ತ್ರವಾಗಿದೆ. ಇದರ ಜೊತೆಗೆ ಸಂವಿಧಾನ ಬದ್ಧ ಅವಕಾಶಗಳನ್ನು ಸರ್ವರಿಗೂ ಸಮಾನವಾಗಿ ಹಂಚಿಕೆ ಮಾಡುವುದು ಒಂದು ಘನತೆವೆತ್ತ ಜವಾಬ್ಧಾರಿ ಸರ್ಕಾರದ ಕರ್ತವ್ಯವಾಗಿರುತ್ತದೆ.

ಪ್ರಸ್ತುತ ವಿಷಯದ ಅಧ್ಯಯನದ ಚೌಕಟ್ಟಿಗೆ (**Theoretical Framework**) ಸಂಬಂಧಿಸಿದಂತೆ, ಅನೇಕ ಗ್ರಂಥಗಳನ್ನು ಸಂಶೋಧನಾ ದೃಷ್ಠಿಕೋನದಲ್ಲಿ, ಪರಿಶೋಧನೆಯ ಓರೆಗೆ ಹಚ್ಚಿ ಸಾಹಿತ್ಯ ಪರಾಮರ್ಶೆಗೆ ಒಳಪಡಿಸುವ ಸಾಹಿತ್ಯಾವಲೋಕನದ ವಿವರ ಈ ಕೆಳಕಂಡಂತೆ ಸಮರ್ಪಿಸಲಾಗಿದೆ.

- **ಮಾನಸ (2013) "ಸದನದಲ್ಲಿ ಸಿದ್ದರಾಮಯ್ಯ"** ಈ ಸಂಪಾದಕೀಯ ಗ್ರಂಥದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ತಮ್ಮ ಅಹಿಂದ ಹೋರಾಟದ ಮೂಲಕ ಕರ್ನಾಟಕದ ಜನತೆಯ ಮನೆ ಮಾತಾಗಿದ್ದುದ್ದನ್ನು ಮತ್ತು ಇಡೀ ಭಾರತದಲ್ಲಿ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತರು ಈ ಮೂರು ಸಮುದಾಯಗಳನ್ನು ಒಟ್ಟಿಗೆ ಕೂಡಿಕೊಂಡು ಸಂಘಟನೆ ಮಾಡುವ ಮೂಲಕ ಅಹಿಂದ ಚಳುವಳಿ ಮತ್ತು ಹೋರಾಟಗಳಲ್ಲಿ ಮಾಡಿದ ಸಂಗತಿಗಳನ್ನು ತಿಳಿಸಿದ್ದಾರೆ. ಅಹಿಂದ ಪರಿಕಲ್ಪನೆಯ ಯಶಸ್ವಿಗೆ ಸಿದ್ದರಾಮಯ್ಯನವರೇ ಮೂಲ ಕಾರಣ ಎಂದು ತಿಳಿಸಿದ್ದಾರೆ. ಜೊತೆಗೆ ಇವರು ಉಪ ಮುಖ್ಯಮಂತ್ರಿಯಾದದ್ದು ಅಹಿಂದಾದ ನಾಯಕನಾಗಿ ಬೆಳೆದದ್ದು, ಸಮತಾವಾದದಲ್ಲಿ ನಂಬಿಕೆ ಇಟ್ಟುಕೊಂಡು ಬೆಳೆದಿರುವ ಸಿದ್ದರಾಮಯ್ಯನವರ ಯಶಸ್ಸಿನ ಗುಟ್ಟನ್ನು ಈ ಗ್ರಂಥದಲ್ಲಿ ಚಿತ್ರಿಸಲಾಗಿದೆ.
- **ಹರೀಶ್‌ಕುಮಾರ್ ವಿ, (2018) "ಮೂಕ ನಾಯಕ ಸಿ.ಎಸ್. ದ್ವಾರಕಾನಾಥ್‌ರ ಸಾಂದರ್ಭಿಕ ಲೇಖನಗಳು"** ದ್ವಾರಕಾನಾಥ್‌ರವರು 1998ರಲ್ಲಿ ಅಹಿಂದ ಚಳುವಳಿಯನ್ನು ಸಂಘಟಿಸುವ ಸಂದರ್ಭದಲ್ಲಿ ಸಾಮಾಜಿಕವಾಗಿ ರಾಜಕೀಯವಾಗಿ, ಆರ್ಥಿಕವಾಗಿ ಸಾಂಸ್ಕೃತಿಕವಾಗಿ ಹಿಂದುಳಿದ್ದ ಅಹಿಂದವನ್ನು ಸೈದ್ಧಾಂತಿಕವಾಗಿ ಒಗ್ಗೂಡಿಸಲು ಮಾಡಿದ ಕಾರ್ಯಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದ್ದಾರೆ. ಅಲ್ಲದೇ ಅಹಿಂದ ಸಮಾವೇಶವು ಯಾವುದೇ ರಾಜಕೀಯ ಲಾಭ ನೀರೀಕ್ಷಸದೆ ಸಮುದಾಯವನ್ನು ಸಂಘಟಿಸುವುದಷ್ಟೇ ಕೆಲಸವಾಗಿತ್ತು ಎಂಬುದನ್ನು ಕಂಡುಕೊಳ್ಳಲಾಗಿದೆ.
- **ಮಹದೇವ ಪ್ರಕಾಶ್ (2015) "ಇಟ್ಟಗುರಿ–ದಿಟ್ಟಹೆಜ್ಜೆ ಸಮಾನತೆಯ ಸಾಧಕನ ಸಂಕಲ್ಪದ ಹಾದಿ"** ಈ ಸಂಪಾಧಕೀಯ ಕೃತಿಯಲ್ಲಿ ಐದು ವರ್ಷದ ಸಿದ್ದರಾಮಯ್ಯನವರ ಆಡಳಿತದಲ್ಲಿ ಜಾರಿ ಮಾಡಿದ ಜನಪ್ರಿಯ ಭಾಗ್ಯಯೋಜನೆಗಳು ಹಾಗೂ ಕ್ರಾಂತಿಕಾರಕ ಯೋಜನೆಗಳನ್ನು ಕೂಲಂಕುಶವಾಗಿ ಚರ್ಚಿಸಲಾಗಿದೆ. ಈ ಗ್ರಂಥವು ಪ್ರಸ್ತುತ ಸಂಶೋಧನೆಗೆ ಹೆಚ್ಚಿ ಮಾಹಿತಿಯನ್ನು ಒದಗಿಸಿರುವುದು ಕಂಡುಬಂದಿದೆ.
- **ಅಂಶಿ ಪ್ರಸನ್ನಕುಮಾರ್ {2017} ಮೈಸೂರು ಚಾಮರಾಜನಗರ ರಾಜಕೀಯ ಇತಿಹಾಸ**. ಈ ಕೃತಿಯಲ್ಲಿ ಲೇಖಕರು ಸ್ವಭಾತಃ ಪತ್ರಿಕೋದ್ಯಮಿಗಾಳಗಿದ್ದು ಕರ್ನಾಟಕದ ರಾಜಕೀಯ ಇತಿಹಾಸವನ್ನು ಅಚ್ಚುಕಟ್ಟಾಗಿ ನಿರೂಪಣೆ ಮಾಡಿದ್ದಾರೆ ಮೈಸೂರಿನ ರಾಜಕೀಯ ಇತಿಹಾಸವನ್ನು ಅರಸು, ಸಿದ್ದರಾಮಯ್ಯನವರ ರಾಜಕೀಯ ಚರಿತ್ರೆಯನ್ನು ನಮೂದಿಸಿದ್ದಾರೆ.
- **ಶ್ರೀನಿವಾಸ್‌ರಾವ್.ಎಸ್.ವಿ. ತುಮಕೂರು ಮಹದೇವಯ್ಯ(2013) "ಕನಾಟಕದ ಮುಖ್ಯ ಮಂತ್ರಿಗಳು"** ಈ ಗ್ರಂಥದಲ್ಲಿ ಕರ್ನಾಟಕವನ್ನು ಆಳ್ವಿಕೆ ಮಾಡಿದ ಕಾಂಗ್ರೆಸ್ ಪಕ್ಷದ ಇತಿಹಾಸ ಮತ್ತು ರಾಜಕೀಯ ಚರಿತ್ರೆಯ ನಿರೂಪಣೆಯನ್ನು ಮಾಡಲಾಗಿದೆ. ಈ ಕೃತಿಯು ಸಹ ಉಪಯುಕ್ತ ಮಾಹಿತಿಯನ್ನು ಸಂಶೋಧನೆಗೆ ನೀಡಿದೆ.

- **ಅಗ್ನಿ ಶ್ರೀಧರ್ (2015) ಅಗ್ನಿಪತ್ರಿಕೆ, "ಸಮಾಜವಾದದಿಂದ ಮುಖ್ಯಮಂತ್ರಿವರೆಗೆ"** ಸಿದ್ದರಾಮಯ್ಯನವರ ಹೋರಾಟ ಬದುಕು ಸಮಾಜವಾದ ರಾಜಕಾರಣ ಹಾಗೂ ಸಾಮಾಜಿಕ ಚಳುವಳಿ ಮತ್ತು ಅಹಿಂದ ಚಳುವಳಿಯ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಒದಗಿಸಿದೆ.
- **ಮಂಜು ಎಸ್.ಕೆ. (2017) "ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳುವಳಿ ಮತ್ತು ರಾಜಕೀಯ ನಾಯಕತ್ವ – ವಿಶೇಷವಾಗಿ ಮೈಸೂರು ಜಿಲ್ಲೆಯ ಒಂದು ಅಧ್ಯಯನ"** ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಚಳುವಳಿ ಮತ್ತು ನಾಯಕತ್ವದ ರಾಜಕೀಯ ಇತಿಹಾಸವನ್ನು ತುಂಬಾ ಚೆನ್ನಾಗಿ ನಿರೂಪಣೆ ಮಾಡಿದ್ದಾರೆ. ವಿಶೇಷವಾಗಿ ಅರಸು, ಸಿದ್ದರಾಮಯ್ಯನವರ ಹೋರಾಟದ ಬದುಕು ಜನಪ್ರಿಯ ಯೋಜನೆಗಳ ಸಾಮಾಜಿಕ ಬದಲಾವಣೆಗೆ ಕಾರಣವಾಗಿದ್ದನ್ನು ಕಂಡುಕೊಂಡಿದ್ದನ್ನು ತಿಳಿಸಿದ್ದಾರೆ.
- **ವಾರ್ತಾಭಾರತಿ ದಿನಪತ್ರಿಕೆ (2018) ಸಂಪಾಧಕೀಯ "ಕರುಣಾಡಿನ ಭಾಗ್ಯದ ಬಾಗಿಲು ತೆರದ ಸರ್ಕಾರ"** ಈ ವಾರ್ಷಿಕ ವಿಶೇಷ ಸಂಚಿಕೆಯಲ್ಲಿ ಸಿದ್ದರಾಮಯ್ಯನವರ ಐದು ವರ್ಷದ ಸಮಾಜಮುಖಿ ಆಡಳಿತ ರೂಪುರೇಶೆಯನ್ನು ಕಟ್ಟಿಕೊಟ್ಟಿದ್ದಾರೆ ಹಾಗೂ ಅನ್ನಭಾಗ್ಯದ ಫಲಾನುಭವಿಗಳ ಮಾಹಿತಿ ನೀಡಿದೆ.
- **ಅಂಶಿ ಪ್ರಸನ್ನಕುಮಾರ್ (2018) "ಸಮುದಾಯ ನಾಯಕರು"** ಈ ಕೃತಿಯು ಸಹ ಸಂಶೋಧನಾ ಗ್ರಂಥವಾಗಿದ್ದು ಹಳೆ ಮೈಸೂರು ಭಾಗದ ರಾಜಕೀಯ ಇತಿಹಾಸವನ್ನು ಕುರಿತು ವಿವಿಧ ಸಮುದಾಯದ ಮುಖಂಡರ ಸಾಧನೆಗಳನ್ನು ತಿಳಿಸಿದ್ದಾರೆ.
- **ದ್ವಾರಕಾನಾಥ್. ಸಿ.ಎಸ್.(2018) "ಮೂಕ ನಾಯಕ" ಸಿದ್ದರಾಮಯ್ಯ ಮತ್ತು ಸಾಮಾಜಿಕ ನ್ಯಾಯ**. ಮೂಕ ಸಮುಧಾಯಗಳ ಬೆಳಕನ್ನು ಚೆಲ್ಲಲು ಈ ಕೃತಿಯು ಸಹಕಾರಿಯಾಗಿದೆ, ಏಕೆಂದರೆ ದನಿಇಲ್ಲದ ಅನೇಕ ಸಮುದಾಯಗಳಿಗೆ ಅರಸು ದನಿ ನೀಡಿ ಪೋಷಿಸಿದ್ದನ್ನು ತಿಳಿಸಿದ್ದಾರೆ, ಜೊತೆಗೆ ದ್ವಾರಕನಾಥ್‌ರವರು 1998ರಲ್ಲಿ ಅಹಿಂದ ಚಳುವಳಿಯನ್ನು ಸಂಘಟಿಸುವ ಸಂದರ್ಭದಲ್ಲಿ ಸಾಮಾಜಿಕವಾಗಿ ರಾಜಕೀಯವಾಗಿ, ಆರ್ಥಿಕವಾಗಿ ಸಾಂಸ್ಕೃತಿಕವಾಗಿ ಹಿಂದುಳಿದ್ದ ಅಹಿಂದವನ್ನು ಸೈದ್ದಾಂತಿಕವಾಗಿ ಒಗ್ಗೂಡಿಸಲು ಮಾಡಿದ ಕಾರ್ಯಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದ್ದಾರೆ. ಅಲ್ಲದೇ ಅಹಿಂದ ಸಮಾವೇಶವು ಯಾವುದೇ ರಾಜಕೀಯ ಲಾಭ ನೀರೀಕ್ಷಸದೆ ಸಮುದಾಯವನ್ನು ಸಂಘಟಿಸುವುದಷ್ಟೇ ಕೆಲಸವಾಗಿತ್ತು ಎಂಬುದನ್ನು ಕಂಡುಕೊಳ್ಳಲಾಗಿದೆ.
- **ರಾಜಶೇಖರ್. ಹೆಚ್.ಎಂ.(2009) "ಭಾರತ ಸರ್ಕಾರ ಮತ್ತು ರಾಜಕೀಯ"** ಸಂವಿಧಾನದ ರಾಜ್ಯಾಂಗ ವ್ಯವಸ್ಥೆಯ ಬಗ್ಗೆ ವಿವಿಧ ಕಲಂಗಳಡಿಯ ಸಾರವನ್ನು ಚಿತ್ರಿಸಿದೆ.
- **ಎಸ್.ಎಮ್.ವಿ. ಗೋಲ್ಡ್.(2015) "ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳು".** ಈ ಕೈಪಿಡಿಯು ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರ ಜಾರಿಗೆ ತಂದಂತಹ ಜನಪ್ರಿಯ ಯೋಜನೆಗಳನ್ನು ತಿಳಿಸಿದೆ, ಇದು ಸಂಶೋಧನೆಗೆ ಬಹಳ ಉಪಯುಕ್ತವಾಗಿದೆ.
- **ತುಮಕೂರು ಮಹಾದೇವಯ್ಯ, ನಾಗರಾಜ ಜಿ.ಜಿ. ಸಂಪಾದಕರು. (2015) "ಇಟ್ಟಗುರಿ–ದಿಟ್ಟಹೆಜ್ಜೆ"** ಸಾಧನೆಯ ಹರಿಕಾರ ಸಿದ್ದರಾಮಯ್ಯನವರ ಐದು ವರ್ಷದ ಆಡಳಿತ ಸಾರವನ್ನು ಚಿತ್ರಿಸಿದೆ.
- **ನಿರ್ಮಲ್ ರಾಜ್, ಮಹೇಶ್ ಚಂದ್ರಗುರು {2011} ಅಂತ್ಯೋದಯ**. ಈ ಸಂಪಾದನ ಕೃತಿಯು ದಕ್ಷಿಣ ಭಾರತದಲ್ಲಿ ಮೀಸಲಾತಿ ಜಾರಿ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಸಮಾಜ ಪರಿವರ್ತನೆಯ ಕಾರ್ಯಗಳ ಮೇಲೆ ಬೆಳಕು ಚಲ್ಲಿದೆ. ಇದು ಸಾಮಾಜಿಕ ನ್ಯಾಯದ ಐತಿಹಾಸಿಕ ಚೌಕಟ್ಟನ್ನು ಕಟ್ಟಲು ಬಹಳ ಸಹಕಾರಿಯಾಗಿದೆ.
- **ರಂಜಾನ್ ದರ್ಗಾ (2016) 'ಅಹಿಂದ ಏಕೆ'** ಪ್ರಸ್ತುತ ಗ್ರಂಥವು ಅಹಿಂದ ಬಗ್ಗೆ ಬಂದ ಪ್ರಥಮ ಕೃತಿ ಎಂದರೆ ತಪ್ಪಾಗಲಾರದು, ಅಹಿಂದದ ಪ್ರಸ್ತುತತೆಯ ಬಗ್ಗೆ ಬೆಳಕು ಹರಿಸಿದ್ದಾರೆ ಹಾಗೂ ಏಕೆ ಒಂದಾಗಬೇಕು ಎಂಬುದನ್ನು ತಿಳಿಸಿದ್ದಾರೆ.
- **ಬಿ.ಆರ್. ಅಂಬೇಡ್ಕರ್ ಸಮಗ್ರ ಬರಹಗಳು ಮತ್ತು ಭಾಷಣಗಳು ಸಂಪುಟ–5 (2010)** ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಸಮಗ್ರ ಬರಹಗಳಲ್ಲಿ ಸಾಮಾಜಿಕ ನ್ಯಾಯ, ರಾಜಕಾರಣ, ಮತ್ತು ತುಳಿತಕ್ಕೆ ಒಳಗಾದ ಸಮುದಾಯಗಳ ಬಗ್ಗೆ ಇದ್ದ ಕಾಳಜಿಯನ್ನು ಎರವಲು ಪಡೆಯಲಾಗಿದೆ.

- **ಹಣಮಂತ್ರಾಯ ದೊಡ್ಡಮನಿ, (2011) ದೇವರಾಜ ಅರಸು ಮತ್ತು ಕರ್ನಾಟಕದ ರಾಜಕಾರಣ,** ಲೇಖಕರು ಈ ಸಂಶೋಧನಾ ಕೃತಿಯಲ್ಲಿ ದೇವರಾಜ ಅರಸುರವರು ತಮ್ಮ ಸಮಾಜಮುಖಿ ಕಾರ್ಯಗಳ ಮೇಲೆ ಬೆಳಕನ್ನು ಚೆಲ್ಲಿದ್ದನ್ನು ಕಂಡುಕೊಳ್ಳಲಾಗಿದೆ.
- **ರಾಜರಾಮ್ ತೋಲ್ಪಾಡಿ (2011) "ಮತ್ತೆ ಮತ್ತೆ ಲೋಹಿಯಾ"** ಗ್ರಂಥವು ಲೋಹಿಯಾರವರ ಸಮಾಜವಾದವು ಭಾರತೀಯ ಸಮಾಜದಲ್ಲಿದ್ದ ಏಣಿಶ್ರೇಣಿ ವ್ಯವಸ್ಥೆಯನ್ನು ಕಟುವಾಗಿ ಟೀಕಿಸಿದೆ.
- **ಲಕ್ಷ್ಮಣ್ ತೆಲಗವಿ, ಹಿಂದುಳಿದ ವರ್ಗಗಳು ಹಾಗೂ ದಲಿತ ಚಳುವಳಿಗಳು.** ಈ ಕೃತಿಯು ಸಾಮಾಜಿಕ ಚಳುವಳಿಗಳಾದ ಹಿಂದುಳಿದ ವರ್ಗ, ದಲಿತ ಚಳುವಳಿಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ವಿಶೇಷವಾಗಿ ಹಿಂದುಳಿದ ವರ್ಗಕ್ಕೆ ಧ್ವನಿಯನ್ನು ನೀಡಿದೆ.
- **ನಾಗಮೋಹನ್‌ದಾಸ್ ಹೆಚ್.ಎನ್ (2018) "ಸಂವಿಧಾನ ಓದು"** ನ್ಯಾಯಮೂರ್ತಿಗಳು ಈ ಕೃತಿಯಲ್ಲಿ ಸಂವಿಧಾನದ ಬಗ್ಗೆ ಯುವ ಮನಸ್ಸುಗಳ ಅರಿವು ಮೂಡಿಸುವ ಸಲುವಾಗಿ ಅತ್ಯಂತ ಅರ್ಥವಾಗುವ ಭಾಷೆಯಲ್ಲಿ ವರ್ಣಿಸಿದ್ದಾರೆ.
- **ನಾರಾಯಣ ಕೆ.ವಿ.,(2018) " ನಾಮ್ ಚಾಮ್‌ಸ್ಕಿ ಜೊತೆಗೆ ಒಂದು ಎರಡು ಹೆಜ್ಜೆ"** ವೈಚಾರಿಕ ಕ್ರಾಂತಿಯನ್ನು ಹಚ್ಚಿದ ಚಾಮ್‌ಸ್ಕಿಯು ರಾಜಕೀಯ ಮಾದರಿಗಳ ಮತ್ತು ಭಾಷಿಕ ಮಾದರಿಗಳ ಬಗ್ಗೆ ಸೂಕ್ಷ್ಮ ಸಂವೇಧನಾ ಶೀಲತೆಯನ್ನು ತೆರೆದಿಟ್ಟುವುದನ್ನು ಗ್ರಹಿಸಲಾಗಿದೆ.
- **ಆನಂದ ತೇಲ್ತುಂಬ್ಡೆ (2015) "ಅಂಬೇಡ್ಕರ್ ಮತ್ತು ಮುಸ್ಲಿಮರು ಸುಳ್ಳುಗಳು ಮತ್ತು ಸತ್ಯಾಂಶಗಳು"** ಡಾ. ಅಂಬೇಡ್ಕರ್‌ರವರು ಮುಸಲ್ಮಾನರ ಬಗ್ಗೆ ಅಭಿಪ್ರಾಯ ನಿಲುವು ಒಲವುಗಳ ಅವರ ಭವಣೆಗಳ ಬಗ್ಗೆ ಬೆಳಕುಚೆಲ್ಲಿದ್ದಾರೆ.
- **ವೆಂಕಟೇಶ್ ಹೆಚ್.ಎ.(2011) ಡಾ. ಹಿ.ಶಿ. ರಾಮಚಂದ್ರೆಗೌಡ, ಡಾ. ಕೃಷ್ಣಮೂರ್ತಿ ಹನೂರು, ಸಂಪಾದಕರು "ಕರ್ನಾಟಕದ ಅರಸು"** ಅನ್ನಪೂರ್ಣೇಶ್ವರಿ ಎನ್. ರವರ "ಸಾಮಾಜಿಕ ನ್ಯಾಯದ ಪ್ರತಿಪಾದಕ ದೇವರಾಜ ಅರಸು" ಈ ಲೇಖನದಲ್ಲಿ ಅರಸುರವರು ಸ್ತ್ರೀ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟವರಲ್ಲಿ ಪ್ರಮುಖರು. ಇವರ ಆಡಳಿತದಲ್ಲಿ ದುರ್ಬಲ ವರ್ಗದವರ ಮತ್ತು ಹಿಂದುಳಿದ ವರ್ಗದ ಮಹಿಳಾ ಶಿಕ್ಷಣವು ಹೆಚ್ಚಿನ ಮಹತ್ವ ಪಡೆಯಿತು. OBC ವರ್ಗದ ವಿದ್ಯಾರ್ಥಿನಿಯರಿಗೆ ವಸತಿಗೃಹ ಸ್ಥಾಪಿಸಿ, ವೃದ್ಧಾಪ್ಯವೇತನ, 1987 ಕೃಷಿ ಕಾರ್ಮಿಕರ ಧನಸಹಾಯ, ಕರ್ನಾಟಕ ರಾಜ್ಯದಲ್ಲಿದ್ದು ಊಳಿಗಮಾನ್ಯ ಪದ್ಧತಿ, ಗೇಣಿ ಪದ್ಧತಿ ನಿರ್ಮೂಲನ ಮಾಡಿ ಭೂ ಸುಧಾರಣೆ ಮೂಲಕ ಸಾವಿರಾರು ಜನರಿಗೆ ಭೂ ಒಡೆತನ ಕೊಟ್ಟರು ಹಾಗೂ ವಸತಿ ಕಲ್ಪಿಸಿಕೊಟ್ಟಂತಹುದನ್ನು ಈ ಲೇಖನದಲ್ಲಿ ತಿಳಿಸಿದ್ದಾರೆ.
- **ವೆಂಕಟೇಶ್ ಹೆಚ್.ಎ., (2011) ಹಿ.ಶಿ. ರಾಮಚಂದ್ರೆಗೌಡ, ಕೃಷ್ಣ ಮೂರ್ತಿ ಹನೂರು, ಸಂಪಾದಕರು "ಕರ್ನಾಟಕದ ಅರಸು"** ಡಾ. ತಿಪ್ಪೆಸ್ವಾಮಿ ಜಿ.ಆರ್. ರವರ "ಅರಸು ಹಿಂದುಳಿದ ವರ್ಗದ ಸಸಿಗಳನ್ನು ನೆಟ್ಟವರು" ಈ ಲೇಖನದಲ್ಲಿ "ಶ್ರಮ ಸಂಸ್ಕೃತಿಯ ಹಿನ್ನೆಲೆಯಿಂದ ಬಂದ ಅರಸು ಶ್ರಮಜೀವಿಗಳ ಯುಗವನ್ನೇ ಸ್ಥಾಪಿಸಿದ್ದುಂಟು. ಅಂದರೆ ಸಿರಿತನ–ಬಡತನ, ಭೂಮಾಲಿಕ–ಗೇಣಿದಾರ, ಗ್ರಾಮ ನಗರಗಳ ನಡುವಿನ ಅಂತರವನ್ನು ಕಡಿಮೆ ಮಾಡುವುದರ ಮೂಲಕ ಶೋಷಣ ರಹಿತ ಸಮಾಜವನ್ನು ಕಟ್ಟಲು ಪ್ರಯತ್ನಿಸಿದ್ದು ಗಮನಾರ್ಹ ಅಂಶವಾಗಿದೆ. "ಉಳುವವನೆ ಹೊಲದೊಡೆಯ" ಜೀತ ಪದ್ಧತಿ ರದ್ಧತಿ ಮೂಲಕ 60 ರಿಂದ 70 ಸಾವಿರ ಜೀತದಾರರನ್ನೇ ಬಿಡುಗಡೆ ಮಾಡಿದರು. ಋಣ ಪರಿಹಾರ ಮತ್ತು ವಿದ್ಯಾರ್ಥಿಗಳಿಗೆ ಸ್ಟೈಫಂಡ್ ಯೋಜನೆ ಜಾರಿಗೆ ತಂದರು.
- **English book**
- **Muzafer Assadi (2012) "Social Justice, law and Human Rights"** ಈ ಲೇಖನದಲ್ಲಿ ಪ್ರಸ್ತುತ ಸಮಾಜದಲ್ಲಿ ಮಹಿಳೆಯನ್ನು ಪುರುಷ ಪ್ರಧಾನ ಸಮಾಜವು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ನೋಡುವ ಸಂದರ್ಭ ಇಂದೂ ಅತ್ಯಂತ ಜರೂರಿದೆ. ಇವತ್ತಿನ ಸಂದರ್ಭದಲ್ಲಿ ಪುರುಷರಿಗೆ ಸಮಾನವಾದ ಕೆಲಸಗಳನ್ನು ನಿಭಾಯಿಸಿ ಸಾಮರ್ಥ್ಯ ಹೊಂದಿರುವ ಮಹಿಳೆಯನ್ನು ಸೀಮಿತ ದೃಷ್ಠಿಕೋನಗಳಿಂದ ನೋಡಬಾರದು ಹಾಗೂ ಸಾಮಾಜಿಕ ಸ್ಥಿತ್ಯಂತರಗಳಿಂದ ಅವಳನ್ನು ಪರಿಪೂರ್ಣ ಬಿಡುಗಡೆಗೊಳಿಸಬೇಕೆಂದು ತಿಳಿಸಿದ್ದಾರೆ.

- **Raju C.B. (2017) “Social Justice and the constitution of India” with reference to SC’s/ST’s** ಈ ಪುಸ್ತಕದಲ್ಲಿ ಭಾರತ ಸಂವಿಧಾನದಲ್ಲಿ ಪ್ರಜಾಪ್ರಭುತ್ವದ ಆಶಯವನ್ನು ಈಡೇರಿಸುವ ನಿಟ್ಟಿನಲ್ಲಿ ಹಾಗೂ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಸಮಾನತೆ ಹೋಗಲಾಡಿಸುವ ನಿಟ್ಟಿನಲ್ಲಿ ಸಾಂವಿಧಾನಿಕ ಮಾನ್ಯತೆಯ ಜೊತೆಗೆ ಪ್ರಾತಿನಿಧ್ಯತೆಯನ್ನು ಶೋಷಿತ ಸಮುದಾಯಗಳಿಗೆ ವಿಪುಲ ಅವಕಾಶಗಳನ್ನು ಒದಗಿಸಿಕೊಟ್ಟಾಗ ಸಂವಿಧಾನದ ಸಾರ್ಥಕತೆ ಸಾಧ್ಯವಾಗುತ್ತದೆ. ಆ ಮೂಲಕ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯಲು ಸಾಧ್ಯ ಎಂಬ ವಿಷಯವನ್ನು ಪ್ರಸ್ತಾಪಿಸಲಾಗಿದೆ.
- **Kiran Kamal Prasad (2005) “In Search of an Identity”** ಕರ್ನಾಟಕದ ರಾಜ್ಯದ ಅಸ್ಮಿತೆಯ ಭಾಗವಾಗಿ ಹಲವು ಜಾತಿಗಳು ತನ್ನ ರಾಜಕೀಯ ಅಸ್ಮಿತೆಗಾಗಿ ನಡೆಸಿದ ಹೋರಾಟಗಳನ್ನು ಚಿತ್ರಿಸಿದ್ದಾರೆ.
- **Mahajan Gurupreet (1998) “Democrocy, Difference in Social justice”** ಎಂಬ ಎಡಿಟೆಡ್ ಗ್ರಂಥದಲ್ಲಿ ಪ್ರಜಾಪ್ರಭುತ್ವದ ಮಾದರಿ ವ್ಯವಸ್ಥೆ ಒಳಗಡೆ ಮಾತ್ರ ಸಾಮಾಜಿಕ ನ್ಯಾಯವನ್ನು ಕಂಡುಕೊಳ್ಳಲು ಸಾಧ್ಯ ಎಂಬ ಮಾಹಿತಿ ನೀಡಿದ್ದಾರೆ.
- Gokulesh Sharma (2015) “Human Rights and Social Justice”
- . Purohit, Sandeep Joshi (2015) “Social justice in India”
- Dubey K Anand (1989) “Social justice and bonded force in India”
- Oneil Biswas (1985) “From justice to welfare”
- Austin Michael J (2015) “Social justice and social work”
- Rajesh K R Jha (2010) “ Social justice and Empowerment”
- Dasharath N. (2009) “A Vision for Social justice”
- **Mohammad Shabbir Editor (2005). “Ambedkar on law, constitution and Social Justice”** ಶೋಷಿತ ಸಮುದಾಯಗಳ ಬದುಕು ಮತ್ತು ಬವಣೆಗಳನ್ನು ಚರ್ಚಿಸಲಾಗಿದೆ.
- **Dhaktode “Ambedkars Contribution to Social Justice: on overview**. ಈ ಪುಸ್ತಕದಲ್ಲಿ ಡಾ. ಅಂಬೇಡ್ಕರ್‌ರವರು ದಲಿತ, ಹಿಂದುಳಿದ, ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ, ಅಥವಾ ತುಳಿತಕ್ಕೆ, ದಾಸ್ಯಕ್ಕೆ ದೌರ್ಜನ್ಯಕ್ಕೆ ದಬ್ಬಾಳಿಕೆಗೆ ಮತ್ತು ಐತಿಹಾಸಿಕವಾದ ಅನ್ಯಾಯಗಳಿಗೆ ಒಳಗಾದ, ಶೋಷಿತರ ಪರವಾಗಿ ಆಧುನಿಕ ಭಾರತ ಎಂದೆಂದಿಗೂ ಮರೆಯದ ಹೊಸ ಐತಿಹಾಸಿಕ ಕೊಡುಗೆಗಳನ್ನು ನೀಡಿದರು ಅದು ತಮ್ಮ ಕಾನೂನು, ಮತ್ತು ಸಂವಿಧಾನದ ಮೂಲಕ ಇಡೀ ಸ್ತ್ರೀ-ಪುರುಷರೆನ್ನದೆ ಭಾರತೀಯ ಪ್ರಜೆಗಳೆಲ್ಲರಿಗೂ ಒಂದೇ ಮತ ಆ ಮತಕ್ಕೆ ಒಂದೇ ಮೌಲ್ಯ ಎಂಬ ತತ್ವಕ್ಕೆ ಅನುಗುಣವಾಗಿ ವಿತರಿಸಿದರು. ಜೊತೆಗೆ ಶೋಷಿತ ಬದುಕನ್ನು ಹಸನಗೊಳಿಸುವ ಸಲುವಾಗಿ ವಿವಿಧ ಪರಿಚ್ಛೇದಗಳನ್ನು ಅಳವಡಿಸಿ ದಲಿತ ಮತ್ತು ಇತರೆ ಹಿಂದುಳಿದ ಸಮುದಾಯಗಳಿಗೆ ಆಶಾ ಕಿರಣವಾಗಿ ಹೊರಹೊಮ್ಮಿದರು ಎಂಬ ಮಾಹಿತಿ ತಿಳಿಸಿದ್ದಾರೆ.
- **Sandeep Shastri (2011) “Karnataka Politics”** ಈ ಪುಸ್ತಕವು ಇಡೀ ಕರ್ನಾಟಕ ರಾಜ್ಯದ ರಾಜಕೀಯ ನಡೆಯ ಸವಿಸ್ತಾರದ ಕೈಗನ್ನಡಿಯಂತಿದೆ, ಮೈಸೂರು ಪ್ರಾಂತ್ಯದ ಸಂದರ್ಭದಲ್ಲಿ ರಾಜಕೀಯ ಮತ್ತು ಸಾಮಾಜಿಕ ಸುಧಾರಣೆ ಮತ್ತು ಬೆಳವಣಿಗೆ ಜೊತೆಗೆ ಕರ್ನಾಟಕ ಏಕೀಕರಣಗೊಂಡ ನಂತರದ ರಾಜಕೀಯ ಬೆಳವಣಿಗೆ ಜೊತೆಗೆ ಕರ್ನಾಟಕವನ್ನು ಆಳ್ವಿಕೆ ಮಾಡಿದಂತಹ ಕಾಂಗ್ರೆಸ್ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳ ಐತಿಹಾಸಿಕ ದಾಖಲಾತಿ ಚುನಾವಣೆಯ ಫಲಿತಾಂಶದ ಏಳುಬೀಳು ಹಾಗೂ ಕಾಂಗ್ರೆಸ್ ಪ್ರಭುತ್ವ 2008ರಲ್ಲಿ ತೀರ ಕೆಳಮಟ್ಟಕ್ಕೆ ಇಳಿದ ಪರಿಣಾಮವಾಗಿ ಬಿಜೆಪಿಯ ಆಳ್ವಿಕೆಗೆ ಅವಕಾಶವಾದದ್ದು ಮತ್ತು ೨೦೦೪ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕ ರಾಜ್ಯದ ಕೊಡುಗೆ ಎಷ್ಟಿತ್ತು ಎಂಬುದನ್ನು ಈ ಪುಸ್ತಕದಲ್ಲಿ ಸವಿಸ್ತಾರವಾಗಿ ಚಿತ್ರಿಸಿದ್ದಾರೆ.
- **Kuldeep Singh (2012) “Human Rights and Social Justice”** ಈ ಪುಸ್ತಕದಲ್ಲಿ ಮಾನವನನ್ನು ಸಮಾನವಾಗಿ ಕಾಣುವುದೇ ನ್ಯಾಯ, ಅವರಿಗೆ ಮುಕ್ತ ಅವಕಾಶ ಮತ್ತು ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ತಾರತಮ್ಯ ಎಣಿಸಿದೆ ಸಂಪೂರ್ಣ ಮಾನವ ಜನಾಂಗಕ್ಕೆ ಸಮಾನ ಅದ್ಯತೆ ನೀಡಬೇಕು. ಆ ಮೂಲಕ ವ್ಯಕ್ತಿ ಮತ್ತು ಸಂವಿಧಾನಕ್ಕೆ ಗೌರವ ಸೂಚಸಬೇಕು ಎಂದು ತಿಳಿಸಿದ್ದಾರೆ.

- **Muzafar Assadi (2011) "Human Rights and Social Justice"** ಈ ಸಂಪಾದಕೀಯದಲ್ಲಿ ಸಾಮಾಜಿಕ ರಕ್ಷಣೆಯನ್ನು ತುಳಿತಕ್ಕೆ ಮತ್ತು ದಾಸ್ಯಕ್ಕೆ ಒಳಗಾದ ಮತ್ತು ಮಹಿಳೆ ಹಾಗೂ ಮಕ್ಕಳಿಗೆ ನೀಡುವುದೇ ಸಾಮಾಜಿಕ ನ್ಯಾಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗಳನ್ನು ನೋಡಿಕೊಂಡು ಸರ್ಕಾರಗಳು ಅಗತ್ಯ ಸೌಕರ್ಯ ಮತ್ತು ಭದ್ರತೆಯನ್ನು ಒದಗಿಸಿ ಸಾಮರಸ್ಯ ಕಾಪಾಡುವ ಮೂಲಕ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ಅಗತ್ಯ ಜರೂರು ಇದೆ ಎಂದು ತಿಳಿಸಿದ್ದಾರೆ.
- **Camilla Orjuela, (2008) "The identity politics of peace building** ಈ ಪುಸ್ತಕದಲ್ಲಿ ಐಡೆಂಟಿಟಿ ರಾಜಕಾರಣದ ಕುರುಹಾಗಿ ಎಲ್ಲಾ ರಾಷ್ಟ್ರದ ವಲಸೆವಾಸಿಗಳು, ತುಳಿತಕ್ಕೆ ಒಳಗಾದ ಜನರು, ಸಮಾಜದಲ್ಲಿ ಒಂದು ಅಸ್ಮಿತೆಯೆ ಇಲ್ಲದಿರುವ ಜನಾಂಗಗಳು ತಮ್ಮ ಐಡೆಂಟಿಗಾಗಿ ಶಾಂತಿಯ ಮಾರ್ಗದ ಮೂಲಕ ಹೋರಾಟ ಮಾಡುತ್ತಿರುವುದನ್ನು ಲೇಖಕರು ತಿಳಿಸಿದ್ದಾರೆ.

Journals and Magazines

- **IJPS – (2015)"The Indian Journal of Political Science** C.P. Barthwal - Editor F ನಿಯತಕಾಲಿಕೆಯಲ್ಲಿ Dr. Mahammad Viquaruddin "Social and Political Movement in India Renaissance in process"ಎಂಬ ಲೇಖನದಲ್ಲಿ ಮಾಸ್ ಚಳುವಳಿ ಮತ್ತು ಮಾಸ್ ಸೊಸೈಟಿಯ ವ್ಯತ್ಯಾಸವನ್ನು ತಿಳಿಸಿದ್ದಾರೆ ಮತ್ತು ಸುಧಾರಣೆ ಚಳುವಳಿಯ ವಿಧಗಳಾದ, Revolutionary Movement, Reactionary Movement, Resistance Movement, Utopian Movement, Peasant Movement, Women's Movement, Backward Caste Movement, Dalith Movement ಮತ್ತು ಸಾಮಾಜೀಕರಣ ಮತ್ತು ರಾಜಕೀಯ ಸಂಸ್ಕೃತಿಯು ಈ ಚಳುವಳಿಗಳ ಮೇಲೆ ಹೇಗೆ ಪರಿಣಾಮ ಬೀರಿದೆ ಎಂಬುದನ್ನು ತಿಳಿಸಿದ್ದಾರೆ.

1.6 ಸಂಶೋಧನಾ ಅಂತರ (ಗ್ಯಾಪ್)

"ಕರ್ನಾಟಕದ ಕಾಂಗ್ರೆಸ್ ಆಡಳಿದಲ್ಲಿ 'ಸಾಮಾಜಿಕ ನ್ಯಾಯ': ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ". ಎಂಬ ಪ್ರಸ್ತುತ ವಸ್ತು ವಿಷಯಯದ ಮೇಲೆ ಪ್ರಕಟವಾಗಿರುವ ಸಂಶೋಧನೆಗಳು ಬಹಳ ವಿರಳದಲ್ಲೆ ವಿರಳವಾಗಿರುತ್ತದೆ ಎಂಬುದನ್ನು ತಿಳಿಸಲಾಗಿದೆ. ಅದರಲ್ಲೂ ಅಹಿಂದ ವರ್ಗಕ್ಕೆ ಸಂಬಂಧಿಸಿದಂತೆ ಅಧ್ಯಯನಗಳು ಪ್ರಸ್ತುತದವರೆಗೂ ಸಂಶೋಧನಾ ಪ್ರಕ್ರಿಯೆಗಳ ವ್ಯಾಪ್ತಿಯಲ್ಲಿ ಅಷ್ಟಾಗಿ ನಡೆದಿರುವುದಿಲ್ಲ. ಭಾರತ ಹಾಗೂ ರಾಜ್ಯ ವ್ಯಾಪ್ತಿಗೆ ಸಂಬಂಧಿಸಿದಂತೆ 'ಸಾಮಾಜಿಕ ನ್ಯಾಯ' ವಿಷಯಕ್ಕೆ ಅನುಗುಣವಾಗಿ ಅನೇಕ ಸಂಶೋಧಕರು, ವಿದ್ವಾಂಸರು ಮತ್ತು ಚಿಂತಕರು ತಮ್ಮದೇ ಆದ ವಿವೇಚನಾಶಕ್ತಿಗೆ ಒಳಪಟ್ಟಂತೆ ಸಂಶೋಧನಾ ಚಿಂತನೆಗಳನ್ನು ಪ್ರಸ್ತುತ ವ್ಯವಸ್ಥೆಗೆ ಕೊಡುಗೆಯಾಗಿ ನೀಡಿರುತ್ತಾರೆ.

ಇದುವರೆಗೂ ಈ ವಸ್ತು ವಿಷಯಕ್ಕ ಅನುಗುಣವಾಗಿ ಕೆಲವು ಸಂಶೋಧನೆಗಳು ಮಾತ್ರ ನಡೆದಿವೆ ಅವುಗಳೆಂದರೆ "ಕರ್ನಾಟಕದ ರಾಜಕೀಯದಲ್ಲಿ ಸಿದ್ದರಾಮಯ್ಯನವರ ಪಾತ್ರ ಒಂದು ಅಧ್ಯಯನ" ಎಂಬ ವಿಷಯದವನ್ನು ಹೊಸಗೂರು ಮಂಜುನಾಥ್ ಅವರು ಕರ್ನಾಟಕ ವಿವಿ ದಾರವಾಡದಲ್ಲಿ ಸಂಶೋಧನೆ ನಡೆಸಿದ್ದಾರೆ ಇವರು ಸಿದ್ದರಾಮಯ್ಯನವರ ರಾಜಕೀಯ ಜೀವನದ ಏಳುಬೀಳು ಮತ್ತು ಸಾಧನೆಗಳ ಬಗ್ಗೆ ಸಂಶೋಧನೆ ನಡೆಸಿದ್ದಾರೆ. ಆದರೆ ಕರ್ನಾಟಕದ ಸಂದರ್ಭದಲ್ಲಿ ಅಹಿಂದ ಚಳುವಳಿ ಮತ್ತು ರಾಜಕಾರಣ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಕಾಂಗ್ರೆಸ್ ನೀಡಿದ ಕೊಡುಗೆಗಳ ಬಗ್ಗೆ ಅಷ್ಟೇನು ಬೆಳಕನ್ನು ಬೀರಿಲ್ಲ. **ಈ ಅಂತರವನ್ನು ಪ್ರಸ್ತುತ ಸಂಶೋಧನೆಯಲ್ಲಿ ಕಟ್ಟಿಕೊಡುವ ಕಾರ್ಯವಾಗಿದೆ.** "ಕರ್ನಾಟಕದ ರಾಜಕೀಯದಲ್ಲಿ ಜನತಾದಳ ಪಕ್ಷ ಪಾತ್ರ ಒಂದು ಅಧ್ಯಯನ" ದೇವಿಕ ಎನ್.ಸಿ ಎನ್ನುವವರು ಬೆಂಗಳೂರು ವಿವಿಯಲ್ಲಿ ಅಧ್ಯಯನ ನಡೆಸಿದ್ದಾರೆ ಅವರು ಸಿದ್ದರಾಮಯ್ಯನವರ ರಾಜಕಾರಣದ ಸಂಗತಿಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ವಿವಿಧ ವಿಸ್ತೃತ ರೂಪಗಳಲ್ಲಿ ಸಂಶೊಧನಾ ಪ್ರಕ್ರಿಯೆಗಳನ್ನು ಗಾಂಭೀರ್ಯವಾಗಿ ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸಿದಾಗ ಸಾಮಾಜಿಕ ನ್ಯಾಯಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯಕ್ಕೆ ಅನುಗುಣವಾಗಿ ಅನೇಕ ಲೇಖನಗಳು ಸಾಕ್ಷಿಯಾಗಿರುವುದನ್ನು ಸಂಶೋಧಕನಾಗಿ ಗುರುತಿಸುವಲ್ಲಿ ಯಶಸ್ವಿಯಾಗಬಹುದಾಗಿದೆ. ಆದರೆ ಸಾಮಾಜಿಕ ನ್ಯಾಯವು ಒಂದು ಪಕ್ಷದ ದೃಷ್ಟಿಕೋನದ ಮೂಲಕ ರಾಜ್ಯದ ವ್ಯವಸ್ಥೆಗೆ ಅನುಗುಣವಾಗಿ ನಡೆದಿರುವಂತಹ ಸಂಶೋಧನಾ ಪ್ರಕಟಣೆಗಳು ತುಂಬಾ ವಿರಳವಾಗಿರುವುದು ಕಂಡುಬಂದಿದೆ.

ವಿಶೇಷವಾಗಿ ಕರ್ನಾಟಕದ ಕಾಂಗ್ರೆಸ್ ಆಡಳಿತಕ್ಕೆ ಸಂಬಂಧಿಸಿದ ಸಾಮಾಜಿಕ ನ್ಯಾಯಕ್ಕೆ ಅನುಗುಣವಾಗಿ ಯಾರು ಸಹ ದೃಷ್ಠಿ ನೆಟ್ಟಿಲ್ಲದಿರುವುದು (ಸಂಶೋಧನೆ ನಡೆದಿಲ್ಲ)ಕಂಡುಬಂದಿದೆ. ವಿಶೇಷವಾಗಿ ಅಹಿಂದ ಚಳುವಳಿ ಬಗ್ಗೆ ಇದುವರೆಗೂ ಯಾರು ಸಂಶೋಧನೆಯನ್ನು ಪ್ರಕಟನೆ ಮಾಡಿಲ್ಲದಿರುವುದು ಕಂಡು ಬಂದ ಕಾರಣ ಈ (ಅಂತರ) ಗ್ಯಾಪ್‌ನ್ನು ಪ್ರಸ್ತುತ ಸಂಶೋಧನೆಯಲ್ಲಿ ತುಂಬುವ ಮಹೋನ್ನತ ಜವಾಬ್ದಾರಿಯು ಸಹ ಸಾಗಿದೆ. ಆದ ಕಾರಣ ಈ ಸಂಶೋಧನಾ ಪ್ರಕ್ರಿಯೆಯಲ್ಲಿ ಅದರ ಅಂತರವನ್ನು ಗಮನಿಸಿ, ಒಬ್ಬ ಸಂಶೋಧಕನಾಗಿ ವೈಚಾರಿಕ, ವೈಜ್ಞಾನಿಕ ನೆಲೆಗಟ್ಟಿನಲ್ಲಿ ಗತಕಾಲದ ಇತಿಹಾಸವನ್ನು ಹೊಂದಿರುವ ಕಾಂಗ್ರೆಸ್ ಪಕ್ಷವು ತನ್ನ ಮುಖ್ಯ ಅಜೆಂಡವನ್ನಾಗಿ ನೆಲೆಕಂಡುಕೊಂಡಿರುವ 'ಸಾಮಾಜಿಕ ನ್ಯಾಯ' ತತ್ವಸಿದ್ಧಾಂತವನ್ನು ಪಾಲಿಸಿಕೊಂಡು ಯಾವ ಯಾವ ಆಯಾಮಗಳ ಮೂಲಕ ಬರುತ್ತಿದೆ. ಮತ್ತು ಕಾಂಗ್ರೆಸ್ ಪಕ್ಷವು ಅಹಿಂದ ವರ್ಗಕ್ಕೆ ಇತಿಹಾಸ ಪೂರ್ವದಿಂದಲು ಹಲವು ಪ್ರಗತಿಪರ ಹಾಗೂ ಪ್ರಗತಿದಾಯಕ ಮತ್ತು ಸಬಲೀಕರಣ ಕೇಂದ್ರಿತ ಯೋಜನೆಗಳನ್ನು, ಕಾಯ್ದೆ–ಕಾನೂನುಗಳನ್ನು ಮಾಡಿಕೊಂಡು ಬರುತ್ತಿರುವುದರ ಈ ಬಗ್ಗೆ, ಯಾರು ಸಹ ನಿಖರವಾಗಿ ಕಂಡುಕೊಂಡಿಲ್ಲ ಈ ಅಂತರವನ್ನು ಇದುವರೆಗೂ ಯಾರು ಸಹ ಸಮಾಜದ ಓರೆಗೆ ಹಚ್ಚುವ ಕಾರ್ಯವನ್ನು ಅಷ್ಟಾಗಿ ಮಾಡಿಲ್ಲದಿರುವುದು ಕಂಡುಬಂದಿದೆ. ಜೊತೆಗೆ ಈ ವಿಷಯವು ಪ್ರಸ್ತುತ ಸಂಶೋಧನಾ ಕಾರ್ಯದ ಪ್ರಮುಖ ವಿಷಯವಾಗಿರುವುದರಿಂದ ಈ ಪ್ರಗತಿದಾಯಕ ಕಾರ್ಯವನ್ನು ಸಂಶೋಧನೆಯ ಮೂಲಕ ಸಾರ್ವತ್ರೀಕರಣಗೊಳಿಸಲು ಪ್ರಯತ್ನಿಸಲಾಗಿದೆ.

ಕರ್ನಾಟಕದ ಸಂಶೋಧನಾ ವಿಷಯಗಳನ್ನು ಒಳಹೊಕ್ಕು ಗಮನಿಸಿದಾಗ ಬಹಳ ತೀರವಾಗಿ ವಿಮರ್ಶಾತ್ಮಕ ವಿಶ್ಲೇಷಣೆಯು ಪ್ರಮುಖವಾಗಿ ರಾಜಕೀಯ ನೇತಾರರಲ್ಲಿ ಕಂಡುಬರುವ ಡಿ. ದೇವರಾಜ ಅರಸು ಮತ್ತು ಸಿದ್ದರಾಮಯ್ಯನವರ ಪ್ರಬುದ್ಧ ರಾಜಕಾರಣದ ಚಿಂತನಾಲಹರಿಯ ಸಂಶೋಧನಾ ಪ್ರಕ್ರಿಯೆಗಳು ಅಷ್ಟಾಗಿ ಪರಿಪೂರ್ಣತೆಯನ್ನು ಪಡೆಯುವಲ್ಲಿ ವಿಫಲವಾಗಿದೆ. ರಾಜ್ಯದಲ್ಲಿ ಸಾಮಾಜಿಕ ನ್ಯಾಯವೆಂದಾಗ ಜನರ ಮನಸ್ಸಿಗೆ ಕ್ಷಣಾರ್ಧದಲ್ಲಿ ಪರಿಪಠಿಸುವ ನಾಯಕರೆಂದರೆ ಡಿ. ದೇವರಾಜ ಅರಸು ಮತ್ತು ಸಿದ್ದರಾಮಯ್ಯನವರು. ಇವರಿಬ್ಬರ ಯೋಜನೆಗಳು ಮತ್ತು ಭಾಗ್ಯ ಯೋಜನೆಗಳು ಹಾಗೂ ಹಸಿವು ಮುಕ್ತ, ಗುಡಿಸಲು ಮುಕ್ತ ಸಂಕಲ್ಪದ ಕಾರ್ಯಕ್ರಮಗಳು ಜನಮಾನಸದಲ್ಲಿ ಉಳಿಯುವಂತೆ ಮಾಡಿದ ಕಾರ್ಯವನ್ನು ಜನತೆಗೆ ತಲುಪಿಸುವಲ್ಲಿ ವಿರಳವಾದ ಶೋಧನೆಗಳು ನಡೆದಿವೆ ಈ ಅಂತರವನ್ನು ಸಮಾಜದ ಓರೆಗೆ ಹಚ್ಚುವುದು ಹಾಗೂ ಅಸ್ಮಿತೆ ರಾಜಕಾರಣದ ಭಾಗವಾಗಿ ಜನಿಸಿದ "ಅಹಿಂದ ಚಳುವಳಿ" ಅದರ ವಾಪಸ್ಸಾತಿ, ಸಾಧಕ–ಬಾಧಕಗಳನ್ನು ಸಹ ಚರ್ಚಿಸುವುದು ಮುಖ್ಯವಾದ ಸಂಶೋಧನಾ ಅಜೆಂಡಾವಾಗಿದೆ. ಆದ ಕಾರಣ ಪ್ರಸ್ತುತ ಶೋಧನೆಯ ವಿಚಾರ ಲಹರಿಯನ್ನು ಅರಸು, ಸಿದ್ದರಾಮಯ್ಯನವರ ಆಡಳಿತಾವಧಿಯಲ್ಲಿ ನಡೆದ ಸಾಮಾಜಿಕ ನ್ಯಾಯವನ್ನು, ಈ ನಾಯಕರಿಬ್ಬರ ಆಡಳಿತಾಧಿಯ ವಸ್ತುಸ್ಥಿತಿಗೆ ಅನುಗುಣವಾಗಿ ಓರೆಗೆ ಹಚ್ಚುವ ಕಾರ್ಯವು ಸಂಶೋಧನೆಯ ಉದ್ದೇಶಗಳಲ್ಲಿ ಪ್ರಮುಖವಾದ ಆದ್ಯತೆಯ ಮೇರೆಗೆ ಚಿಂತಿಸುವಲ್ಲಿ ಯಶಸ್ವಿಯಾಗಿದೆ.

ಈ ಮೇಲ್ಕಂಡಂತೆ ಸಂಶೋಧನೆಯ ಅಂತರವನ್ನು, ಸಂಶೋಧಕನಾಗಿ ವೈಚಾರಿಕವಾಗಿ ಹಾಗೂ ವೈಜ್ಞಾನಿಕವಾಗಿ, ಗಮನಿಸಿದಾಗ ಒಬ್ಬ ಸಂಶೋಧಕನಾಗಿ ಸಂಶೋಧನಾ ಅಂತರವನ್ನು ಪತ್ತೆ ಹಚ್ಚಿ ಆ ಅಂತರಕ್ಕೆ ಅನುಗುಣವಾಗಿ ಸಂಶೋಧನೆಯ ಸಮಸ್ಯೆಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದು ಸಂಶೋಧನೆಯ ಬಹಳ ಪ್ರಮುಖವಾದ ಅಂಗವಾಗಿದೆ. ಆದ್ದರಿಂದ ಸಂಶೋಧನೆಯ ಅಂತರಕ್ಕೆ ಅನುಗುಣವಾಗಿ ಸೂಕ್ಷ್ಮವಾಗಿ, ಎಳೆಎಳೆಯಾಗಿ ಸಂಶೋಧನಾ ಉದ್ದೇಶಗಳನ್ನು ಈ ಕೆಳಕಂಡಂತೆ ಕಂಡುಕೊಳ್ಳಲಾಗಿದೆ.

1.7 ಅಧ್ಯಯನದ ಉದ್ದೇಶ

"ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ': ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ" ಎಂಬ ಈ ಸಂಶೋಧನಾ ವಿಷಯವು ತನ್ನದೇ ಆದ ಹಲವು ಸದುದ್ದೇಶಗಳನ್ನು ಒಳಗೊಂಡಿದೆ.

1. ಕರ್ನಾಟಕದಲ್ಲಿ ದೇವರಾಜ ಅರಸು ಮತ್ತು ಸಿದ್ದರಾಮಯ್ಯನವರ ಸಾಮಾಜಿಕ ನ್ಯಾಯ ಪ್ರೇರಿತ ಆಡಳಿತದ ಬಗ್ಗೆ ವಿಶ್ಲೇಷಣಾತ್ಮಕ ಅಧ್ಯಯನ ಕೈಗೊಳ್ಳುವುದು.
2. ಕರ್ನಾಟಕದಲ್ಲಿ ಜಾತ್ಯಾತೀತ ಮತ್ತು ಅಸ್ಮಿತೆ ರಾಜಕಾರಣದ ಭಾಗವಾಗಿ ಅಹಿಂದ ಪರಿಕಲ್ಪನೆಯು ಹೇಗೆ ಹುಟ್ಟಿತು, ಮತ್ತು ಬೆಳೆಯಿತು, ಅದಕ್ಕೆ ಕಾರಣೀಭೂತವಾದ ಅಂಶಗಳೇನು ಎಂಬುದನ್ನು ಅಧ್ಯಯನ ಮಾಡುವುದು.

3. ಅಹಿಂದ ಎಂಬ ಪರಿಕಲ್ಪನೆಯು ಕರ್ನಾಟಕದ ಸಾಮಾಜಿಕ ನ್ಯಾಯ ಮತ್ತು ಸಾಂಸ್ಕೃತಿಕ ಅನನ್ಯತೆಯ ಭಾಗವಾಗಿದ್ದೇಕೆ? ಅದರ ಹಿನ್ನಡೆಗೆ ಕಾರಣಗಳೇನು? ಇದರ ಮರು ಹುಟ್ಟು (ರೀ: ಎಮರ್ಜ್) ಯಾರಿಂದ! ಯಾರಿಗಾಗಿ! ಹೇಗೆ! ಯಾವಾಗ! ಎಂಬ ಸೂಕ್ಷ್ಮತೆಗಳನ್ನು ಚರ್ಚೆಗೆ ಒಳಪಡಿಸುವುದೇ ಪ್ರಮುಖ ಉದ್ದೇಶವಾಗಿದೆ.
4. ಕರ್ನಾಟಕದ ಸಂದರ್ಭದಲ್ಲಿ ಅಹಿಂದ ಚಳುವಳಿಯ ಉಗಮ ಮತ್ತು ಬೆಳವಣಿಗೆ ಹಾಗೂ ಹಿನ್ನಡೆ ಬಗ್ಗೆ ಚರ್ಚಿಸುವುದು ಮತ್ತು ಕರ್ನಾಟಕದ ಸಾಮಾಜಿಕ ಸಂದರ್ಭದಲ್ಲಿ ಅಹಿಂದ ವರ್ಗದ ಸ್ಥಿತಿ–ಗತಿಗಳನ್ನು ಅಂಕಿಅಂಶಗಳ ಸಮೇತ ವಿಶ್ಲೇಷಣಾತ್ಮಕ ಅಧ್ಯಯನ ಮಾಡುವುದು.
5. ದೇವರಾಜ ಅರಸು ಮತ್ತು ಸಿದ್ದರಾಮಯ್ಯನವರು ಸಾಮಾಜಿಕ ನ್ಯಾಯದ ಅನುಷ್ಠಾನಕ್ಕಾಗಿ ಜಾರಿಗೆ ತಂದ ಜನಪ್ರಿಯ ಯೋಜನೆಗಳನ್ನು ವಿಶ್ಲೇಷಣಾತ್ಮಕ ಅಧ್ಯಯನಕ್ಕೊಳಪಡಿಸುವುದು ಹಾಗೂ 'ಭಾಗ್ಯಯೋಜನೆ'ಗಳ ಮೂಲಕ ಸಾಧಿಸಲ್ಪಟ್ಟ ಸಾಮಾಜಿಕ ನ್ಯಾಯವನ್ನು ಪತ್ತೆ ಹಚ್ಚುವುದು.
6. ಕರ್ನಾಟಕದಲ್ಲಿ ಅಹಿಂದ ವರ್ಗದವರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಹಾಗೂ ರಾಜಕೀಯ ಸುಧಾರಣೆ ಮತ್ತು ಸಬಲೀಕರಣವೇ ಕಾಂಗ್ರೆಸ್ ಆಡಳಿತದ ಪ್ರಮುಖ ಕಾರ್ಯಸೂಚಿಯಾಗಿತ್ತು. ಎಂಬುದನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಕೈಗೊಳ್ಳುವುದು.
7. ಕರ್ನಾಟಕ ರಾಜ್ಯವು ಹಸಿವು ಮುಕ್ತ ಮತ್ತು ಗುಡಿಸಲು ಮುಕ್ತ ರಾಜ್ಯವಾಗಿದೆಯೇ? ಎಂಬುದನ್ನು ಕಂಡುಕೊಳ್ಳುವುದು ಹಾಗೂ "ನವ ಕರ್ನಾಟಕದ ಅಭಿವೃದ್ಧಿ ಮಾದರಿ"ಗಾಗಿ ಜಾರಿಗೆ ತಂದ ಹಲವು ಭಾಗ್ಯ ಯೋಜನೆಗಳಿಂದ ರಾಜ್ಯಕ್ಕೆ ಉಪಯುಕ್ತವಾಗಿದೆಯೇ? ಹಾಗೂ ಅಹಿಂದ ವರ್ಗಗಳನ್ನು ಸಬಲೀಕರಣಗೊಳಿಸಲಾಗಿದೆಯೇ? ಎಂಬುದನ್ನು ವಿಶ್ಲೇಷಿಸುವುದು.

1.8 ಪ್ರಾಕ್‌ಕಲ್ಪನೆಗಳು

"ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ': ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ" ಎಂಬ ಸಂಶೋಧನಾ ವಸ್ತುವಿಷಯವು "ಹೈಪಥಿಟಿಕಲ್ ಸ್ಟಡಿ"ಯಾಗಿದೆ ಎಂಬುದನ್ನು ದೃಡಿಕರಿಸಲಾಗಿದೆ. ಆದ್ದರಿಂದ ಈ ಅಧ್ಯಯನದ ಊಹೆ ಅಥವಾ ಕಲ್ಪನೆ ಈ ಪರಿಯಿದೆ.

1. **'ಧರ್ಮ'** ಮತ್ತು **'ಜಾತಿ'**ಯ ಕಾರಣಕ್ಕಾಗಿ ಅಹಿಂದ ವರ್ಗದವರು ಸಾವಿರಾರು ವರ್ಷಗಳಿಂದಲೂ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಒಂದು ಸವಾಲಾಗಿಯೇ ಇದ್ದಾರೆ ಹಾಗೂ ಹಿಂದುಳಿದಿದ್ದಾರೆ!.
2. ಸಿದ್ದರಾಮಯ್ಯ ಮತ್ತು ದೇವರಾಜ ಅರಸರ ಕಾಂಗ್ರೆಸ್ ಆಡಳಿತದಲ್ಲಿ ಸಾಮಾಜಿಕ ನ್ಯಾಯದ ತಳಹದಿಯಲ್ಲಿ 'ಅಹಿಂದ' ವರ್ಗದವರನ್ನು ಸಬಲೀಕರಣಗೊಳಿಸಲಾಗುತ್ತಿದೆ.
3. ಅಹಿಂದ ಚಳುವಳಿಯು ಜಾತ್ಯಾತೀತತೆಯ ಹಾಗೂ ಅಸ್ಮಿತೆ ರಾಜಕಾರಣದ ಒಂದು ಭಾಗವಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಒಂದು ಬೃಹತ್ ರಾಜಕೀಯ ಸಂಘಟನಾ ಶಕ್ತಿಯಾಗಿದೆ!
4. ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ'ಕ್ಕೆ ಸಂಬಂಧಿಸಿದಂತೆ 'ಅಹಿಂದ' ವರ್ಗದವರು ಸರಕಾರದ ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಹಾಗಾಗಿ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯವು 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ತೃಪ್ತಿಕರವಾಗಿದೆ.
5. ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ ಪ್ರಗತಿಪರ, ಅಭಿವೃದ್ಧಿಪರ, ಶೋಷಿತ–ಹಿಂದುಳಿದ, ಅಲ್ಪಸಂಖ್ಯಾತ, ಮಹಿಳಾ ಸಬಲೀಕರಣ ಮತ್ತು ವಿಮೋಚನಾ ಕೇಂದ್ರಿತ ಆಡಳಿತಕ್ಕಾಗಿ ಜಾರಿಗೆ ತಂದ ಹಲವು ಭಾಗ್ಯಯೋಜನೆಗಳು ರಾಜ್ಯವನ್ನು "ಹಸಿವು ಮುಕ್ತ–ಗುಡಿಸಲು ಮುಕ್ತ ಕರ್ನಾಟಕವನ್ನಾಗಿ ಮಾಡಿವೆ!

1.9 ಅಧ್ಯಯನ ವಿಧಾನ

ಈ ಸಂಶೋಧನಾ ವಿಧಾನವು ಪ್ರಮುಖವಾಗಿ ಎರಡು ಆಧಾರಗಳ ಮೂಲಕ ಅಂದರೆ ಪ್ರಾಥಮಿಕ ಮತ್ತು ಮಾದ್ಯಮಿಕ ಮೂಲಾಧಾರಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಮಾಹಿತಿಯನ್ನು ಕಲೆಹಾಕುವಲ್ಲಿ ಕೆಲವು ಪ್ರಮುಖ ಸಂಶೋಧನಾ ವಿಧಾನಗಳನ್ನು ಬಳಸಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ, ಅವುಗಳು ಈ ಕೆಳಕಂಡಂತಿವೆ.

1. ಪ್ರಸ್ತುತ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಈ ಅಧ್ಯಯನವು 'ಐತಿಹಾಸಿಕ ವಿಧಾನ'ದ ಮೂಲಕ ಕಾಂಗ್ರೆಸ್ ಆಡಳಿತದ ಹಿನ್ನೆಲೆ ಹಾಗೂ ಅದರ ಆಧಾರದ ಮೇಲೆ ಎಲ್ಲಾ ಸಾಮಾಜಿಕ ನ್ಯಾಯ ಪ್ರೇರಿತ ಆಡಳಿತಾತ್ಮಕ ಸುಧಾರಣೆ, ಹಾಗೂ ಯೋಜನೆಗಳನ್ನು ಐತಿಹಾಸಿಕ ವಿಧಾನದ ಮೂಲಕ ಕಂಡುಕೊಳ್ಳಲಾಗಿದೆ. ಅಹಿಂದ ಚಳುವಳಿಯ ಐತಿಹಾಸಿಕ ಹಿನ್ನೆಲೆಯನ್ನು ಕಂಡುಕೊಳ್ಳಲಾಗಿದೆ.
2. 'ವಿಶ್ಲೇಷಣಾ' ಮತ್ತು 'ವಿವರಣಾತ್ಮಕ ವಿಧಾನ'ಗಳ ಮೂಲಕ ಎಲ್ಲಾ ಸಂಗ್ರಹಿತ ಮಾಹಿತಿಗಳನ್ನು ರಚನಾತ್ಮಕವಾಗಿ, ಕ್ರಮಬದ್ಧವಾಗಿ, ವಸ್ತು ನಿಷ್ಟವಾಗಿ ಹಾಗೂ ವ್ಯವಸ್ಥಿತವಾಗಿ, ವೈಚಾರಿಕವಾಗಿ ಹಾಗೂ ವೈಜ್ಞಾನಿಕವಾಗಿ ವಿಶ್ಲೇಷಿಸಿ ವಿವರಣಾತ್ಮಕವಾಗಿ ನಿರೂಪಿಸಲಾಗಿದೆ.
3. 'ಅವಲೋಕನದ ತಂತ್ರದ ಮೂಲಕ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ' ಮತ್ತು 'ಅಹಿಂದ' ವರ್ಗದವರ ವಾಸ್ತವ ಸ್ಥಿತಿಗತಿಯನ್ನು ಮತ್ತು ನೈಜತೆಯನ್ನು ಅರಿಯಲು ಸಾದ್ಯವಾಗಿದೆ. ಜೊತೆಗೆ ಅಹಿಂದ ಚಳುವಳಿಯ ಸಾಧಕ–ಬಾಧಕಗಳ ಬಗ್ಗೆ ಅವಲೋಕಿಸಲಾಗಿದೆ.
4. ಕಾಂಗ್ರೆಸ್ ಆಡಳಿತದಲ್ಲಿ ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದಂತೆ ಅಹಿಂದ ವರ್ಗದವರ (ರಾಜಕೀಯ ನಾಯಕರು ಮತ್ತು ಜನಸಮುದಾಯಗಳು) ಭಾಗವಹಿಸುವಿಕೆಯನ್ನು 'ಕ್ಷೇತ್ರಕಾರ್ಯ' ಮತ್ತು 'ಸಮಗ್ರ ಸಮೀಕ್ಷಾ' ತಂತ್ರದ ಮೂಲಕ ವಿಷಯವನ್ನು ಅಧ್ಯಯನ ಮಾಡಲಾಗಿ ಅಹಿಂದದ ಸ್ಥಿತಿಗತಿಗಳನ್ನು ಕಂಡುಕೊಳ್ಳಲು ಸಾಧ್ಯವಾಗಿದೆ.
5. 'ಪ್ರಾಯೋಗಿಕ' ವಿಧಾನವನ್ನು 'ಸಂದರ್ಶನ' ತಂತ್ರದ ಮೂಲಕ ಪ್ರಶ್ನಾವಳಿಯನ್ನು ರಚಿಸಿ ಪ್ರಯೋಗಾತ್ಮಕವಾಗಿ 'ಅಹಿಂದ' ನಾಯಕರ 'ಸಾಮಾಜಿಕ ನ್ಯಾಯ'ವನ್ನು ಸಮಾಜಮುಖಿ ಚರ್ಯೆಗೆ ತೊರ್ಪಡಿಸಲಾಗಿದೆ. ಮತ್ತು ಸಾಮಾನ್ಯ ನಾಗರೀಕರಾದ ಪ್ರತಿಫಲಾನುಭವಿಗಳ ಅಭಿಪ್ರಾಯವನ್ನ ತನಿಖೆಗೆ ಒಳಪಡಿಸಿ ನಿಜಾಂಶವನ್ನು ಕಂಡುಕೊಳ್ಳಲಾಗಿದೆ.
6. ಕಾನೂನು ಹಾಗೂ ಆಡಳಿತಾತ್ಮಕ ದೃಷ್ಟಿಕೋನ ಮತ್ತು ಸಂವಿಧಾನಾತ್ಮಕ ದೃಷ್ಟಿಕೋನದ ಮೇಲೆ ಬೆಳಕನ್ನು ಚೆಲ್ಲಲಾಗಿದೆ. ಅದರಂತೆ ಈ ಮೇಲಿನ ಎಲ್ಲಾ ವಿಧಾನಗಳ ಮತ್ತು ತಂತ್ರಗಳ ಮೂಲಕ ಅಧ್ಯಯನವನ್ನು ಕೈಗೊಂಡು ಮಾಹಿತಿಯನ್ನು ಕಲೆಹಾಕಲಾಗಿದೆ.

1.10 ಅಧ್ಯಯನದ ಆಧಾರ

ಪ್ರಸ್ತುತ ಅಧ್ಯಯನಕ್ಕೆ ಉಪಯುಕ್ತ ದತ್ತಾಂಶಗಳನ್ನು ಮತ್ತು ಮೂಲಭೂತ ಸಂಶೋಧನಾ ಮಾಹಿತಿಗಳನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಾಧಾರಗಳಿಂದ ಸಂಗ್ರಹಿಸಿಲಾಗಿದೆ. ಆದರೆ ಮಾಧ್ಯಮಿಕ ಆಧಾರದ (ಮಾಹಿತಿಯ) ಕೊರತೆ ಕಂಡುಬಂದಿರುವುದರಿಂದ ಮುಖ್ಯವಾಗಿ **ಪ್ರಸ್ತುತ ಸಂಶೋಧನಾ ವಸ್ತು ವಿಷಯವು ಪ್ರಾಥಮಿಕ ಆಧಾರ (ಮಾಹಿತಿ)ದ ಮೇಲೆ ಹೆಚ್ಚಿನ ಒತ್ತನ್ನು ನೀಡಲಾಗಿದೆ** (ಮಾಹಿತಿಯನ್ನು ಕಲೆಹಾಕಲಾಗಿದೆ) ಎಂಬುದನ್ನು ದೃಢೀಕರಿಸಲಾಗಿದೆ.

❖ **ಪ್ರಾಥಮಿಕ ಮೂಲಾಧಾರ:**

- ಕಾಂಗ್ರೆಸ್ ಆಡಳಿತದಲ್ಲಿನ ಮುಖ್ಯಮಂತ್ರಿಗಳು, ಮತ್ತು ಸಚಿವರುಗಳು ಅಧಿಕಾರಿಗಳು ಹಾಗೂ ಅಲ್ಲಿಯ ಸಿಬ್ಬಂದಿ ವರ್ಗದವರನ್ನು ಸಂಪರ್ಕಿಸಿ ಸಾಮಾಜಿಕ ನ್ಯಾಯ ಪ್ರೇರಿತ ಯೋಜನೆಗಳ ಬಗ್ಗೆ ಮಾಹಿತಿಯನ್ನು ಕಲೆಹಾಕಲಾಗಿದೆ. ಅಹಿಂದದವರ ತ್ವರಿತ ಪಾಲ್ಗೊಳ್ಳುವಿಕೆಯನ್ನು ಮೌಲ್ಯಮಾಪನ ವಿಧಾನ ಅನುಸರಿಸಿ ಮಾಹಿತಿಯನ್ನು ಕಲೆ ಹಾಕಲಾಗಿದೆ.
  - ಕರ್ನಾಟಕದ ಆಡಳಿತಾತ್ಮಕ ದೃಷ್ಠಿಯಿಂದ ವಿಭಜಿಸಲ್ಪಟ್ಟ 4 ವಿಭಾಗಗಳಾದ ಬೆಳಗಾವಿ, ಕಲುಬುರ್ಗಿ, ಬೆಂಗಳೂರು, ಹಾಗೂ ಮೈಸೂರು ವಿಭಾಗಗಳಿಗೆ ನೇರವಾಗಿ ಭೇಟಿ ನೀಡುವುದರ ಮೂಲಕ ಈ 16 ಜಿಲ್ಲೆಗಳ ಒಂದೊಂದು ತಾಲೂಕಿನ ಗ್ರಾಮೀಣ ನಗರ ಪ್ರದೇಶಗಳಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ಜಿಲ್ಲೆಗಳನ್ನು ಕ್ಷೇತ್ರಕಾರ್ಯಕ್ಕೆ ಒಳಪಡಿಸಿ ಸಂದರ್ಶನ ಮತ್ತು ಸಮೀಕ್ಷೆ ನಡೆಸಿ ಮಾಹಿತಿಯನ್ನು ಸಂಗ್ರಹಿಸಿ ಅದನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

❖ **ಮಾಧ್ಯಮಿಕ ಮೂಲಾಧಾರ:**

- ಸಂವಿಧಾನ ಸಭೆಯ ಚರ್ಚೆಗಳು, ಯೋಜನ(ನೀತಿ) ಆಯೋಗದ ವರದಿಗಳು, ರಾಜ್ಯ ಗೆಜೆಟಿಯರ್‌ಗಳ ಭಾಷಣಗಳನ್ನು ಸಂಗ್ರಹಿಸಲಾಗಿದೆ.

- ಅಹಿಂದ ವರ್ಗಕ್ಕೆ ಸಂಬಂಧಿಸಿದಂತೆ ಸರ್ಕಾರದ ವರದಿಗಳು, ಇಲಾಖಾ ಕೈಪಿಡಿಗಳು ಮಾಸಿಕ ವರದಿಗಳು, ವಾರ್ಷಿಕ ವರದಿಗಳು, ಕ್ರಿಯಾ ಯೋಜನೆಗಳು, ಅಹಿಂದ ಪರವಾಗಿರುವ ಪುಸ್ತಕಗಳನ್ನು, ಲೇಖನಗಳನ್ನು ಅಧ್ಯಯನ ಮಾಡುವ ಮೂಲಕ ಮಾಹಿತಿ ಸಂಗ್ರಹಿಸಿ ಪರಿಶೋಧನೆಗೆ ಬಳಸಿಕೊಳ್ಳಲಾಗಿದೆ.
- ಅಹಿಂದ ಸಮುದಾಯದ ಬಗೆಗೆ ಈಗಾಗಲೇ ಪ್ರಕಟಗೊಂಡಿರುವ ಪುಸ್ತಕಗಳು, ಲೇಖನಗಳು, ವೃತ್ತ ಪತ್ರಿಕಾ ವರದಿಗಳು ಹೀಗೆ ಅನೇಕ ವರದಿಗಳನ್ನು ಮತ್ತು ಕಾಂಗ್ರೆಸ್ ಆಡಳಿತಕ್ಕೆ ಸಂಬಂಧಿಸಿದಂತೆ ಅಹಿಂದ ವರ್ಗದವರ ಮಾಹಿತಿಗಳನ್ನು ಸಂಗ್ರಹಿಸಿ ಅದನ್ನು ಪೂರಕವಾಗಿ ಬಳಸಿಕೊಂಡು ವಿಶ್ಲೇಷಿಸಲಾಗಿದೆ.

❖ **ಮೌಖಿಕ ವಿಧಾನ:** ಕಾಂಗ್ರೆಸ್ ಪಕ್ಷದ ಇತಿಹಾಸ ಮತ್ತು ಆಡಳಿತದ ಬಗ್ಗೆ ಮಾಹಿತಿ ತಿಳಿದಿರುವ ಹಲವಾರು ಹಿರಿಯ ರಾಜಕೀಯ ಮುತ್ಸದ್ಧಿಗಳು ಮತ್ತು ಬುದ್ಧಿಜೀವಿಗಳಿಂದ ಮಾಹಿತಿಯನ್ನು ಪಡೆದು ಈ ಸಂಶೋಧನೆಯಲ್ಲಿ ಬಳಸಿಕೊಳ್ಳಲಾಗಿದೆ.

1.11 ಅಧ್ಯಯನದ ಮಾದರಿ ಅಥವಾ ವಿನ್ಯಾಸ

ಈ ಅಧ್ಯಯನವು ಬಹುಹಂತದ ವಿನ್ಯಾಸದ ಮಾದರಿಗಳನ್ನು ಒಳಗೊಂಡಿದೆ. ಅಧ್ಯಯನ ಅವಶ್ಯಕತೆಗಾಗಿ ರ್‍ಯಾಂಡಮ್ ಸ್ಯಾಂಪ್ಲಿಂಗ್ ವಿನ್ಯಾಸಕ್ಕೆ ಒತ್ತು ನೀಡಲಾಗಿದೆ. ಆದ್ದರಿಂದ ಈ ಮಾದರಿ(ವಿನ್ಯಾಸ)ಕ್ಕೆ ಸಂಬಂಧಿಸಿದಂತೆ ಕರ್ನಾಟಕವನ್ನು ಆಳ್ವಿಕೆ ಮಾಡಿದಂತಹ ಕಾಂಗ್ರೆಸ್ ಸರ್ಕಾರದ ಕಾಲಾವಧಿಯ ಆಡಳಿತಕ್ಕೆ ಸಂಬಂಧಿಸಿದಂತೆ, ವಿಶೇಷವಾಗಿ **ಡಿ. ದೇವರಾಜ ಅರಸು** ಮತ್ತು **ಸಿದ್ದರಾಮಯ್ಯನವರ ಆಡಳಿತಕ್ಕೆ ಮಾತ್ರ ಸೀಮಿತತೆಯಾಗಿ ಸಂಬಂಧಿಸಿದ್ದರಿಂದ** ಕರ್ನಾಟಕದಾದ್ಯಂತ ಹರಡಿರುವ ಅಹಿಂದ ಸಮುದಾಯವನ್ನು ಅಥವಾ ಸಂವಾದಿಗಳನ್ನು ಮಾದರಿಗೆ ಆಯ್ಕೆ ಮಾಡಲಾಗಿದೆ. ಹಾಗೆಯೇ ಸಂಶೋಧನೆಯ ಅನುಕೂಲಕ್ಕೆಂದು ಕರ್ನಾಟಕ ಸರ್ಕಾರವು ಜನರಿಗೆ ಉತ್ತಮ ಆಡಳಿತ ನೀಡಲು ಸಹಾಯಕವಾಗಲೆಂದು ಆಡಳಿತಾತ್ಮಕವಾಗಿ ವಿಂಗಡಿಸಲಾದ **ಬೆಂಗಳೂರು ವಿಭಾಗ, ಬೆಳಗಾಂ ವಿಭಾಗ, ಕಲುಬುರ್ಗಿ ವಿಭಾಗ, ಹಾಗೂ ಮೈಸೂರು ವಿಭಾಗ**ಗಳನ್ನು ಸಂಶೋಧನಾ ಮಾದರಿಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಆದ್ದರಿಂದ ಈ ನಾಲ್ಕು ವಿಭಾಗಗಳಿಂದ ತಲಾ **ನಾಲ್ಕು(4)** ಜಿಲ್ಲೆಗಳನ್ನು ಅಂದರೆ ಒಟ್ಟು **16** ಜಿಲ್ಲೆಗಳನ್ನು ಮಾದರಿಗೆ (ಕ್ಷೇತ್ರಕಾರ್ಯಕ್ಕೆ) ಒಳಪಡಿಸಲಾಗಿದೆ. ಈ ಜಿಲ್ಲೆಗಳೆಂದರೆ 1. ಬೆಂಗಳೂರು ನಗರ 2. ಬೆಂಗಳೂರು ಗ್ರಾಮಾಂತರ 3. ಕೋಲಾರ 4. ಶಿವಮೊಗ್ಗ 5. ದಾರವಾಡ 6. ಬೆಳಗಾಂ 7. ಗದಗ 8. ಬಿಜಾಪುರ 9. ಗುಲಬರ್ಗ 10. ಬಳ್ಳಾರಿ 11. ರಾಯಚೂರು 12. ಯಾದಗಿರಿ 13. ಮೈಸೂರು 14. ಚಾಮರಾಜನಗರ 15. ಮಂಡ್ಯ 16. ದಕ್ಷಿಣ ಕನ್ನಡ. ಈ ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳಲು ಹಲವು ಕಾರಣಗಳಿವೆ. ಈ ನಾಲ್ಕು ವಿಭಾಗಗಳಲ್ಲಿ ಹಿಂದುಳಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ಜಿಲ್ಲೆಗಳನ್ನು ಗುರ್ತಿಸಲು ಸಹಾಯವಾಗಲೆಂದು ಆಯ್ಕೆ ಮಾಡಿಕೊಳ್ಳಲಾಗಿದೆ. ಇದಕ್ಕೆ ಕಾರಣ ಏನೆಂದರೆ ಸಂಶೋಧನೆಯಲ್ಲಿ ಇಡೀ ಕರ್ನಾಟಕವನ್ನು ಮಾದರಿ(Samples)ಗೆ ಒಳಪಡಿಸಿ ಕ್ಷೇತ್ರ ಕಾರ್ಯ ನಡೆಸಲು **ಆರ್ಥಿಕ ಹೊರೆ** ಮತ್ತು **ಸಮಯ**ದ ಮಿತಿಯಲ್ಲಿ ಅಸಾಧ್ಯವಾದ್ದರಿಂದ ಕರ್ನಾಟಕ ಸರ್ಕಾರವು ಆಡಳಿತದ ಸರಳೀಕರಣಕ್ಕಾಗಿ ವಿಭಾಗಿಸಲ್ಪಟ್ಟ 4 ವಿಭಾಗಗಳ ತಲಾ ನಾಲ್ಕು [4] ಜಿಲ್ಲೆಗಳನ್ನು (ಮಾದರಿಗಳ) ಮೂಲಕ ಯೋಜನೆಗಳು ಹೇಗೆ ಜನರ ನಾಡಿಮಿಡಿತಲ್ಲಿ ಬೆರೆತೋಗಿವೆ ಮತ್ತು ಈ ಯೋಜನೆಗಳ ಮೂಲಕ ರಾಜ್ಯದ ಜನತೆಯ ಸಮಗ್ರ ಬದಲಾವಣೆ ಮತ್ತು ಅಭಿವೃದ್ಧಿಯನ್ನು ಯಾವ ಪ್ರಮಾಣದಲ್ಲಿ ಸಬಲೀಕರಿಸಲಾಗಿದೆ ಎಂಬುದನ್ನು ಸಮಗ್ರ ಕರ್ನಾಟಕಕ್ಕೆ ಅನ್ವಯಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೇ ಸಂಶೋಧನಾ ಫಲಿತಾಂಶವನ್ನು ಸಹ ಸರಳೀಕರಣ ಗೊಳಿಸಲು ನೆರವಾಗುತ್ತದೆ. ಆದ್ದರಿಂದ ಈ ಮಾದರಿಗಳ ಪ್ರಕಾರ ನಾಲ್ಕು ವಿಭಾಗಗಳ ತಲಾ ನಾಲ್ಕು(4) ಜಿಲ್ಲೆಗಳಿಂದ ಒಟ್ಟು **16** ಜಿಲ್ಲೆಗಳ **ಒಂದೊಂದು ತಾಲೂಕಿನ ಗ್ರಾಮೀಣ ಪ್ರದೇಶ** ಮತ್ತು **ನಗರ ಪ್ರದೇಶಗಳಾಗಿ** ಸಹ ವಿಂಗಡಿಸಿಕೊಳ್ಳಲಾಗಿದೆ. ಆದ್ದರಿಂದ ಈ ಜಿಲ್ಲೆಗಳ ತಲಾ ನಾಲ್ಕು ವಿಭಾಗಳಿಂದ **120** ಜನರಂತೆ **ಎಲ್ಲಾ ಸಮುದಾಯಗಳನ್ನು** ಒಳಗೊಂಡಂತೆ ಅಹಿಂದ ಜನಸಮುದಾಯವನ್ನು ಒಟ್ಟಾರೆಯಾಗಿ **480** ಜನರನ್ನು [ಪ್ರತಿಕ್ರಿಯಾಶೀಲ ಸಂವಾದಿಗಳು / Respendence] **ಸಂಶೋಧನಾ ಮಾದರಿಗೆ** ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

1.12 ಅಧ್ಯಯನದ ವಾಪ್ತಿ ಮತ್ತು ಕ್ಷೇತ್ರ.

ಕರ್ನಾಟಕದ ಕಾಂಗ್ರೆಸ್ ಪಕ್ಷದ ಆಡಳಿತಾವಧಿಯಲ್ಲಿ ಸಾಮಾಜಿಕ ನ್ಯಾಯ ಪ್ರೇರಿತ 'ಅಹಿಂದ' ಪರವಾದ ಸಂಕ್ಷಿಪ್ತ ಆಡಳಿತಾತ್ಮಕ ಸುಧಾರಣೆಗಳನ್ನು ಒಳಗೊಂಡಿರುತ್ತದೆ ಅಷ್ಟೇ. ಆದರೆ ಇದರ ವಿಶಾಲವಾದ ಆಡಳಿತಾತ್ಮಕ, ಸಮಾಜೋ-ಆರ್ಥಿಕ, ರಾಜಕೀಯ-ಮಾನವೀಯ, **"ಬಹುಶಾಸ್ತ್ರೀಯ ದೃಷ್ಟಿಕೋನ"**ವು ಶ್ರೀ **ದೇವರಾಜ ಅರಸ್** ಮತ್ತು ಶ್ರೀ **ಸಿದ್ಧರಾಮಯ್ಯನವರ ಆಡಳಿತಾವಧಿಯ ಸಾಮಾಜಿಕ ನ್ಯಾಯ ಪ್ರೇರಿತ ಭಾಗ್ಯ ಯೋಜನೆಗಳು ಮತ್ತು ಸಮಾಜಮುಖಿ**

ಕಾರ್ಯಗಳ ಕಾಲಾವದಿಯ ವ್ಯಾಪ್ತಿಗೆ ಮಾತ್ರ, ಸೀಮಿತಗೊಳಿಸಲಾಗಿದೆ. ಈ ಅಧ್ಯಯನದ ಭೌಗೋಳಿಕ ಕ್ಷೇತ್ರವು ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತಾವಧಿಯಲ್ಲಿ ಸಾಮಾಜಿಕ ನ್ಯಾಯಕ್ಕೆ ಸಂಬಂಧಿತ ಯೋಜನೆಗಳು ಮತ್ತು ಕಾರ್ಯಕ್ರಮಗಳ ಕಾರ್ಯಕ್ಷೇತ್ರದ ವ್ಯಾಪ್ತಿಗೆ ಸಂಬಂಧಿಸಿದೆ. ಬಹಳ ಮುಖ್ಯವಾಗಿ ಕರ್ನಾಟಕ ಸರ್ಕಾರವು ಜನರಿಗೆ ಉತ್ತಮ ಆಡಳಿತ ನೀಡಲು ಸಹಾಯಕವಾಗಲೆಂದು ಆಡಳಿತಾತ್ಮಕವಾಗಿ ವಿಂಗಡಿಸಲಾದ **ಬೆಂಗಳೂರು ವಿಭಾಗ, ಬೆಳಗಾಂ ವಿಭಾಗ, ಕಲುಬುರ್ಗಿ ವಿಭಾಗ, ಹಾಗೂ ಮೈಸೂರು ವಿಭಾಗ**ಗಳ ಭೌಗೋಳಿಕ ವ್ಯಾಪ್ತಿಯ ತಲಾ **ನಾಲ್ಕು(4)** ಜಿಲ್ಲೆಗಳನ್ನು ಸಂಶೋಧನಾ ಮಾದರಿಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅಂದರೆ ಒಟ್ಟು **16** ಜಿಲ್ಲೆಗಳನ್ನು ಮಾದರಿಗೆ (ಕ್ಷೇತ್ರಕಾರ್ಯಕ್ಕೆ) ಒಳಪಡಿಸಲಾಗಿದೆ. ಈ ಜಿಲ್ಲೆಗಳೆಂದರೆ 1. ಬೆಂಗಳೂರು ನಗರ 2. ಬೆಂಗಳೂರು ಗ್ರಾಮಾಂತರ 3. ಕೋಲಾರ 4. ಶಿವಮೊಗ್ಗ 5. ದಾರವಾಡ 6. ಬೆಳಗಾಂ 7. ಗದಗ 8. ಬಿಜಾಪುರ 9. ಗುಲಬರ್ಗ 10. ಬಳ್ಳಾರಿ 11. ರಾಯಿಚೂರು 12. ಯಾದಗಿರಿ 13. ಮೈಸೂರು 14. ಚಾಮರಾಜನಗರ 15. ಮಂಡ್ಯ 16. ದಕ್ಷಿಣ ಕನ್ನಡ ಜಿಲ್ಲೆಗಳ ಒಂದೊಂದು ತಾಲೂಕಿನ "ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶಗಳ ಭೌಗೋಳಿಕ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಜೊತೆಗೆ ಕರ್ನಾಟಕದಲ್ಲಿ ಅಹಿಂದ ಚಳುವಳಿಯ ಸಾಧಕ–ಭಾಧಕಗಳನ್ನು ಅಭ್ಯಾಸಿಸಲಾಗಿದೆ. ಮತ್ತು ಈ ಸಂಶೋಧನೆಯು ದೇವರಾಜ ಅರಸ್ ಮತ್ತು ಸಿದ್ದರಾಮಯ್ಯನವರ ಆಡಳಿತಾವಧಿಯ ಕಾರ್ಯವ್ಯಾಪ್ತಿಗೆ ಮಾತ್ರ, ಸೀಮಿತವಾಗಿದೆ ಎಂದು ದೃಢೀಕರಿಸುತ್ತೇನೆ.

1.13 ಅಧ್ಯಯನದ ಪ್ರಸ್ತುತತೆ ಮತ್ತು ಅನಿವಾರ್ಯತೆ

ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ' ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಎಂಬುದು ಒಂದು ವಿಶಾಲವಾದ ಸಾಮಾಜಿಕ ಒಳಗೊಳ್ಳುವಿಕೆಯ ಪ್ರಕ್ರಿಯೆಯಾಗಿದೆ. ಇದಕ್ಕೆ ಸಂಬಂಧಪಟ್ಟ ವಿಚಾರಗಳೆಲ್ಲವೂ **"ಶಾಸ್ತ್ರೀಯವಾಗಿ ಅಧ್ಯಯನ"** ಕೈಗೊಳ್ಳಲು ಯೋಗ್ಯವಾದವುಗಳಾಗಿವೆ. ಮತ್ತು ಧರ್ಮ ಮತ್ತು ಜಾತಿಯ ಕಾರಣಕ್ಕೆ ಸಾವಿರಾರು ವರ್ಷಗಳಿಂದ ಅಹಿಂದ ಸಮುದಾಯಗಳು ಭಾರತದಲ್ಲಿ ಒಂದು ಸವಾಲಾಗಿಯೇ ಇದ್ದಾರೆ. ಆದ್ದರಿಂದ ಇದಕ್ಕೆ ಸರಿಯಾದ ಪರಿಹಾರ ಕಂಡುಕೊಂಡು ಅಹಿಂದವು ಒಂದು ರಾಜಕೀಯ ಶಕ್ತಿಯಾಗಬೇಕಿರುವುದು ಅತ್ಯಂತ ಅನಿವಾರ್ಯವಾಗಿದೆ. ಆದ್ದರಿಂದ ನೂರಾರು ವರ್ಷಗಳಿಂದ ದಾಸ್ಯಕ್ಕೆ, ತುಳಿತಕ್ಕೆ, ಮತ್ತು ಅವಕಾಶವಂಚಿತರಾಗಿರುವ ಈ ಸಮುದಾಯಗಳ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾದ ಸ್ಥಿತಿಗತಿಗಳನ್ನು ಸಮಾಜದ ಓರೆಗೆ ಹಚ್ಚುವುದು ತುಂಬ ಅತ್ಯವಶ್ಯಕವಾದ ವಿಷಯವಾಗಿದೆ. ಹಾಗಾಗಿ ಭಾರತದಂತಹ ಹಳ್ಳಿಗಳ ದೇಶದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ಅಹಿಂದ ವರ್ಗದವರು ವಿವಿಧ ದೃಷ್ಟಿಕೋನಗಳಿಂದ ಒಂದು ಸವಾಲಗಿಯೇ ಗೋಚರಿಸುತ್ತಾರೆ. ಅದಕ್ಕೆ ಕಾರಣ ಭಾರತದ ವೈವಿದ್ಯತೆಯನ್ನು ತಿರಸ್ಕಾರ ಮನೋಭಾವದಿಂದ ನೋಡುತ್ತಿರುವುದು. ಆದ್ದರಿಂದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ' ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಅಭಿವೃದ್ಧಿದಾಯಕ ಯೋಜನೆಗಳ ಜನತೆಗೆ ತಲುಪಿದ್ದಾವೆಯೇ? ಎಂದು ತಿಳಿಯುವುದು. ಒಂದು ವೇಳೆ ಇವು ಜನಪರವಾಗಿದ್ದರೆ ಅವುಗಳನ್ನ ಕಾಂಗ್ರೆಸ್‌ನ ಸಾಧನೆಗಳನ್ನಾಗಿ ಪರಿಗಣಿಸಿ ವಿಶ್ಲೇಷಣೆಗೆ ಒಳಪಡಿಸುವುದು ಅತ್ಯಗತ್ಯ. ಮತ್ತು ಯೋಜನೆಗಳನ್ನು ಜನಾಭಿಮುಖಿಯಾಗಿ ಪರಿವರ್ತಿಸಲು ಮಾಡಬೇಕಾದ ಕಾರ್ಯಗಳು ಸಹ ಅನಿವಾರ್ಯವಾಗಿದೆ.

ಆ ಕಾರಣಕ್ಕಾಗಿ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದಂತಹ ಪ್ರತಿಯೊಂದು ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ' ಮತ್ತು 'ಅಹಿಂದ' ವರ್ಗದವರ ಅಭಿವೃದ್ಧಿ ಕಾರ್ಯಗಳನ್ನು ಜಗಜ್ಜಾಹಿರುಗೊಳಿಸುವುದು, ಈ ಸಮುದಾಯಗಳ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನಪ್ರತಿನಿಧಿಗಳ ಪ್ರಾಮಾಣಿಕ ಕೆಲಸದ ಪಾತ್ರವನ್ನು ಕೂಲಂಕುಶವಾಗಿ ಅಧ್ಯಯನ ಕೈಗೊಳ್ಳಲು ಆಯ್ಕೆ ಮಾಡಿಕೊಂಡು **"ಬಹುಶಾಸ್ತ್ರೀಯ ದೃಷ್ಟಿಕೋನ"**ದಿಂದ 'ಸಾಮಾಜಿಕ ನ್ಯಾಯ'ವನ್ನು 'ಅಹಿಂದ' ವರ್ಗಕ್ಕೆ ಪಾರದರ್ಶಕತೆಯಲ್ಲಿ ಆಡಳಿತವನ್ನು ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾಗಿ ಹೆಚ್ಚು ಅಧ್ಯಯನಕ್ಕೆ ಒಳಪಡಿಸಲು ಇದು ಸೂಕ್ತವು, ವಾಸ್ತವವು ಮತ್ತು ವೈಜ್ಞಾನಿಕವು ಆಗುತ್ತಿದೆ. ಹಾಗಾಗಿ ಅಹಿಂದ ವರ್ಗದವರ ಸಮಸ್ಯೆಗೆ ಸೂಕ್ತ ಪರಿಹಾರವು ಸಹ ಲಭ್ಯವಾಗುತ್ತದೆ ಆದ್ದರಿಂದಲೇ ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ' ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ರಚನಾತ್ಮಕ ಮತ್ತು ಕಾರ್ಯಾತ್ಮಕ ವಿಶ್ಲೇಷಣೆಯ ದೃಷ್ಟಿಕೋನದಿಂದ ನೋಡುವುದು ಈ ಅಧ್ಯಯನದ ಅನಿವಾರ್ಯವಾಗಿದೆ.

1.14 ಅಧ್ಯಯನದ ಮಹತ್ವ

"ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ': ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ". ಈ ಸಂಶೋಧನಾ ವಸ್ತುವಿಷಯಕ್ಕೆ ಸಂಬಂಧಿಸಿದಂತೆ ತನ್ನದೇ ಆದ ಮಹತ್ವ ಹೊಂದಿದೆ.

ಭಾರತದಲ್ಲಿ ಸಾಮಾಜಿಕ ನ್ಯಾಯ ಎಂಬ ಪರಿಕಲ್ಪನೆಯೇ ತುಂಬ ಮಹತ್ವಪೂರ್ಣವಾದ ಚರ್ಚಿತ ಹಾಗೂ ಸರ್ವಕಾಲಕ್ಕೂ ಚಾಲ್ತಿಗೆ ಬರುವಂತಹ ವಸ್ತುನಿಷ್ಠ ವಿಷಯವಾಗಿದೆ. ಇದು ದೇಶದಾದ್ಯಂತ ಎಲ್ಲಾ ಸಮಾಜಗಳು ಮತ್ತು ರಾಜ್ಯಗಳು ನಮ್ಮ ಸಂವಿಧಾನದ ಆಶಯದ ತಿರುಳಾಗಿರುವ ಸ್ವತಂತ್ರ್ಯ, ಸಮಾನತೆ, ಬ್ರಾತೃತ್ವ ಹಾಗೂ ಐಕ್ಯತೆಯ ದೃಷ್ಟಿಯಿಂದ ಪ್ರಜೆಗಳ ಕಲ್ಯಾಣಾಧಾರಿತವಾಗಿ **'ಪ್ರಬುದ್ಧ ಭಾರತ'**ದ ನಿರ್ಮಾಣ ಕಾರ್ಯಸಾಧ್ಯವಾಗಬೇಕಾದರೆ ನಮ್ಮನ್ನಾಳುವ ಸರ್ಕಾರದ ಅಜೆಂಡಾ **"ಸರ್ವರಿಗೂ ಸಮಪಾಲು ಮತ್ತು ಸರ್ವರಿಗೂ ಸಮಬಾಳು"** ಎಂಬಂತಹ ಸಾಮಾಜಿಕ ಸಮಾನತೆಯನ್ನು ಆರ್ಥಿಕವಾದ ಅಂಶಗಳೊಡನೆ ಮಾಪನಮಾಡಿ ರಾಜ್ಯಾಧಿಕಾರದ ನೆರಳಿನಲ್ಲಿ ಸಂಪತ್ತಿನ ಹಂಚಿಕೆಯು ಇದರ ಮಹತ್ವದ ಕಾರ್ಯವಾಗಬೇಕಾಗಿದೆ.

ಹಾಗಾಗಿ ಕರ್ನಾಟಕದಲ್ಲಿ ಡಿ. ದೇವರಾಜ ಅರಸ್ ಮತ್ತು ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ತನ್ನ ಅಜೆಂಡವಾದ ಸಾಮಾಜಿಕ ನ್ಯಾಯವನ್ನು ಕಾಂಗ್ರೆಸ್ ಪಕ್ಷದ ಬೆನ್ನೆಲೆಬು ಸಮುದಾಯಗಳಾದಂತಹ ಅಹಿಂದಗಳ ಮೇಲೆ ಹೇಗೆ ತನ್ನ ನ್ಯಾಯವನ್ನು ನೀಡಲು ಪ್ರಯತ್ನಿಸಿದೆ ಎಂಬುದನ್ನು ವಿಮರ್ಶಾತ್ಮಕವಾದ ವಿಶ್ಲೇಷಣೆಗೆ ಒಳಪಡಿಸಿ ಕರ್ನಾಟಕದ ಜನತೆಯ ಮುಂದೆ ತೆರೆದಿಡುವ ದಿಟ್ಟ ಹೆಜ್ಜೆಯಾಗಿ ಈ ಸಂಶೋಧನೆಯು ಕಾರ್ಯನಿರತವಾಗಿದೆ.

- ಶೋಷಿತ ಮತ್ತು ಅಲಕ್ಷಿತ ಸಮುದಾಯಗಳನ್ನು ವಿಶೇಷವಾಗಿ ಪ್ರಾತಿನಿಧ್ಯತೆ ಹಾಗೂ ಅವಕಾಶಗಳನ್ನು ಕಲ್ಪಿಸಿಕೊಡುವುದರ ಮೂಲಕ ಸರ್ಕಾರ ತನ್ನ ಘನತೆಯನ್ನು ಹೆಚ್ಚಿಸಿಕೊಂಡಿರುತ್ತವೆ. ಆದ್ದರಿಂದ ಈ ಅಧ್ಯಯನ ಬಹಳ ಮಹತ್ವ ಪಡೆದುಕೊಂಡಿದೆ.
- ಅಲ್ಪಸಂಖ್ಯಾತ, ಹಿಂದುಳಿದ ಮತ್ತು ದಲಿತರ ಸ್ಥಿತಿ–ಗತಿಗಳ ಕುರಿತು ಅಧ್ಯಯನ ಮಾಡುವುದರಿಂದ ತುಂಬಾ ಮಹತ್ವ ಪಡೆದುಕೊಂಡಿದೆ.
- ಕರ್ನಾಟಕದ ಕಾಂಗ್ರೆಸ್ ಆಳ್ವಿಕೆಯಲ್ಲಿ ಅಹಿಂದ ವರ್ಗದ ಉದ್ದಾರ ಕಾಂಗ್ರೆಸ್‌ನಿಂದ ಹೇಗೆ ಸಾಧ್ಯವಾಗುತ್ತಿದೆ ಎಂಬಂತಹ ಸತ್ಯ ತಿಳಿಯಲು ಅಗತ್ಯವಾದ ಪ್ರಾಮುಖ್ಯತೆ ಪಡೆದುಕೊಂಡಿದೆ.
- ಅಲ್ಪಸಂಖ್ಯಾತ, ಹಿಂದುಳಿದ, ದಲಿತ ಸಮುದಾಯಗಳು ಕಾಂಗ್ರೆಸ್ ಪಕ್ಷಕ್ಕೆ ಯಾಕೆ ನಿಷ್ಠೇ ತೋರುತ್ತವೆ. ಈ ಸಮುದಾಯಗಳಿಗೆ ಪರ್ಯಾಯ ಮಾರ್ಗವಿಲ್ಲವೆ? ಇದ್ದರೂ ಅವುಗಳ ಅಜೆಂಡಾ ಏನಿದೆ ಎಂಬಂತಹ ಸತ್ಯ ತಿಳಿಯಲು ಈ ಅಧ್ಯಯನ ಮಹತ್ವದ ವಿಚಾರವಾಗಿದೆ.
- ಕರ್ನಾಟಕ ಸೇರಿದಂತೆ ಭಾರತವನ್ನು ಆಳ್ವಿಕೆ ನಡೆಸುತ್ತಿರುವ ರಾಜಕೀಯ ಪಕ್ಷಗಳಿಗೆ ಸಂವಿಧಾನ ಬದ್ಧತೆ ಮತ್ತು ರೂಪುರೇಷೆಗಳನ್ನು ಅರಿತು ಪ್ರಜಾಪ್ರಭುತ್ವದ ಆಶಯಗಳನ್ನ ಭಾರತದ ಬಹುಸಂಖ್ಯಾತ ಜನ ವರ್ಗಗಳಾಗಿರುವ 'ಅಹಿಂದ' ಸಮುದಾಯಗಳಿಗೆ ಈ ಎಲ್ಲಾ ರಾಜಕೀಯ ಪಕ್ಷಗಳ ಅಜೆಂಡಾ (ಕಾರ್ಯಸೂಚಿ) ಏಕೆ 'ಸಾಮಾಜಿಕ ನ್ಯಾಯ'ದ ಪರವಾಗಿ ನಿಲ್ಲಲು ಅಸಾಧ್ಯವಾಗಿದೆ? ಇವುಗಳ ಒಳ ಮನಸ್ಸಿನಲ್ಲಿ ಏನಿದೆ? ಎಂಬುದನ್ನು ಅಧ್ಯಯನ ಮಾಡುವುದು ಬಹಳ ಮಹತ್ವದ್ದೆನಿಸಿದೆ.

1.15 ಅಧ್ಯಯನದ ಪ್ರಮುಖ ಸವಾಲುಗಳು [ಸಾಮಾಜಿಕ ನ್ಯಾಯ ಮತ್ತು ಅಹಿಂದ ಚಳುವಳಿಯ ಸವಾಲುಗಳು]

"ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ 'ಸಾಮಾಜಿಕ ನ್ಯಾಯ': ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ" ಎಂಬ ಸಂಶೋಧನಾ ವಸ್ತುವಿಗೆ ಸಂಬಂಧಿಸಿದ ಹಾಗೆ ಈ ಸಂಶೋಧನಾ ವಿಷಯವು ತರ್ಕಕ್ಕು ನಿಲುಕದಂತಹ ಪ್ರಮುಖ ಸವಾಲುಗಳಿಂದ ಕೂಡಿದೆ. ವಿಶೇಷವಾಗಿ ಕರ್ನಾಟಕ ಸೇರಿದಂತೆ ಭಾರತದಲ್ಲಿ ಸಾಮಾಜಿಕ ನ್ಯಾಯ ಮತ್ತು ಅಹಿಂದ ವರ್ಗದ ಮೂಲಭೂತ ಸಮಸ್ಯೆಗಳು ಆಧುನಿಕ ಸರ್ಕಾರಗಳಿಗೆ ಅತ್ಯಂತ ಪ್ರಮುಖ ಸವಾಲುಗಳಾಗಿರುವುದನ್ನು ಸಹ ಸೂಚ್ಯೀಕರಿಸಲಾಗಿದೆ.

ಭಾರತ ಮತ್ತು ಕರ್ನಾಟಕ ಸೇರಿದಂತೆ ಯಾವುದೇ ರಾಜಕೀಯ ಪಕ್ಷಗಳು, ಸರ್ಕಾರಗಳು ಈ ಅಹಿಂದ ವರ್ಗಗಳ ಓಲೈಸುವಿಕೆಗೆ ಆಧ್ಯತೆ ನೀಡುತ್ತಾ ಬಂದಿವೆ. ಏಕೆಂದರೆ, ಈ ಅಹಿಂದ ಸಮುದಾಯದ ಬೃಹತ್ ಮತ ಬ್ಯಾಂಕ್ ಮುಖ್ಯವೆನಿಸಿದೆ. ಈ ಕಾರಣದಿಂದ ಕರ್ನಾಟಕ ಮತ್ತು ಭಾರತವನ್ನು ಆಳ್ವಿಕೆ ಮಾಡಿದಂತಹ ಎಲ್ಲಾ ರಾಜಕೀಯ ಪಕ್ಷಗಳು 'ಸಾಮಾಜಿಕ ನ್ಯಾಯ'ದ ಹೆಸರಿನಲ್ಲಿ ಜನ ವರ್ಗಗಳಿಗೆ ಬೃಹತ್ ಅವಕಾಶಗಳ ಬಾಗಿಲನ್ನು

ತೆರೆಯುವಂತಹ ಕಾರ್ಯವನ್ನು ಮಾಡುತ್ತ ಬಂದಿವೆ. ಈ ಎಲ್ಲಾ ರಾಜಕೀಯ ಪಕ್ಷಗಳಿಗೆ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಹಾಗೂ ಎಲ್ಲಾ ವರ್ಗದ ಮಹಿಳೆಯರ ಮೇಲೆ ಒಲವು ಇದ್ದೆ ಇರುತ್ತದೆ ಜೊತೆಗೆ ಓಲೈಕೆ ರಾಜಕೀಯವನ್ನು ಸಹ ಮಾಡುತ್ತವೆ. ಆದರೆ ನಿರ್ದಿಷ್ಟ ಮತ್ತು ನಿಖರವಾಗಿ ಹೇಳುವುದಾದರೆ, ಕಾಂಗ್ರೆಸ್ ಪಕ್ಷ ಮಾತ್ರ ಈ ವಿಚಾರದಲ್ಲಿ ಸ್ವಲ್ಪ ಮುಂದಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ. **ಕಾಂಗ್ರೆಸ್ ಪಕ್ಷವು ಅಹಿಂದ ವರ್ಗಗಳಿಗೆ ಅತಿ ಹೆಚ್ಚು ಪ್ರಾಧಾನ್ಯತೆ ಕೊಡುವುದರ** ಜೊತೆಗೆ, ಅವಕಾಶಗಳ ಗುರುತಾಗಿ ಸಮಾನತೆಯನ್ನು ಹಾಗೂ ಅಹಿಂದಕ್ಕೆ ಸಾಮಾಜಿಕ ನ್ಯಾಯವನ್ನು ಕೊಡುವಲ್ಲಿ ಪ್ರಯತ್ನವನ್ನು ಮಾಡಿ ತಕ್ಕ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದು ಸಹ ಸಂಶೋಧನೆಯ ಸಾಕ್ಷಾಧಾರಗಳಿಂದ ಕಂಡುಬಂದಿದೆ.

- ಸಾವಿರಾರು ವರ್ಷಗಳಿಂದ ಅಹಿಂದ ಸಮುದಾಯಗಳು ಜಾತಿ ಮತ್ತು ಧರ್ಮದ ಕಾರಣಕ್ಕೆ ಅಭಿವೃದ್ಧಿ ಮಾನದಂಡಕ್ಕೆ ಕೊಂಡೊಯ್ಯಲು ಭಾರತವನ್ನಾಳಿದ ಎಲ್ಲಾ ರಾಜಕೀಯ ಪಕ್ಷಗಳಿಗೂ ಒಂದು ಬಹುದೊಡ್ಡ ಸವಾಲಾಗಿದೆ. ಜೊತೆಗೆ ಅಹಿಂದದ ಸಹಸ್ರ ಸಮಸ್ಯೆಗಳ ಕಡೆ ಆಧುನಿಕ ಸರ್ಕಾರಗಳು ಮತ್ತು ಪಕ್ಷಗಳು ಗಮನಹರಿಸದೆ ಇರುವುದು ಸಹ ವ್ಯವಸ್ಥೆಯ ವೈಫಲ್ಯವೆಂದೇ ಹೇಳಬಹುದು. ಸಂವಿಧಾನ ಬದ್ದ ಅಧಿಕಾರವನ್ನು ಪ್ರಭುತ್ವವು ಯತಾವತ್ತಾಗಿ ಜಾರಿಗೊಳಿಸದೇ ಇರುವುದು ಭಾರತದಲ್ಲಿ ಸಾಮಾಜಿಕ ನ್ಯಾಯ ಸಂಪೂರ್ಣವಾಗಿ ಜಾರಿಯಾಗದಿರಲು ಕಾರಣವಾಗಿದೆ.
- ಭಾರತದಂತಹ ಬಹುಸಂಸ್ಕೃತಿಯ ಸಹಿಷ್ಣು ರಾಷ್ಟ್ರದಲ್ಲಿ ಎಲ್ಲಾ ಜಾತಿ ಧರ್ಮಗಳಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಸಮಾನತೆಯನ್ನ ಸಂವಿಧಾನ ಬದ್ಧವಾಗಿ ನ್ಯಾಯವನ್ನು ಒದಗಿಸಿಕೊಡುವುದು ನಮ್ಮನ್ನಾಳುವ ಸರ್ಕಾರಗಳಿಗೆ ಸವಾಲಾಗಿರುವುದು ಕಂಡುಬಂದಿದೆ.
- **"ಸರ್ವರಿಗೂ ಸಮಪಾಲು – ಸರ್ವರಿಗೂ ಸಮಬಾಳು"** ಈ ತತ್ವವನ್ನ ಸೈದ್ಧಾಂತಿಕವಾಗಿ ಹಾಗೂ ವಾಸ್ತವವಾಗಿ ಕಾರ್ಯ ಜಾರಿಗೊಳಿಸುವುದು ಅಷ್ಟು ಸುಲಭದ ಮಾತಲ್ಲ. ಎಂಬುದನ್ನು ಸಹ ಈ ಅಧ್ಯಯನ ಸವಾಲಾಗಿರುವುದನ್ನು ಕಂಡುಕೊಳ್ಳಲಾಗಿದೆ.
- ಆಡಳಿತಶಾಹಿ ಮತ್ತು ನೌಕರಶಾಹಿ ಪ್ರಭುತ್ವದ ಮನಸ್ಥಿತಿಯು ಸಂಕುಚಿತದಿಂದ ವಿಶಾಲವಾದ, ಪ್ರಗತಿಪರವಾದ, ಸಮನ್ವಯತೆಯ ಗುಣ ಹೊಂದಿರುವ ಸಾಧ್ಯತೆಯನ್ನ ಅಲ್ಲೆಗಳೆಯುವಂತಿಲ್ಲ. ಎಂಬುದನ್ನು ತಿಳಿಯಲಾಗಿದೆ.
- 'ಅಹಿಂದ'ದ ಸಮನ್ವಯತೆ, ಒಟ್ಟುಗೂಡಿಕೆ ಮತ್ತು ಈ 'ಅಹಿಂದ' ಚಳುವಳಿಯ ವಾಪಸ್ಸಾತಿಯಿಂದ ಸಂಘಟನ ಶಕ್ತಿ ಹಿಮ್ಮುಖವಾಗಿರುವುದು ದೊಡ್ಡ ಸೋಲಾಗಿದೆ.
- 'ಅಹಿಂದ' ಬೆಂಬಲದಿಂದ ಅಧಿಕಾರಕ್ಕೆ ಬಂದಿರುವ ಅಹಿಂದ ರಾಜಕಾರಣಿಗಳು ಮತ್ತು ನಾಯಕರುಗಳ ನಿಜವಾದ ಸಾಮಾಜಿಕ ನ್ಯಾಯವನ್ನು ಅಳತೆ ಮಾಡುವುದು ಕಷ್ಟಕರವಾಗಿರುತ್ತದೆ. ಮತ್ತು ಪ್ರತಿಫಲಾನುಭವಿಗಳ ಒಳ ಮನಸ್ಸನ್ನು ನಿರ್ಧರಿಸಲಾಗದು. ಎಂಬುದನ್ನು ಸಹ ಕಂಡುಕೊಳ್ಳಲಾಗಿದೆ.
- 'ಅಹಿಂದ' ಪರವಾದ ಆಡಳಿತದಿಂದ ಇತರೆ ಮೇಲ್ಜಾತಿಯ ಸಮುದಾಯದ ಜನರು ಮತ್ತು ನಾಯಕರ ದ್ವೇಷ ಕಾಂಗ್ರೆಸ್ ಸರ್ಕಾರವನ್ನು ಬಾಧಿಸುತ್ತಿರುವುದು ಬಹುದೊಡ್ಡ ಸವಾಲಾಗಿದೆ.
- ಕಾಂಗ್ರೆಸ್‌ನ ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ ಸುಧಾರಣೆಗಳು ಮತ್ತು ದೇವರಾಜ ಅರಸ್ ಹಾಗೂ ಸಿದ್ದರಾಮಯ್ಯನವರ ಸಮಾಜವಾದ ಮತ್ತು ಸಾಮಾಜಿಕ ನ್ಯಾಯದ ವಿಶ್ಲೇಷಣೆಯನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಗುರ್ತಿಸುವುದು ಅತ್ಯಂತ ಸವಾಲಿನ ಕೆಲಸವಾಗಿ ಕಂಡುಬಂದಿದೆ.
- ಅಹಿಂದವು ರಾಜಕೀಯ ಶಕ್ತಿಯಾಗಿ ಹಾಗೂ ಸೈದ್ಧಾಂತಿವಾಗಿ ಒಗ್ಗೂಡದಿರುವುದು ಸಹ ತಮ್ಮ ಅನಭಿವೃದ್ಧಿಗೆ ಕಾರಣವಾಗಿದೆ ಎಂಬುದು ಸಹ ಸಾಮಾಜಿಕ ನ್ಯಾಯಕ್ಕಾಗಿ ಪರಿತಪಿಸುತ್ತಿರುವ ಅಹಿಂದ ಸಮುದಾಯಕ್ಕೆ ಒಂದು ಬಹುದೊಡ್ಡ ಸವಾಲಾಗಿದೆ.
- ಅಹಿಂದ ಕೇವಲ ರಾಜಕೀಯವಾಗಿ ಗಟ್ಟಿಯಾಯಿತೇ ವಿನಃ ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಸೈದ್ಧಾಂತಿಕವಾಗಿ ಧ್ರುವೀಕರಣಗೊಳ್ಳದಿರುವುದು ಈ ಅಧ್ಯಯನದ ಬಹುದೊಡ್ಡ ಸವಾಲಾಗಿದೆ.

1.16 ಅಧ್ಯಯನದ ಮಿತಿ

1. ಕರ್ನಾಟಕ ಕಾಂಗ್ರೆಸ್ ಆಡಳಿತದ ಅವಧಿಯ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಆಡಳಿತಾತ್ಮಕ ಸುಧಾರಣೆಗಳಲ್ಲಿ ಸಾಮಾಜಿಕ ನ್ಯಾಯಕ್ಕೆ ಮಾತ್ರ ಸೀಮಿತವಾಗಿರುವ ಈ ಸಂಶೋಧನೆಯು ಈ ಕಾಂಗ್ರೆಸ್ಸಿನ ಆಡಳಿತದ ಅವಧಿಯ ಅಭಿವೃದ್ಧಿ ಕಾರ್ಯದಲ್ಲಿ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ಮತ್ತು ದಲಿತ ಸಮುದಾಯ (ಅಹಿಂದ)ದ ಅಧ್ಯಯನಕ್ಕೆ ಮಾತ್ರ ಸೀಮಿತವಾದ್ದರಿಂದ ವಿಶೇಷವಾಗಿ **ಡಿ. ದೇವರಾಜ ಅರಸು ಮತ್ತು ಸಿದ್ದರಾಮಯ್ಯನವರ** ಸಾಮಾಜಿಕ ನ್ಯಾಯ ಕೇಂದ್ರಿತ ಆಡಳಿತಾಧಿಯಲ್ಲಿನ ಯೋಜನೆಗಳಿಗೆ ಮಾತ್ರ ಕೇಂದ್ರೀಕರಿಸಿರುವುದು ಸಹ ಇದರ ಮಿತಿಯಾಗಿದೆ.
2. ಸಮಯ, ಮಿತ ಸಾಹಿತ್ಯದ ಲಭ್ಯತೆ ಮತ್ತು ಸಂಶೋಧನೆಯ ದುಬಾರಿ ಖರ್ಚುವೆಚ್ಚ, ಕ್ಷೇತ್ರಕಾರ್ಯದ ಕ್ಲಿಷ್ಟತೆ ಹಾಗೂ ಮತ್ತಿತ್ತರ ಸಂಪನ್ಮೂಲಗಳ ಅಭಾವವು ಇದರ ಮಿತಿಯಾಗಿದೆ.
3. **ಪ್ರಾಥಮಿಕ ಮೂಲಾಧಾರ ಮತ್ತು ಜನಾಭಿಪ್ರಾಯ ತಳಹದಿಯ ಆಧಾರ, ಹೈಪೊಥಿಟಿಕಲ್ ಅಧ್ಯಾಯವಾದ್ದರಿಂದ ಪ್ರಾಥಮಿಕ ಆಧಾರಗಳಿಂದ ಸಾಮಾಜಿಕ ನ್ಯಾಯವನ್ನು ವಿಶ್ಲೇಷಣೆ ಮಾಡಿರುವುದು ಇದರ ಮಿತಿಯಾಗಿದೆ**. ಜೊತೆಗೆ ಸಮರ್ಪಕವಾಗಿ ಮತ್ತು ನಿಗದಿತ ಸಮಯಕ್ಕೆ ಅನುಗೂಣವಾಗಿ ಅಹಿಂದ ಚಳುವಳಿಗಾರರು, ಸಾಮಾಜಿಕ ಹೋರಾಟಗಾರರು, ಸಮುದಾಯ ಮುಖಂಡರು, ರಾಜಕೀಯ ನಾಯಕರುಗಳ ಸಮಯವನ್ನು ನಿಗಧಿಗೊಳಿಸದಿರುವುದು (ನಿಗಧಿತ ಸಮಯಕ್ಕೆ ಸಿಗದಿರುವುದು) ಕೂಡ ಈ ಸಂಶೋಧನೆಯ ಒಂದು ಮಿತಿಯಾಗಿದೆ. ಆದಾಗಿಯೂ ಸಹ ಬಹಳ ಸೀಮಿತವಾದ ಸಮಯದಲ್ಲೂ ಅವರೊಡನೆ ಈ ಸಾಮಾಜಿಕ ನ್ಯಾಯ ಮತ್ತು ಅಹಿಂದ ಚಳುವಳಿ ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಲಾಗಿದೆ.

1.17 ಅಧ್ಯಯನದ ಕೊಡುಗೆಗಳು

- ಜಾತ್ಯಾತೀತ ಮತ್ತು ಬಹುತ್ವದ ಸಂಕೇತವಾದ ಅಹಿಂದವನ್ನು ಸೈದ್ಧಾಂತಿಕವಾಗಿ ಒಂದುಗೂಡಿಸಲು ಮಾಡಿದ ಪ್ರಯತ್ನವು ಈ ಅಧ್ಯಯನದ ಬಹುದೊಡ್ಡ ಕೊಡುಗೆಯಾಗಿದೆ.
- ಭಾರತೀಯತೆ, ಸಾಂವಿಧಾನಿಕತೆ, ಪ್ರಜಾಸತ್ತಾತ್ಮಕತೆ, ಸಮಾಜವಾದ ಮತ್ತು ಸಮತಾವಾದದ ತಾತ್ವಿಕ ನೆಲೆಯು ಅಹಿಂದದ ಅಡಿಪಾಯವಾಗಿರುವುದು ಈ ಅಧ್ಯಯನದ ಕೊಡುಗೆಯಾಗಿದೆ.
- ಸಂವಿಧಾನದ ಮೂಲ ಆಶಯವಾದ ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವದ ಮೂಲ ಆಶಯಗಳನ್ನು ಸಹ ಅಹಿಂದವು ಮೈಗೂಡಿಸಿಕೊಂಡಿರುವುದನ್ನು ಈ ಅಧ್ಯಯನದ ಕೊಡುಗೆಯಾಗಿ ಕಂಡುಕೊಳ್ಳಲಾಗಿದೆ.
- ಭಾರತದಲ್ಲಿ ಹಲವಾರು ವಿಭಿನ್ನ ಚಿಂತನೆಯ ಹಿನ್ನಲೆಯುಳ್ಳ ರಾಜಕೀಯ ಪಕ್ಷಗಳು ಸರ್ಕಾರವನ್ನು ರಚಿಸಿವೆ. ಆದರೆ ಕಾಂಗ್ರೆಸ್ ಐತಿಹಾಸಿಕ ಪಕ್ಷವಾಗಿದ್ದು ಸ್ವಾತಂತ್ರ್ಯ ಹೋರಾಟಕ್ಕಾಗಿ ತ್ಯಾಗ ಬಲಿದಾನ ಮಾಡಿದ ಪಕ್ಷವಾಗಿದೆ ಇದು ಆ ಕಾಲದಲ್ಲಿ ಕೇವಲ ರಾಜಕೀಯ ಪಕ್ಷವಾಗಿರಲಿಲ್ಲ ಬದಲಿಗೆ ಸಂಘಟನಾತ್ಮಕ ಚಳುವಳಿಯಾಗಿತ್ತು ಎಂಬುದನ್ನು ಸೂಚಿಸಬಹುದು. ಹಾಗೂ ಭಾರತವನ್ನು ಒಂದು ಒಕ್ಕೂಟ ರಾಷ್ಟ್ರವನ್ನಾಗಿ ನಿರ್ಮಾಣ ಮಾಡುವಲ್ಲಿ, ಜೊತೆಗೆ ದೇಶವನ್ನು ಸುಭದ್ರವಾಗಿ ಕಟ್ಟುವಲ್ಲಿ ಶ್ರಮವಹಿಸಿದೆ ಎಂಬುದಾಗಿಯೂ ಸಹ ಕಂಡುಬಂದಿದ್ದು ಸಾಮಾಜಿಕ ನ್ಯಾಯಕ್ಕಾಗಿ 135 ವರ್ಷಗಳಿಂದಲೂ ಸ್ವಲ್ಪಮಟ್ಟಿಗಾದರೂ ರಾಜ್ಯ ಸೇರಿದಂತೆ ಭಾರತದಲ್ಲಿ ಕಾರ್ಯಸಾಧನೆ ಮಾಡುತ್ತಿರುವುದು ಹಾಗೂ ವಿಶೇಷವಾಗಿ ಅಹಿಂದ ಸಮುದಾಯಕ್ಕಾಗಿ ಕಾರ್ಯನಿರತವಾಗಿರುವುದು ಈ ಅಧ್ಯಯನದ ಕೊಡುಗೆಯಾಗಿದೆ.[13]
- ರಾಜ್ಯದಲ್ಲಿ ದೇವರಾಜ ಅರಸುರವರು ಜಾತಿಕೇಂದ್ರಿತ ತಾರತಮ್ಯವನ್ನು ಹೋಗಲಾಡಿಸಿ ಸಾಮಾಜಿಕ ಸಮಾನತೆಗೆ ಮೊದಲ ಪ್ರಯತ್ನವಾಗಿ ಸಾಮಾಜಿಕ ನ್ಯಾಯಕ್ಕೆ ಅನುಗುಣವಾಗಿ ತಮ್ಮ ಆಡಳಿತಾವಧಿಯಲ್ಲಿ ಶಾಶ್ವತ ಕಾರ್ಯಕ್ರಮಗಳ ಮೂಲಕ ಜನನಾಯಕರಾಗಿದ್ದು ಕೊಡುಗೆಯಾಗಿದೆ.
- ಅರಸುರವರ ನಂತರದ ಹಿಂದುಳಿದ ವರ್ಗಗಳ ನಾಯಕರ ಪೈಕಿ ಸಿದ್ದರಾಮಯ್ಯನವರು ಮೊದಲ ಸ್ಥಾನದಲ್ಲಿದ್ದು ಹಲವಾರು ಉಚಿತ ಭಾಗ್ಯ ಯೋಜನೆಗಳನ್ನು ಬಡ ಶೋಷಿತರಿಗೆ ವಿಶೇಷವಾಗಿ ಅವರು ಅಹಿಂದ

[13] ಪ್ರೊ. ರಾಮಚಂದ್ರ ಗುಹ, ಪ್ರಖ್ಯಾತ ಇತಿಹಾಸಕಾರರು, ಬಿಬಿಸಿ ನ್ಯೂಸ್, ಸಂದರ್ಶನ

ಸಮುದಾಯಕ್ಕೆ ಸಾಮಾಜಿಕ ನ್ಯಾಯವನ್ನು ನೀಡುವ ಪ್ರಯತ್ನದ ದಾಖಲೀಕರಣವು. ಈ ಸಂಶೋಧನೆಯ ಕೊಡುಗೆಯಾಗಿದೆ.

- ಅಹಿಂದ ಚಳುವಳಿಯು ಕರ್ನಾಟಕದಲ್ಲಿ ಸಾಮಾಜಿಕ, ಸೈದ್ಧಾಂತಿಕ, ಸಾಂಸ್ಕೃತಿಕ, ರಾಜಕೀಯ ಧ್ರುವೀಕರಣಕ್ಕೆ ಹಾಗೂ ದಲಿತ, ಶೋಷಿತ, ಹಿಂದುಳಿದ, ಅಲ್ಪಸಂಖ್ಯಾತ ನಾಯಕರ ಪರಸ್ಪರ ಸಮಾಗಮಕ್ಕೆ ನಾಂದಿಯಾಗಿದೆ.
- ಅಹಿಂದ ರಾಜಕಾರಣವು ಭಾರತದ ರಾಜಕೀಯ ಚರಿತ್ರೆಗೆ ಒಂದು ಮಾದರಿಯಾಗಿದೆ.[14]
- ಅಹಿಂದ ಚಳುವಳಿಯು ಒಂದು ರಾಜಕೀಯ ಮಿಥ್ಯೆಯಲ್ಲ ರಾಜಕೀಯವಾಗಿ ಯಶಸ್ಸು ಕಂಡಿದೆ (ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಮಾಡುವುದರ ಮೂಲಕ) ಬದಲಿಗೆ ಇದೊಂದು ಹಲವು ಅಸ್ಮಿತೆಗಳಲ್ಲಿ ಸೂಕ್ಷ್ಮ ಅಹಿಂದ ಸಂವೇದನೆಯ ಮೂಲಕ ರಾಜಕೀಯ ಧ್ರುವೀಕರಣಗೊಂಡಿದೆ.

1.18. ಅಧ್ಯಯನ ಯೋಜನೆಗಳ ಸಂಕ್ಷಿಪ್ತ ವಿವರ: (Planning of the study)

ಈ ಸಂಶೋಧನಾ ಅಧ್ಯಯನವು ತನ್ನದೇ ಆದ ಯೋಜನೆಗಳ ವಿವರಗಳನ್ನು ಒಳಗೊಂಡಿದೆ. ಅವುಗಳ ಸಂಕ್ಷಿಪ್ತ ಮಾಹಿತಿ ಈ ಕೆಳಕಂಡಂತಿವೆ.

ಅಧ್ಯಾಯ–1

ಪ್ರಸ್ತಾವನೆ (Introduction), ಪರಿಕಲ್ಪನೆ (Concept), ಸಂಶೋಧನೆಯ ಸಮಸ್ಯೆ (Research Problem), ಸಮಸ್ಯೆಯ ನಿರೂಪಣೆ: (Statement of the Problem)) ಸಾಹಿತ್ಯ ಸಮೀಕ್ಷೆ ಅಥವಾ ಪರಾಮರ್ಶೆ: (Review of Literature), ಸಂಶೋಧನಾ ಅಂತರ: (Research Gap) ಅಧ್ಯಯನದ ಉದ್ದೇಶ: (Objectives of the Study), ಪ್ರಾಕ್ ಕಲ್ಪನೆಗಳು: (Hypothesis), ಅಧ್ಯಯನ ವಿಧಾನ: (Methodology of Study),ಅಧ್ಯಯನದ ಆಧಾರ ಅಥವಾ ವಿಧಾನಕ್ರಮ: (Resources of the Study), ಅಧ್ಯಯನದ ಕ್ಷೇತ್ರ. ಮತ್ತು ವ್ಯಾಪ್ತಿ: (Study area and Scope of the Study), ಅಧ್ಯಯನದ ಮಹತ್ವ: (Importance of the Study), ಅಧ್ಯಯನದ ಪ್ರಸ್ತುತತೆ ಮತ್ತು ಅನಿವಾರ್ಯತೆ: (Needs and Necessity of the Study), ಅಧ್ಯಯನದ ಪ್ರಮುಖ ಸವಾಲುಗಳು: (Challenges of the study) ಅಧ್ಯಯನದ ಮಿತಿ: (Limitation of Study): ಅಧ್ಯಯನ ಯೋಜನೆ: (Planning of the study**).** ಮುತಾಂದ ಸಂಶೋಧನಾ ನಡಾವಳಿ ಮತ್ತು ವಿದಾನಗಳನ್ನು ವ್ಯವಸ್ಥಿತವಾಗಿ ಸೂಚ್ಯೀಕರಿಸಲಾಗಿದೆ.

ಅಧ್ಯಾಯ–2

ಭಾರತ ಸಂವಿಧಾನದಲ್ಲಿ ಸಾಮಾಜಿಕ ನ್ಯಾಯದ ವಿತರಣೆ: ಡಾ. ಬಿ.ಆರ್. ಅಂಬೇಡ್ಕರ್ ಪರಿಕಲ್ಪನೆಗೆ ಸಂಬಂಧಿಸಿದಂತೆ ಮತ್ತು ಕರ್ನಾಟಕ ಸಂದರ್ಭದ ಹಿನ್ನೆಲೆಯಲ್ಲಿ ಸಾಮಾಜಿಕ ನ್ಯಾಯ, ಹಾಗೂ ಸಾಮಾಜಿಕ ಹೋರಾಟಗಳು / ಪರಿಣಾಮಗಳು

➢ ಭಾರತ ಸಂವಿಧಾನದಲ್ಲಿ ಸಾಮಾಜಿಕ ನ್ಯಾಯ ಪರಿಕಲ್ಪನೆ, ಅರ್ಥ ವಿವರಣೆಯನ್ನು ಮತ್ತು ಸಾಮಾಜಿಕ ನ್ಯಾಯದ ವಿವಿಧ ಆಯಾಮಗಳನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಹಾಗೂ ಭಾರತ ದೇಶದ ಧರ್ಮ ಗ್ರಂಥವಾದ ಸಂವಿಧಾನದ ಮೂಲಕ ಸರ್ವಜನಾಂಗದ ಶಾಂತಿಯ ತೋಟವಾದ ನಮ್ಮ ರಾಷ್ಟ್ರದಲ್ಲಿರುವ ಪ್ರತಿಯೊಬ್ಬ ಭಾರತೀಯ ಪ್ರಜೆಗೂ ಬಹುತ್ವದ ಪರಿಕಲ್ಪನೆಯ ಅದಾರದಲ್ಲಿ ಸಾಂವಿಧಾನಿಕ ಆಶಯವಾದ ಸ್ವತಂತ್ರ, ಸಮಾನತೆ, ಬ್ರಾತೃತ್ವ ತತ್ವಗಳಡಿಯಲ್ಲಿ ಸಂವಿಧಾನವು ಮಾನ್ಯ ಮಾಡಿದ ಸೌಲಭ್ಯಗಳನ್ನು ಮತ್ತು ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಐಡೆಂಟಿಟಿ ಸಮಸ್ಯೆಗಳನ್ನು, ಪರಿಹಾರೋಪಾಯಗಳು ಅವಕಾಶಗಳನ್ನು ಪ್ರಜಾಸತಾತ್ಮಕ ವ್ಯವಸ್ಥೆಗಳಲ್ಲಿ ಸಂವಿಧಾನದ ಜಾರಿಯ ಸಂದರ್ಭದಲ್ಲಿ ತುಳಿತಕ್ಕೊಳಗಾದ ಪ್ರತಿಯೊಬ್ಬ ಪ್ರಜೆಗಳಿಗೂ ವಿಶೇಷವಾಗಿ ದಲಿತ ಸಮುದಾಯಗಳು, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರನ್ನು ಸಬಲೀಕರಣಗೊಳಿಸಲು

---

[14] ಪ್ರೊ. ನಟರಾಜ್ ಹುಳಿಯಾರ್, (ಫೆಬ್ರವರಿ 2020) ಪ್ರಜಾವಾಣಿ ಅಂಕಣಕಾರರು ಗಾಂಧಿ ಅಧ್ಯಯನ ಸಂಸ್ಥೆಯ ಸಂದರ್ಶಕ ಪ್ರಾಧ್ಯಾಪಕರು ಬೆ.ವಿವಿ. ಸಂದರ್ಶನ ಮಾಹಿತಿ

ಸ್ವತಂತ್ರದ ನಂತರದ ಭಾರತದಲ್ಲಿ ಸಂವಿಧಾನವನ್ನು ಅಳವಡಿಸಿಕೊಂಡು ಆ ಮೂಲಕ ಸಾವಿರಾರು ವರ್ಷಗಳಿಂದ ದಾಸ್ಯಕ್ಕೆ ಒಳಗಾದ ಸಮುದಾಯಗಳನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತಂದ ವಿಷಯಗಳನ್ನು ಚರ್ಚಿಸಲಾಗಿದೆ.

- ವಿಶೇಷವಾಗಿ ಡಾ.ಬಿ.ಆರ್. ಅಂಬೇಡ್ಕರ್‌ರ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಅಹಿಂದ ಸಮುದಾಯಕ್ಕೆ ಇರುವ ಸಾಂವಿಧಾನಿಕ ರಕ್ಷಣೆ, ಕಾಯ್ದೆ, ವಿಧಿವಿಧಾನಗಳ ಬಗ್ಗೆ ಲಕ್ಷ್ಯವಹಿಸಲಾಗಿದೆ.
- ಭಾರತದಲ್ಲಿರುವ ಎಲ್ಲಾ ಜನಸಮುದಾಯಗಳನ್ನು ಸಮಾನರಾಗಿ ಮಾಡುವ ಸದುದ್ದೇಶವನ್ನು ಹೊಂದಿ ಸಾಮಾಜಿಕ ನ್ಯಾಯದ ತಳಹದಿಯಲ್ಲಿ ಜನಸಮುದಾಯಗಳನ್ನು ಸಬಲೀಕರಣ, ದೌರ್ಜನ್ಯ ಮುಕ್ತ, ಶೋಷಣಾ ಮುಕ್ತರನ್ನಾಗಿ ಮಾಡಲು ಸಂವಿಧಾನದ ಸಭಾ ನಡಾವಳಿಗಳ ಮೂಲಕ ಸಂವಿಧಾನದ ಸಭೆಯಲ್ಲಿ ನಡೆದ ಸಾಮಾಜಿಕ ನ್ಯಾಯದ ಚರ್ಚೆಗಳನ್ನು ಸಹ ಕಂಡುಕೊಳ್ಳಲಾಗಿದೆ. ವಿಶೇಷವಾಗಿ ಡಾ. ಬಿ.ಆರ್ ಅಂಬೇಡ್ಕರ್‌ರವರ ಸಂವಿಧಾನದ ಕೊಡುಗೆಗಳು ಹಾಗೂ ಸಂವಿಧಾನದ ಮೂಲಕ ನೀಡಿದ ಸಾಮಾಜಿಕ ನ್ಯಾಯದ ಚರ್ಚೆಯನ್ನು ವಿಶೇಷವಾಗಿ ಸೂಚ್ಯೀಕರಿಸಲಾಗಿದೆ.
- ಸಾಮಾಜಿಕ ನ್ಯಾಯದ ಅಳವಡಿಕೆಯಲ್ಲಿನ ಹಿನ್ನೆಲೆಯ ಉದ್ದೇಶಗಳನ್ನು ಮತ್ತು ಮೂಲಭೂತ ಹಕ್ಕುಗಳಲ್ಲಿ ಸಾಮಾಜಿಕ ನ್ಯಾಯ ಹಾಗೂ ಅಹಿಂದ ಸಮುದಾಯಗಳಿಗೆ ಇರುವ ಸಂವಿಧಾನತ್ಮಕ ಕೊಡುಗೆಗಳು ಮತ್ತು ರಕ್ಷಣೆಗಳ ಮೂಲಕ ನೀಡಿರುವ ಸಂವಿಧಾನಿಕ ರಕ್ಷಣೆಗಳನ್ನು ಕಂಡುಕೊಳ್ಳಲಾಗಿದೆ. ಆ ಮೂಲಕ ದಲಿತರಿಗೆ ಹಿಂದುಳಿದ ವರ್ಗಗಳಿಗೆ ಹಾಗೂ ಅಲ್ಪಸಂಖ್ಯಾತರಿಗೆ ಸಂವಿಧಾನ ನೀಡಿರುವ ವಿಧಿಗಳು, ಕಾನೂನಿನ ರಕ್ಷಣೆಗಳು, ಸಂವಿಧಾನಿಕ ಆಯೋಗಗಳನ್ನು ಸವಲತ್ತುಗಳನ್ನು ಚರ್ಚಿಸಲಾಗಿದೆ.
- ಕರ್ನಾಟಕದ ಸಂಧರ್ಭದ ಹಿನ್ನೆಲೆಯಲ್ಲಿ ಸಾಮಾಜಿಕ ನ್ಯಾಯಪರ ಸಾಮಾಜಿಕ ಚಳುವಳಿಗಳಾದ ಹಿಂದುಳಿದ ವರ್ಗಗಳ ಚಳುವಳಿ, ದಲಿತ ಚಳುವಳಿ, ಪರಿಸರ ಚಳುವಳಿ, ರೈತ ಚಳುವಳಿ, ಕಾಗೋಡು ಚಳುವಳಿ, ಮಹಿಳಾ ಚಳುವಳಿ, ಕನ್ನಡ ಚಳುವಳಿ, ಅಹಿಂದ ಚಳಿಗಳಿಗೆ ಮುಖ್ಯವಾದ ತಳಹದಿಯೇ ಮೈಸೂರು ಪ್ರಾಂತ್ಯದಲ್ಲಿ ಬ್ರಾಹ್ಮಣೇತರರ ಚಳುವಳಿ ಇದು ಮುಂದೆ ಹಿಂದುಳಿದ ವರ್ಗಗಳ ಚಳುವಳಿಗೆ ನೀಡಿದ ಪುಷ್ಠಿಯಾಗಿತ್ತು ಎನ್ನುವುದನ್ನು ಕಂಡುಕೊಳ್ಳಲಾಗಿದೆ. ವಿಶೇಷವಾಗಿ ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ನ್ಯಾಯದ ಅನುಷ್ಠಾನ ಮತ್ತು ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಮಾನವೀಯ–ಸಾಮಾಜಿಕ ಚಿಂತನೆಗಳು ಸಾಮಾಜಿಕ ಪರಿವರ್ತನೆಗೆ ನಾಂದಿಯಾಡಿದ್ದವು ಎಂಬಂತಹ ವಿಷಯಗಳನ್ನು ಒಳಗೊಂಡಿದೆ. ಅದರಲ್ಲೂ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಮೀಸಲಾತಿ ನೀಡುವುದರ ಮೂಲಕ ಶೇ75% ಮೀಸಲು ಅವಕಾಶವನ್ನು ಹಿಂದುಳಿದ ವರ್ಗಗಳ, ಶೋಷಿತರ ಶಿಕ್ಷಣ, ಉದ್ಯೋಗಕ್ಕೆ ಹಾಗೂ ರಾಜಕೀಯ ಅವಕಾಶಗಳನ್ನು ಕುರಿತು ಚರ್ಚಿಸಲಾಗಿದೆ.
- ಮಿಲ್ಲರ್ ಆಯೋಗದ ಮೂಲಕ ಶೋಷಿತ ಹಿಂದುಳಿದ ವರ್ಗಗಳಿಗೆ ಶಿಫಾರಸ್ಸುಗಳನ್ನು ಚರ್ಚಿಸಿದೆ
- ಸಾಮಾಜಿಕ ನ್ಯಾಯಕ್ಕಾಗಿ ಸಾಮಾಜಿಕ ಹೋರಾಟಗಳನ್ನು ಬುದ್ಧ, ಬಸವ, ಅಂಬೇಡ್ಕರ್ ನೇತೃತ್ವದಲ್ಲಿ ನಡೆದ ಸಾಮಾಜಿಕ ಹೋರಾಟಗಳು ಮತ್ತು ಪರಿಣಾಮಗಳನ್ನು ಕುರಿತು ಚರ್ಚಿಸಲಾಗಿದೆ.
- ಮುಖ್ಯವಾಗಿ ಕರ್ನಾಟಕದ ಸಂದರ್ಭ ಹಿನ್ನೆಲೆಯಲ್ಲಿ ಸಾಮಾಜಿಕ ನ್ಯಾಯ ಪ್ರೇರಿತ ವಿವಿಧ ಸ್ಥರದ ಸಾಮಾಜಿಕ ಚಳುಗಳು, ಹೋರಾಟಗಳು, ವಿಶೇಷವಾಗಿ ದಲಿತ ಚಳುವಳಿ, ಬಂಢಾಯ ವಳುವಳಿ, ಬೂಸಾ ಚಳುವಳಿ ರೈತಚಳುವಳಿ ಅದರ ಅಸ್ಮಿತೆಯ ಕುಡಿಯಾಗಿ ಜನಿಸಿದ ಅಹಿಂದ ಚಳುವಳಿ ಕೂಡ. ಯಾವ ರೀತಿಯ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ತನ್ನ ರಾಜಕೀಯ ಅಸ್ಮಿತೆಯನ್ನು ಕಂಡುಕೊಂಡಿತು ಎಂಬುದನ್ನು ಸೂಕ್ಷ್ಮವಾಗಿ ಲಕ್ಷ್ಯವಹಿಸಲಾಗಿದೆ. ಜೊತೆಗೆ ಒಳಮೀಸಲಾತಿ ಮತ್ತು ಖಾಸಗಿ ವಲಯದ ಮೀಸಲಾತಿ ಬೇಡಿಕೆಗಳ ವಾಗ್ವಾದಗಳ ಬಗ್ಗೆ ಸಹ ಗಮನಹರಿಸಲಾಗಿದೆ.

ಅಧ್ಯಾಯ–3

ಕರ್ನಾಟಕದಲ್ಲಿ "ಜಾತ್ಯಾತೀತ ಮತ್ತು ಅಸ್ಮಿತೆ ರಾಜಕಾರಣ"ದ ಭಾಗವಾಗಿ 'ಅಹಿಂದ ಚಳುವಳಿ'ಯ ಉಗಮ, ಬೆಳವಣಿಗೆ ಮತ್ತು ಅಹಿಂದದ ಹಿನ್ನಡೆ(ವಾಪಸ್ಸಾತಿ)!

- "ಇಪ್ಪತ್ತನೇ ಶತಮಾನದ ಕೊನೆಯ ದಶಕ ಮತ್ತು ಇಪ್ಪತ್ತೊಂದನೇ ಶತಮಾನದ ಮೊದಲ ದಶಕದ ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಒಂದು ಹೊಸ 'ರಾಜಕೀಯ ಅಲೆ' ಸೃಷ್ಟಿಯಾಗಿದ್ದು, "ಅಹಿಂದ" ಎಂಬ ಸಂಘಟನೆಯಿಂದ" ಇದು ಸಂಭವಿಸಿ, ಸ್ವಲ್ಪ ಹೆಚ್ಚು ಕಡಿಮೆ ಕಾಲು ಶತಮಾನ ಅಥವಾ ಮೂರು ದಶಕಗಳು ಈಗಾಗಲೇ ಕಳೆದಿವೆ. ನಾಲ್ಕು ದಶಕದ ಹೊಸ್ತಿಲಲ್ಲಿದೆ. ಈ ಸಂದರ್ಭದಲ್ಲಿ, ಅಹಿಂದ ಸಂಘಟನೆಯ

ಇತಿಹಾಸದಲ್ಲಾದ ಬದಲಾವಣೆಗಳೆಂದರೆ ಅಹಿಂದವು ರಾಜಕೀಯ ಶಕ್ತಿಯಾಗಿ ಬೆಳವಣಿಯಾಗಿದ್ದು. ಇಂದು ರಾಜ್ಯಾಧಿಕಾರದ ಗದ್ದುಗೆ ಹಿಡಿಯಲು ಸನ್ನದ್ದವಾಗಿವೆ. ಜೊತೆಗೆ ಪ್ರಜಾಪ್ರಭುತ್ವದ ಮಾದರಿಯಲ್ಲಿ ಇಂದಿನ ಬಹುದೊಡ್ಡ ಸರ್ಕಾರ ಪದ್ಧತಿ ಎಂಬುದರಲ್ಲಿ ಅನುಮಾನವೇ ಇಲ್ಲ. ಪ್ರಜಾಪ್ರಭುತ್ವದ ಯಶಸ್ಸು ಅದರ ತತ್ವಗಳ ಯಶಸ್ವಿ ಅನುಷ್ಠಾನದ ಮೇಲೆ ನಿಂತಿದೆ. ಇಂತಹ ತತ್ವಗಳಲ್ಲಿ ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಮೂಲ ತಳಹದಿಗಳಾಗಿದ್ದರೆ, ಸೆಕ್ಯುಲರ್ ನೀತಿ ಅದರ ಕಳಶದಂತಿದೆ ಎನ್ನಲಾಗುತ್ತದೆ. ಹಾಗಾಗಿ ಪ್ರತೀ ರಾಷ್ಟ್ರಗಳು ತಮ್ಮನ್ನು ಸೆಕ್ಯುಲರ್ ರಾಷ್ಟ್ರ ಎಂದು ಬಿಂಬಿಸಿಕೊಳ್ಳಲು ಹವಣಿಸುತ್ತವೆ. ಅಂತಹ ರಾಷ್ಟ್ರಗಳಲ್ಲಿ ಭಾರತವೂ ಒಂದು. ಆದ್ದರಿಂದಲೇ ಬಹುತ್ವದ ಪರಿಕಲ್ಪನೆಯು ಅಹಿಂದದ ತಿರುಳಾಗಿದೆ. ಆದರೆ ವ್ಯತಿರಿಕ್ತವಾದ ರಾಜಕಾರಣ ಮಾಡುತ್ತಿರುವುದು ಪ್ರಭುತ್ವದ ವೈಫಲ್ಯವಾಗಿದೆ. ಎಂಬುದನ್ನು ಮುಖ್ಯವಾಗಿ ಗುರ್ತಿಸಲಾಗಿದೆ.

- ಅಹಿಂದ ಚಳುವಳಿಯು ಸಬಾಲ್ಟ್ರರ್ನ್ ಸ್ಟಡೀ (ತಳಸಮುದಾಯದ ಅಧ್ಯಯನ) ಹಾಗೂ ಅಸ್ಮಿತೆ ರಾಜಕಾರಣದ ಭಾಗವಾಗಿ ಅಹಿಂದ ಚಳುವಳಿ ತನ್ನ ಅಸ್ಮಿತೆಯನ್ನು ಹೇಗೆ ಕಂಡುಕೊಂಡಿತು. ಅದರ ಮುಖ್ಯವಾದ ರಾಜಕೀಯ ಮತ್ತು ಸೈದ್ಧಾಂತಿಕ ಅಜೆಂಡಾ ಏನು? ಎಂಬುದನ್ನು ಕಂಡುಕೊಳ್ಳಲಾಗಿದೆ.
- ಅಹಿಂದ ಚಳುವಳಿಯ ಜಾಗತಿಕ ಮಟ್ಟದ ಅಸ್ಮಿತೆ ಹಾಗೂ ಜಾತ್ಯಾತೀತ ನೆಲೆಗಟ್ಟಿನಲ್ಲಿ ವಿವಿಧ ಮಾದರಿಯ ಜಾಗತಿಕ ಅಹಿಂದ ಚಳುವಳಿಗಳನ್ನು ಚರ್ಚಿಸಲಾಗಿದೆ.
- ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳುವಳಿಯೋತ್ತರ ಬೆಳವಣಿಗೆಯಾಗಿ ಅಹಿಂದ ಯಾವ ವಿಧದ ಮಾದರಿಯಲ್ಲಿ ಜನ್ಮ ತಾಳಿದೆ. ಅದಕ್ಕೆ ಕಾರಣಬೂತವಾದ ಅಂಶಗಳನ್ನು ಅವಲೋಕಿಸಲಾಗಿದೆ.
- ಕರ್ನಾಟಕದಲ್ಲಿ ಅಹಿಂದ ಪರಿಕಲ್ಪನೆಯನ್ನು ವ್ಯಾಖ್ಯಾನಬದ್ದಗೊಳಿಸಲಾಗಿ, ಅಹಿಂದದ ಹುಟ್ಟು ಬೆಳವಣಿಗೆ ಹಾಗೂ ಅಹಿಂದ ಹೇಗೆ ಮತ್ತು ಏಕೆ ಹುಟ್ಟಿತು? ಅದಕ್ಕೆ ತತ್ ಕ್ಷಣದ ಕಾರಣಗಳು ಸಾಧಕ–ಭಾದಕಗಳನ್ನು ಚರ್ಚಿಸಲಾಗಿದೆ.
- ಅಹಿಂದ ಚಳುವಳಿ ಉದ್ದೇಶ ಮತ್ತು ಮಹತ್ವವನ್ನು ಕುರಿತು ಚರ್ಚಿಸಲಾಗಿದೆ.
- ಅಹಿಂದವು ಒಂದು ಸಂಘಟನೆಯೋ ಅಥವಾ ಚಳುವಳಿಯೋ ಎಂಬಂತಃ ಗೊಂದಲಕ್ಕೂ ಉತ್ತರ ಕಂಡುಕೊಳ್ಳಲಾಗಿದೆ.
- ಅಹಿಂದ ಚಳುವಳಿ ಮತ್ತು ನಾಯಕತ್ವದ ಬಗ್ಗೆ ವಿಶೇಷವಾಗಿ ಗಮನಹರಿಸಲಾಗಿದೆ. ಅಹಿಂದ ಜಾತ್ಯಾತೀತ ಹಿನ್ನಲೆಯಲ್ಲಿ 1980ರ ದಶಕದಲ್ಲಿ ಸೈದ್ಧಾಂತಿಕವಾಗಿ ಒಂದೇ ವೇದಿಕೆಯಡಿ ಬಹುತ್ವದ ಜಾತ್ಯಾತೀತದ ನಂಬಿಕೆಯ ಮೇಲೆ ಕಟ್ಟಿದ ಅಹಿಂದವನ್ನು ಸಾಮಾಜಿಕ ಹೋರಾಟಗಾರರು, ಚಳುವಳಿಗಾರರು, ಸಮುದಾಯ ಮುಖಂಡರು, ರಾಜಕೀಯ ನಾಯಕರು, ತೀರ ಹಿಂದುಳಿದ ಸಮುದಾಯಗಳನ್ನು ಒಂದೆಡೆ ಸೇರಿಸಿ ಒಗ್ಗಟ್ಟಿನಿಂದ ಒಂದು ರಾಜಕೀಯ ಶಕ್ತಿಯಾಗಿ ರಾಜ್ಯಾಧಿಕಾರವನ್ನು ಹಿಡಿಯಲು ಮತ್ತು ಸೈದ್ಧಾಂತಿಕವಾಗಿ ಸಮುದಾಯಗಳನ್ನು ಒಗ್ಗೂಡಿಸುವ ಕಾರ್ಯವನ್ನು ಮಾಡಿತು, ಈ ನಿಟ್ಟಿನಲ್ಲಿ ಸಾಗಿದ ಸಂಘಟನೆಯಲ್ಲಿ ಹಲವಾರು ರಾಜಕೀಯ ನಾಯಕರು, ಹಿಂದುಳಿದ ವರ್ಗಗಳು ಅಲ್ಪಸಂಖ್ಯಾತರು ರಾಜಕೀಯವಾಗಿ ಪ್ರವರ್ದಮಾನಕ್ಕೆ ಬಂದಂತಹ ಚಿತ್ರಣವನ್ನು ಕಂಡುಕೊಳ್ಳಲಾಗಿದೆ. ಅದೇ ರೀತಿಯಲ್ಲಿ ಸಿದ್ದರಾಮಯ್ಯನವರ ರಾಜಕೀಯ ಸಾಧನೆಗಳು ಅಹಿಂದ ಕಟ್ಟುವಲ್ಲಿ ಅವರ ಪ್ರಯತ್ನವನ್ನು ತಿಳಿಸಲಾಗಿದೆ.
- ಅಹಿಂದ ಚಳುವಳಿಯು ಹಿನ್ನಡೆಯನ್ನು ಅನುಭವಿಸಿದ್ದು ಏಕೆ? ಅಥವಾ ವಾಪಸ್ಸಾತಿಯಾದದ್ದು ಏಕೆ? ಎನ್ನುವ ಹಲವು ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲಾಗಿದೆ. ಅದರ ಕಾರಣ ಪರಿಣಾಮಗಳನ್ನು ಸಹ ಗ್ರಹಿಸಲಾಗಿದೆ.
- ಮುಖ್ಯವಾಗಿ ಅಹಿಂದವನ್ನು ಕೇವಲಾ ಒಂದು ರಾಜಕೀಯ ಭಾಗ ಮಾಡಿದ್ದು ಏಕೆ? ಮತ್ತು ಓಟುಬ್ಯಾಂಕಾಗಿ ಏಕೆ ಉಪಯೋಗವಾಗುತ್ತಿವೆ? ಅದರ ಸಹಸ್ತ್ರ ಸಮಸ್ಯೆಗಳು ಕಣ್ಮರೆಯಾದ್ದದ್ದು ಏಕೆ? ಎಂಬಂತಹ ತಾರ್ಕಿಕ ಅಂಶಗಳಿಗೆ ಉತ್ತರವನ್ನು ಸಹ ಕಂಡುಕೊಳ್ಳಲಾಗಿದೆ.
- ಭಾರತೀಯ ಸಾಮಾಜಿಕ ಸಂಕೀರ್ಣದ ಸಂದರ್ಭದಲ್ಲಿ ಅಹಿಂದದ ಪ್ರಸ್ತುತತೆಯನ್ನು ವಿಮರ್ಶಿಸುವುದು ಕೂಡ ಮಹತ್ವದ್ದು ಆದ್ದರಿಂದ ಅಹಿಂದ ಏಕೆ ಒಗ್ಗಟ್ಟಾಗಬೇಕು ಎನ್ನುವುದು ಸಹ ಮಹತ್ವ ಪಡೆದುಕೊಂಡಿದೆ.
- ಸಾಮಾಜಿಕ ಆರ್ಥಿಕ, ರಾಜಕೀಯ ಸಂಕ್ರಮಣದ ಈ ಸಂದರ್ಭದಲ್ಲಿ ಅಹಿಂದವನ್ನು ಬಲಪಡಿಸುವುದು ಉಚಿತವಾದುದ್ದೇ? ಬಲಪಡಿಸುವುದಾದರೆ ಹೇಗೆ? ಮತ್ತು ಯಾರು? ಈ ಎಲ್ಲಾ ತಾರ್ಕಿಕತೆಗೆ ಅಹಿಂದವು ಯುವ ಸಂಘಟನೆಯ ಮೂಲಕ ಹಾಗೂ ಸಿದ್ದರಾಮಯ್ಯನವರು ಅಹಿಂದ ಪುನಚ್ಛೇತನ ನೀಡಲು ಮುಂದಾಗಿ ಗ್ರಾಮ,

ತಾಲೂಕು, ಜಿಲ್ಲಾ ಮಟ್ಟದಲ್ಲಿ ತಳಮಟ್ಟದ ನಾಯಕತ್ವಕ್ಕೆ ಹಾಗೂ ನವನಾಯಕತ್ವಕ್ಕೆ ಆದ್ಯತೆಯನ್ನು ನೀಡಲು ಮುಂದಾಗುತ್ತಿರುವುದು ತಿಳಿದುಬಂದಿದೆ.

- ಅಹಿಂದ ಚಳುವಳಿಯನ್ನು ರಾಜಕೀಯ ಪಕ್ಷಗಳು, ಪ್ರಗತಿಪರ ಸಂಘಟನೆಗಳು, ಸಂಘಸಂಸ್ಥೆಗಳು ಬಲಪಡಿಸಲು ಅವುಗಳ ಪಾತ್ರದ ಬಗ್ಗೆ ಚರ್ಚಿಸಲಾಗಿದೆ.

ಅಧ್ಯಾಯ – 4

ಕಾಂಗ್ರೆಸ್‌ನ ಸಂದರ್ಭದಲ್ಲಿ "ಸಾಮಾಜಿಕ ನ್ಯಾಯ" ವಿಶೇಷವಾಗಿ ಹಿಂದುಳಿದ ವರ್ಗಗಳ ಚಾಂಪಿಯನ್ ಡಿ. ದೇವರಾಜ ಅರಸುರವರ ಸಾಧನೆ ಮತ್ತು ಕೊಡುಗೆಗಳು.

ಕಾಂಗ್ರೆಸ್‌ನ ಸಂಧರ್ಭದಲ್ಲಿ ಸಾಮಾಜಿಕ ನ್ಯಾಯವು ಇಡೀ ಭಾರತದಲ್ಲೇ ವಿಶೇಷಾದ್ಯತೆಯನ್ನು ಮತ್ತು ವೈಶಿಷ್ಟ್ಯತೆಯನ್ನು ಹಾಗೂ ಪ್ರಗತಿಶೀಲತೆಯನ್ನು ಸಾಧಿಸಿದೆ. ಏಕೆಂದರೆ ಸ್ವಾತಂತ್ರ್ಯದ ಪೂರ್ವದಿಂದಲೂ ನ್ಯಾಯ, ಸ್ವತಂತ್ರಕ್ಕಾಗಿ ಹಲವು ಪ್ರಗತಿಪರವಾದ ಹೋರಾಟವನ್ನು, ಚಳಿವಳಿವನ್ನು, ಹಾಗೂ ಧರಣಿಗಳನ್ನು ಮಾಡುತ್ತಾ, ಒಳಗೊಳ್ಳುವ ಅಭಿವೃದ್ಧಿ ಮಾದರಿಗಳ ಸ್ಥಾಪನೆಗೆ ಭದ್ರಬುನಾದಿ ಹಾಕುತ್ತಾ ಹೊರಗಿನವರಿಂದ ಹಾಗೂ ಒಳಗಿನವರಿಂದ ಆರ್ಥಿಕ ನಷ್ಟದಂತಹ ಆಕ್ರಮಣಕಾರಿ ನಿಲುವುಗಳ ವಿರುದ್ಧ ಹೋರಾಡಿದೆ. ಜೊತೆಗೆ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಹಾಗೂ ಹೋರಾಟವನ್ನು ಮಾಡಿದ ಕಾಂಗ್ರೆಸ್ ಪಕ್ಷವು ನಂತರ ಪ್ರಭುದ್ಧ ಭಾರತವನ್ನು ಕಟ್ಟಲು ಹಾಗೂ ಭಾರತೀಯರ ಜೀವನ ವಿಧಾನವನ್ನು ಬದಲಿಸಿದ ಕೀರ್ತಿ ಮತ್ತು ಆರ್ಥಿಕತೆಯನ್ನು ಸರಿದೂಗಿಸಿ, ವಿಶ್ವದ ಮಟ್ಟದಲ್ಲಿ ಭಾರತದ ಘನತೆಯನ್ನು ಹಾಗೂ ಶಕ್ತಿ ಸಾಮಾರ್ಥ್ಯವನ್ನು ಜೊತೆಗೆ ಭಾರತಕ್ಕೆ ಒಂದು ಐಡೆಂಟಿಟಿಯನ್ನು ಸಹ ಕೊಟ್ಟ ಕೀರ್ತಿ ಕಾಂಗ್ರೆಸ್‌ಗೆ ಸಲ್ಲುತ್ತದೆ. ಹಾಗೆಯೇ ನಮ್ಮ ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ, ಇತಿಹಾಸದಲ್ಲಿ ಸಾಮಾಜಿಕ ನ್ಯಾಯವು ತನ್ನದೇ ಆದ ಮಾನ್ಯತೆಯನ್ನು ಪಡೆದುಕೊಂಡಿದೆ ಏಕೇಂದರೆ ಈ ಮಣ್ಣಿನ ವಾಸನೆಯೇ ಹೇಳುವಂತೆ ಸಮತೆ, ಕರುಣೆ, ಮಮತೆ, ಪ್ರಜ್ಞೆ ಸಾಮಾಜಿಕ ಒಳಗೊಳ್ಳುವಿಕೆ ಹಾಗೂ ಸಾಮಾಜಿಕ ಸಾಮರಸ್ಯತೆಗೆ ಹೇಳಿ ಮಾಡಿಸಿದ ಈ ನಾಡಲ್ಲಿ ಸುವ್ಯವಸ್ಥಿತವಾದ ಸಾಮಾಜಿಕ ನ್ಯಾಯವನ್ನು ಅಕ್ಷರಸಃ ಸ್ಥಾಪಿಸಿದ ಹೆಗ್ಗಳಿಕೆಗೆ ನಮ್ಮ ಹೆಮ್ಮೆಯ ಕರುನಾಡಿಗೆ ಸಲ್ಲುತ್ತದೆ. ಆದ್ದರಿಂದ ಈ ಸಾಮಾಜಿಕ ನ್ಯಾಯಕ್ಕೆ ಹೆಸರಾದ ಕರ್ನಾಟಕದಲ್ಲಿ ಹಲವು ಮಹನೀಯರು ಸಾಮಾಜಿಕ, ಆರ್ಥಿಕ, ರಾಜಕೀಯ ಆಡಳಿತ ಹಾಗೂ ನ್ಯಾಯಕ್ಕಾಗಿ ಹಲವು ಗಣ್ಯರ ತ್ಯಾಗ, ಮತ್ತು ಪರಿಶ್ರಮದ ಕೊಡುಗೆಯನ್ನು ನಾವು ಮರೆಯುವಂತಿಲ್ಲಾ

- ಮೈಸೂರು ರಾಜ್ಯ(ಸಂಸ್ಥಾನ) ದಲ್ಲಿ 'ಕಾಂಗ್ರೆಸ್ ಪಕ್ಷ'ದ ಉದಯ. ಹಾಗೂ ಐತಿಹಾಸಿಕ ಕಾಂಗ್ರೆಸ್ ಆಡಳಿತಲ್ಲಿ ಸಾಮಾಜಿಕಮುಖಿ ಹಾಗೂ ಆಡಳಿತಾತ್ಮಕ ಚಿಂತನೆಯಲ್ಲಿ ಸಾಮಾಜಿಕ ನ್ಯಾಯ. **ಹಾಗೂ** ಕಾಂಗ್ರೆಸ್ ಆಡಳಿತದ ಒಂದು ಸ್ಥೂಲನೋಟದ ಬಗ್ಗೆ ಚರ್ಚಿಸಲಾಗಿದೆ ಆ ಮೂಲಕ ರಾಜ್ಯದಲ್ಲಿ ಆಳ್ವಕೆ ಮಾಡಿದ 60 ರಿಂದ 65 ವರ್ಷದ ಕಾಂಗ್ರೆಸ್ ಪಕ್ಷದ ಇತಿಹಾಸವನ್ನು ಸಂಕ್ಷಿಪ್ತವಾಗಿ ಹಾಗೂ ವಿಸೃತ ಮಾಹಿತಿಯ ಆಧಾರದ ಮೇಲೆ ಕಂಡುಕೊಳ್ಳಲಾಗಿದೆ. ಅಲ್ಲದೇ ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಎಸ್. ನಿಜಲಿಂಗಪ್ಪ, ಬಿ.ಡಿ. ಜತ್ತಿ, ಎಸ್. ಆರ್. ಕಂಠಿ, ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ್, ಡಿ. ದೇವರಾಜ ಅರಸು, ಆರ್. ಗುಂಡುರಾವ್(ವಿಸರ್ಜಿತ), ವೀರೇಂದ್ರ ಪಾಟೀಲ್, ಎಸ್. ಬಂಗಾರಪ್ಪ, ವೀರಪ್ಪ ಮೊಯ್ಲಿ(ವಿಸರ್ಜಿತ), ಎಸ್.ಎಂ. ಕೃಷ್ಣ, ಎನ್.ಧರಂಸಿಂಗ್, ಸಿದ್ದರಾಮಯ್ಯ, ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸರ್ಕಾರಗಳು 60-65 ವರ್ಷದ ಆಡಳಿತದಲ್ಲಿ ಸಾಮಾಜಿಕ ನ್ಯಾಯಕ್ಕೆ ಅನುಗೂಣವಾದ ಆಡಳಿತವನ್ನು ಚರ್ಚಿಸಲಾಗಿದೆ.
- ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಇತಿಹಾಸ, ಬೆಳವಣಿಗೆ ಮತ್ತು ಆಡಳಿತದಲ್ಲಿ ಸಾಮಾಜಿಕ ನ್ಯಾಯ ಪರ ಐತಿಹಾಸಿಕ ಚಿಂತನೆಯ ಸಂಕ್ಷಿಪ್ತ ಪರಿಚಯವನ್ನು ಸಹ ತಿಳಿಸಲಾಗಿದೆ.
- ಕರ್ನಾಟಕದ ರಾಜಕಾರಣ ಮತ್ತು ಡಿ. ದೇವರಾಜ ಅರಸ್‌ರ ಜೀವನ ಮತ್ತು ಸಾಧನೆಯನ್ನು ಕುರಿತು ಸಂಕ್ಷಿಪ್ತಗೊಳಿಸಲಾಗಿದೆ. ಹಾಗೂ ದೇವರಾಜ ಅರಸುರವರ ಮೇಲಾದ ಸೈದ್ಧಾಂತಿಕ ಪ್ರೇರಣೆಗಳು ಅವರನ್ನು ಒಬ್ಬ ಮಾನವೀಯ ಮುತ್ಸದ್ಧಿ ರಾಜಕಾರಣಿಯಾಗಿ ಭಾರತದಲ್ಲಿ ತನ್ನದೆ ಛಾಪು ಮೂಡಿಸಲು ಪ್ರೇರಣೆಯಾದದನ್ನು ಮತ್ತು ರಾಜಕಾರಣದ ಪ್ರವೇಶ ತಿಳಿಸಲಾಗಿದೆ.
- ಕರ್ನಾಟಕ ರಾಜಕಾರಣದ ಐತಿಹಾಸಿಕ ಚಿಂತನೆಯ ಹಿನ್ನೆಲೆಯಲ್ಲಿ ಅರಸುರವರ ಸಮಾಜಮುಖಿ ಆಡಳಿತ. ಮತ್ತು ರಾಜಕಾರಣದ ಏಳುಬೀಳಿನ ಸ್ಥಿತ್ಯಾಂತರಗಳು, ಕಾಂಗ್ರೆಸ್ ಪಕ್ಷದ ವಿಭಜನೆ 1969, ಸಂಸ್ಥಾ ಕಾಂಗ್ರೆಸ್, ರಾಜಕೀಯ

ಪರಿವರ್ತನೆಗೆ ನಾಂದಿ ಹಾಡಿದ 'ಎಕ್ಸ್ ಪೋ–70 ಚಳುವಳಿ' ಬೂಸಾ ಪ್ರಕರಣ 1973 ದೇವರಾಜ ಅರಸು ಹಾಗೂ ತುರ್ತು ಪರಿಸ್ಥಿತಿ, ಸೋಷಿಯಲಿಸ್ಟರು ಹಾಗೂ ತುರ್ತುಪರಿಸ್ಥಿತಿ, ವಿರೋಧ ಪಕ್ಷದ ನಾಯಕನಾಗಿ ಅರಸು, ಮತ್ತು ಕಾಂಗ್ರೆಸ್ ಪಕ್ಷದಿಂದ ಅರಸು ಅವರ ಉಚ್ಚಾಟನೆ, ಹಾಗೂ 'ಕರ್ನಾಟಕ ಕಾಂಗ್ರೆಸ್ ಪಕ್ಷ', 'ಕ್ರಾಂತಿರಂಗ ಪಕ್ಷ' ಸ್ಥಾಪನೆ, ಹೀಗೆ ದೇವರಾಜ ಅರಸುರವ ವಿವಿಧ ಮುಖಗಳ ಬಗ್ಗೆ ರಾಜಕೀಯ ಸಾಧಕ–ಭಾದಕಗಳನ್ನು ಸೂಕ್ಷ್ಮಿಕರಿಸಿ ಅಧ್ಯಯನದ ಓರೆಗೆ ಹಚ್ಚಲಾಗಿದೆ.

- ಕಾಂಗ್ರೆಸ್‌ನ ಸಂದರ್ಭದಲ್ಲಿ ಡಿ.ದೇವರಾಜ ಅರಸರ ಸಾಮಾಜಿಕ ನ್ಯಾಯಪರ ಜನಪ್ರಿಯ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು 20 ಅಂಶಗಳ ಕಾರ್ಯಗಳನ್ನು ಹಾಗೂ ಸಲವು ಪ್ರಗತಿದಾಯಕ ಶಾಶ್ವತವಾದ ಬಡತನ ನಿರ್ಮೂಲನಾ ಕಾರ್ಯಗಳನ್ನು ಕಾರ್ಯ ಜಾರಿಗೊಳಿಸಲಾಗಿದೆ. 1.ಕರ್ನಾಟಕದ ಸಾಮಾಜಿಕ ನ್ಯಾಯದ ಪ್ರತಿಪಾದಕ ಅಥವಾ ಹರಿಕಾರರಾಗಿ ಡಿ. ದೇವರಾಜ ಅರಸು ರಾಜ್ಯದ ಮನೆಮಾತಾಗಿದ್ದನ್ನು ಚರ್ಚಿಸಲಾಗಿದೆ. ಅವರು ಮುಖ್ಯಮಂತ್ರಿಯಾಗಿದ್ದಾಗ ಮೈಸೂರು ರಾಜ್ಯ ಎಂಬುದರ ಬದಲು 1973ರಲ್ಲಿ ಕರ್ನಾಟಕ ರಾಜ್ಯ ಎಂದು ಮರು ನಾಮಕರಣ ಮಾಡಿದ್ದು; ಜೊತೆಗೆ ಭಾಷಾ ಆಯೋಗವನ್ನು ನೇಮಿಸಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲು ಬುನಾದಿ ಹಾಕಿದ್ದು. 2. ಭೂಸುಧಾರಣೆ ಕಾಯಿದೆಯನ್ನು ಜಾರಿಗೆ ತಂದದ್ದು. 3. ಎಲ್.ಜಿ. ಹಾವನೂರು ಕಮಿಷನ್ ನೇಮಕ ಮಾಡಿ, ಆ ವರದಿಯನ್ನು ಎದೆಗಾರಿಕೆಯಿಂದ ಜಾರಿಗೆ ತಂದದ್ದು. 4. ಇವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದ ಬಿ. ಬಸವಲಿಂಗಪ್ಪನವರು ದಲಿತರು ತಲೆಯ ಮೇಲೆ ಮಲಹೊರುವ ಪದ್ಧತಿಯನ್ನು ನಿರ್ಮೂಲನ ಮಾಡಲು ಯೋಜನೆಯೊಂದನ್ನು ನಿರ್ಮಿಸಿ ಇವರ ಗಮನಕ್ಕೆ ತಂದಾಗ ಅದಕ್ಕೆ ಸಂಪೂರ್ಣ ಬೆಂಬಲ ನೀಡಿದ್ದು ಇವರ ಸಾಮಾಜಿಕ ನ್ಯಾಯ ಕಾರ್ಯಕ್ಕೆ ಇಡಿದ ಕೈಗನ್ನಡಿಯಾಗಿದೆ.
- ಭೂಸುಧಾರಣೆ ಶಾಸನದ ಮೂಲಕ ಡಿ. ದೇವರಾಜ ಅರಸು ಕರ್ನಾಟಕದಲ್ಲಿ (ಉಳುವವನೆ ಹೊಲದೊಡೆಯ) ಭೂಸುಧಾರಣಾ ಕಾಯಿದೆ ಜಾರಿ 1974. ಕ್ರಾಂತಿಕಾರಕ ಸುಧಾರಣೆಯನ್ನು ನೀತಿಯನ್ನು ರೂಪಿಸಿದರು, ಇದರಿಂದ ಇಂದಿರಾಗಾಂಧಿಯ ಕನಸನ್ನು ನನಸು ಮಾಡಿದರು.
- ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಮತ್ತು ಧ್ವನಿ ಇಲ್ಲದವರ ಧ್ವನಿಯಾಗಿ ಡಿ.ದೇವರಾಜ ಅರಸುರವರ ಸಾಧನೆಗಳು ಹಾಗೂ ಕೊಡುಗೆಯಾಗಿ ಹಾವನೂರು ಆಯೋಗವನ್ನು ರಚಿಸುವುದ ಮೂಲಕ ಹಿಂದುಳಿದ ವರ್ಗಗಳ ಇತರೆ ಧನಿ ಇಲ್ಲದ ಸಾವಿರಾರು ಸಣ್ಣಪುಟ್ಟ ಜಾತಿಗಳಿಗೆ ಐಡೆಂಟಿಟಿ ಕೊಟ್ಟು ಆ ಸಮುದಾಯಗಳನ್ನು ಸಬಲೀಕರಣಗೊಳ್ಳಲು ಸಹಕಾರಿಯಾದರು. ಜೊತೆಗೆ ಹಿಂದುಳಿದ ಬಡವರನ್ನು ಸಬಲೀಕರಿಸುವುದಕ್ಕಾಗಿ ಸಮಾಜಮುಖಿ ರಾಜಕಾರಣ ಮಾಡಿದ ದೇವರಾಜ ಅರಸು ರಾಜ್ಯದ ಜನತೆಯ ಮನಸಿನಲ್ಲಿ ಶಾಶ್ವತವಾದ ಸ್ಥಾನ ಪಡೆದರು. ಆ ಮೂಲಕ ಸ್ವತಂತ್ರ ಭಾರತ ಕಂಡ ಧೀಮಂತ ಜನಪರ ಮುಖ್ಯಮಂತ್ರಿಯಾದರು.

ಅಧ್ಯಾಯ – 5

ಕರ್ನಾಟಕದ ಸಂದರ್ಭದಲ್ಲಿ "ಅಹಿಂದ ಚಳುವಳಿ" ಮತ್ತು ಸಾಮಾಜಿಕ ನ್ಯಾಯ ವಿಶೇಷವಾಗಿ ಸಿದ್ಧರಾಮಯ್ಯನವರ ಆಡಳಿತಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆ ಹಾಗೂ 'ಸಿದ್ಧ್ ಸಮಾಜವಾದ'ದ ಚರ್ಚೆ

- ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಜನ ನಾಯಕರಾಗಿ ಹಾಗೂ ಸಾಮಾಜಿಕ ನ್ಯಾಯದ ಹರಿಕಾರರಾಗಿ, ಡಿ.ದೇವರಾಜ ಅರಸುರವರ ಯಶಸ್ವಿ ಆಡಳಿತದ ತರುವಾಯ ಅದೇ ಸಾಮಾಜಿಕ ನ್ಯಾಯಕೇಂದ್ರಿತ ಮಾದರಿಯಲ್ಲಿ ನಾಲ್ಕು ದಶಕಗಳ ನಂತರ 5 ವರ್ಷಗಳ ಕಾಲ ಯಶಸ್ವಿ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಪೂರೈಸಿದ ಕೀರ್ತಿ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ. ತಮ್ಮ ಸಚಿವ ಸಂಪುಟದಲ್ಲೇ ಎಲ್ಲಾ ಹಿಂದುಳಿದ, ಅಲ್ಪ ಸಂಖ್ಯಾತ, ದಲಿತರಿಗೆ ಮತ್ತು ಎಲ್ಲಾ ವರ್ಗದ ಮಹಿಳೆಯರಿಗೆ ಹಾಗೂ ವರ್ಗದವರಿಗೆ ಸಮಾನ ರಾಜಕೀಯ ಅಧಿಕಾರವನ್ನು ನೀಡಿದ ಕೀರ್ತಿಯೂ ಸಹ ಸನ್ಮಾನ್ಯ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ. ನಾಡಿನಲ್ಲಿ ಸಾಮಾಜಿಕ ನ್ಯಾಯದ ಶ್ರೇಷ್ಠತೆಯ ಸಾರವನ್ನು, ಆಧುನಿಕ ಸಂಧರ್ಭದಲ್ಲಿ ಮೆರೆದ ಈ ಮಹಾನ್ ವ್ಯಕ್ತಿ ಅಧಿಕಾರಕ್ಕೆ ಬಂದ ದಿನವೇ ಬಡವರ, ಹಿಂದುಳಿದವರ, ದಲಿತರ, ಶೋಷಿತರ, ಮಹಿಳೆಯರ, ರೈತರ ಏಳಿಗೆಗಾಗಿ ಹಾಗೂ ಸಾಮಾಜಿಕ ನ್ಯಾಯ, ವಿತರಣಾತ್ಮಕ ನ್ಯಾಯದ ಅನುಷ್ಠಾನಕ್ಕೆ ಹಲವಾರು ಭಾಗ್ಯಗಳನ್ನು ನೀಡಿ ಬಡವರ ಭಾಗ್ಯವಿದಾತನಾದ ಸಿದ್ದರಾಮಯ್ಯನವರು ಸಮಕಾಲಿನ ರಾಜಕೀಯ ಇತಿಹಾಸದ ಪುಟದಲ್ಲಿ ತಮ್ಮದೇ ಆದ ಅಧ್ಯಾಯವನ್ನು ಸೃಷ್ಟಿಸಿದ್ದಾರೆ.

- ಕರ್ನಾಟಕದ ರಾಜಕಾರಣದಲ್ಲಿ ಶ್ರೀ ಸಿದ್ದರಾಮಯ್ಯನವರ ಜೀವನದ ಯಶೋಗಾತೆಯು ಅತ್ಯಂತ ವರ್ಣಮಯವಾಗಿದೆ. ಮತ್ತು ಸಿದ್ದರಾಮಯ್ಯನವರದು ಸ್ವಾಭಿಮಾನದ ಹೋರಾಟದ ಬದುಕು ಏಕೆಂದರೆ ಸಮಾಜವಾದದ ಹಿನ್ನೆಲೆಯು ಇವರನ್ನು ಒಬ್ಬ ಉತ್ತಮ ರಾಜಕೀಯಪಟುವನ್ನಾಗಿ ಮಾಡಿತು. ಜೊತೆಗೆ ಸಿದ್ದರಾಮಯ್ಯ ರಾಜಕೀಯ ಜೀವನದ ಮಹಾ ತಿರುವು ಪಡೆದುಕೊಂಡಿದ್ದು 2006ರ ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ಇದನ್ನು ಸಹ ಚರ್ಚಿಸಲಾಗಿದೆ.
- ರಾಜ್ಯದಲ್ಲಿ 'ಡಿಸಿಎಂ ಆಗಿ ಸಿಎಂ' ಆದ 4ನೇ ಜನನಾಯಕ ಶ್ರೀ ಸಿದ್ದರಾಮಯ್ಯನವರು ತಮ್ಮ ಹುಟ್ಟೂರಾದ 'ಸಿದ್ದರಾಮಯ್ಯನ ಹುಂಡಿ'ಯಿಂದ 'ವಿಧಾನಸೌಧ'ದ ಮೂರನೇ ಮಹಡಿ'ಯವರೆಗಿನ ಐತಿಹಾಸಿಕ ರಾಜಕೀಯದ ಏಳುಬೀಳುಗಳನ್ನು ವಿಶ್ಲೇಷಣೆ ಮಾಡಲಾಗಿದೆ.
- ಸಮಾಜವಾದಿಯಾಗಿ ಶ್ರೀ ಸಿದ್ಧರಾಮಯ್ಯನವರು ಕರ್ನಾಟಕ ರಾಜ್ಯ ಕಂಡ ಸಮಾಜವಾದಿಗಳಲ್ಲಿ ಮಾಜಿ ಮುಖ್ಯಮಂತ್ರಿಯಾದ ಸಿದ್ದುರವರು ಕೂಡ ಪ್ರಮುಖರು. ಸ್ವತಃ ಸಿದ್ಧರಾಮಯ್ಯನವರು ತಮ್ಮನ್ನು ತಾವು ರಾಜಕೀಯವಾಗಿ ಸಮಾಜವಾದಿ ಎಂದು ಕರೆದುಕೊಳ್ಳ ಬಯಸುವವರು. ಅದರಲ್ಲೂ ಲೋಹಿಯಾ ಸಮಾಜವಾದಿ ಎಂದು ಗುರುತಿಸಿಕೊಳ್ಳಲು ಅವರಿಗೆ ಹೆಚ್ಚಿನ ಹೆಮ್ಮೆ.
- ಕರ್ನಾಟಕದಲ್ಲಿ 'ಅಹಿಂದ' ರಾಜಕಾರಣ ಮತ್ತು ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರಿಗೆ ಅವಿನಾಭವ ಸಂಬಂಧವಿದೆ. ಏಕೆಂದರೆ ಅಹಿಂದ ರಾಜಕಾರಣವು ಕರ್ನಾಟಕದಲ್ಲಿ ಬಹಳ ಮಹತ್ವವನ್ನು ಪಡೆದುಕೊಂಡಿದೆ. ಹಲವಾರು ಶೋಷಿತ ಸಮುದಾಯಗಳು, ಹಿಂದುಳಿದ ವರ್ಗಗಳು, ಧ್ವನಿ ಇಲ್ಲದ ಅನೇಕ ಸಮುದಾಯಗಳು ಹಾಗೂ ಅಲ್ಪಸಂಖ್ಯಾತರನ್ನು ಒಳಗೊಂಡಂತೆ ಸಮಾನ ವಂಚನೆಗೆ, ಅನ್ಯಾಯಕ್ಕೆ ಒಳಗಾದಂತಹ ಎಲ್ಲಾ ಸಮುದಾಯಗಳು ಒಂದು ರಾಜಕೀಯ ಶಕ್ತಿಯಾಗಿ ಪ್ರಭುತ್ವವನ್ನು ಮುನ್ನಡೆಸುವ ಒಂದು ಮಹೋನ್ನತ ಕಾರ್ಯವೇ ಅಹಿಂದ ರಾಜಕಾರಣ. ಇದನ್ನು ಯಶಸ್ವಿಯಾಗಿ ಮುನ್ನಡೆಸಿದ ಸಿದ್ದುರವರ ರಾಜಕಾರಣವನ್ನು ಚಿಂತಿಸಿದೆ.
- ಕಾಂಗ್ರೆಸ್‌ನ ಮುಖ್ಯಮಂತ್ರಿಯಾಗಿ ಶ್ರೀ ಸಿದ್ಧರಾಮಯ್ಯನವರ ಸವಾಲುಗಳನ್ನು ಚರ್ಚಿಸಿದೆ.
- ಸಿದ್ದರಾಮಯ್ಯನವರು ಸಾಮಾಜಿಕ ನ್ಯಾಯಕ್ಕಾಗಿ ಅನುಷ್ಠಾನಕ್ಕೆ ತಂದ ಜನಪ್ರಿಯ ಭಾಗ್ಯ ಯೋಜನೆಗಳು ಮತ್ತು ಕಾಯ್ದೆ / ಕಾನೂನುಗಳು ವಿಶ್ಲೇಷಿಸಲಾಗಿದೆ. ಜೊತೆಗೆ ಪ್ರಣಾಳಿಕೆಯಲ್ಲಿ ನೀಡಿದ್ದ 106 ಭರವಸೆಗಳ ಪೈಕಿ 100ಕ್ಕೂ ಅಧಿಕ ಭರವಸೆಗಳನ್ನು ಈಡೇರಿಸಿದ ಕಾರ್ಯಗಳ ಬಗ್ಗೆ ವಿವರಿಸಿದೆ.
- ಮುಖ್ಯಮಂತ್ರಿಯಾಗಿ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರ ಸಾಧನೆಗಳು ಮತ್ತು ಕೊಡುಗೆಗಳು ಹಾಗೂ ಜನಪ್ರಿಯ ಭಾಗ್ಯ ಯೋಜನೆಗಳು / ಕಾರ್ಯಕ್ರಮಗಳ ಸಂಕ್ಷಿಪ್ತ ವಿವರಣೆ ನೀಡಿದೆ.
- ವಿವಿಧ ಸಮಾಜಮುಖಿ ಮತ್ತು ಉಚಿತ ಭಾಗ್ಯ ಯೋಜನೆಗಳ ಮೂಲಕ ಕರ್ನಾಟಕದಲ್ಲಿ ಸಾಮಾಜಿಕ ನ್ಯಾಯದ 'ಮುಂದುವರಿದ ಹರಿಕಾರನಾಗಿ' ಹೊರಹೊಮ್ಮಿದ ಶ್ರೀ ಸಿದ್ದರಾಮಯ್ಯ
- ಕರ್ನಾಟಕದಲ್ಲಿ ಸಾಮಾಜಿಕ ಸಮಾನತೆಗೆ ನಾಂದಿಯಾದ ಜಾತಿ ಸಮೀಕ್ಷೆ (ಸಾಮಾಜಿಕ ಮತ್ತು ಆರ್ಥಿಕ ಗಣತಿ) ಇದು ಭಾರತ ರಾಜಕೀಯ ಇತಿಹಾಸದಲ್ಲೆ ಕ್ರಾಂತಿಕಾರಕ ನಡೆಯಾಗಿತ್ತು ಎಂಬುದು ವಿಶೇಷ. ಆದ್ದರಿಂದ ಇದನ್ನು ತಿಳಿಸಲಾಗಿದೆ.
- ಭಾರತದ ರಾಜಕೀಯ ಇತಿಹಾಸ ಪುಟದಲ್ಲಿ ಹಲವು ಮೊದಲುಗಳ ಸರ್ಕಾರವಾಗಿ ಮತ್ತು ಬಡತನ, ಹಸಿವುಮುಕ್ತ ಹಾಗೂ ಗುಡಿಸಲು ಮುಕ್ತ ಕರ್ನಾಟಕದ ಸಂಕಲ್ಪದ ಹಾದಿಯಲ್ಲಿ ಶ್ರೀ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರದ ಕಾರ್ಯವೈಕರಿ ಬಗ್ಗೆ ಹಾಗೂ ಅನ್ನಭಾಗ್ಯ, ವಸತಿ ಭಾಗ್ಯ, ಸೇರಿದಂತೆ ಭಾಗ್ಯಗಳನ್ನು ನೀಡಿ ರಾಜ್ಯವನ್ನು ಮುನ್ನಡೆಸಿದ್ದರ ಬಗ್ಗೆ ಚರ್ಚಿಸಿದೆ.
- ಕರ್ನಾಟದ ಆರ್ಥಿಕ ವ್ಯವಸ್ಥೆ ಕಂಡ ಯುಗಪುರುಷ ಸಿದ್ದರಾಮಯ್ಯರೆಂದರೆ ಬಜೆಟ್ (ಮುಂಗಡಪತ್ರ) ಎಂದು ಹೇಳಬಹುದು. ಏಕೆಂದರೆ ಕರ್ನಾಟಕ ರಾಜ್ಯ ಕಂಡ ದಕ್ಷ, ಅನುಭಾವಿ ಮತ್ತು ವಿಶೇಷ ಆರ್ಥಿಕ ತಜ್ಞ ಹಾಗೂ ಸಮರ್ಥ ಹಣಕಾಸು ಮಂತ್ರಿಯೆಂದರೆ ಅದುವೇ ಹೆಮ್ಮಯ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎಂಬುದನ್ನು ಚರ್ಚಿಸಿದೆ.
- ಅಹಿಂದ ಸಮುದಾಯಗಳ ಸಬಲೀಕರಣ ಮತ್ತು ಅಭಿವೃದ್ದಿಯಲ್ಲಿ ಕಾಂಗ್ರೆಸ್ ಸರ್ಕಾರದ ಪಾತ್ರ.ವು ಅಮೋಘವಾದದ್ದು. ಏಕೆಂದರೆ ಸ್ವತಂತ್ರ ಪೂರ್ವ ಮತ್ತು ಸ್ವತಂತ್ರ ನಂತರದ ಕರ್ನಾಟಕ ರಾಜ್ಯದಲ್ಲಿ ಅಷ್ಟೆಯಲ್ಲಾ ಭಾರತದಲ್ಲಿಯೂ ಕಾಂಗ್ರೆಸ್ ಪಕ್ಷವು ಶೋಷಿತರ, ಹಿಂದುಳಿದವರ, ಮಹಿಳೆಯರ, ಅಲ್ಪಸಂಖ್ಯಾತರ ಪರವಾದ ಅಪಾರ ಕಾಳಜಿ, ಅಭಿವೃದ್ಧಿ, ಸಬಲೀಕರಣಪೂರಿತ ಆಡಳಿತಕ್ಕೆ ಹೆಸರುವಾಸಿಯಾಗಿದೆ. ಏಕೆಂದರೆ ಇದಕ್ಕೆ

ಐತಿಹಾಸಿಕವಾದ ಸಾಕಷ್ಟು ಪುರಾವೆಗಳು ನಮಗೆ ಸಿಗುತ್ತದೆ. ಇದರಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಕಾಂಗ್ರೆಸ್ ಸುಮಾರು 135 ವರ್ಷ ಇತಿಹಾಸವಿರುವ ಕಾಂಗ್ರೆಸ್ ಪಕ್ಷವು ಮೊದಲಿನಿಂದಲೂ ಅಹಿಂದ ಸಮುದಾಯದ ಜೊತಗೆ ಹೆಚ್ಚಾಗಿ ಗುರ್ತಿಸಿಕೊಂಡಿರುವುದು ಕಂಡುಬಂದಿದೆ.

- ಸಿದ್ದ್ ಸಮಾಜವಾದದ ಚರ್ಚೆ [ಕರ್ನಾಟಕದಲ್ಲಿ ನವೋತ್ತರ ಸಮಾಜವಾದದ ಉದಯ] ಕರ್ನಾಟಕದ ರಾಜ್ಯದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಚಿಂತಕರುಗಳಾದ ಬುದ್ದಿಜೀವಿಗಳು, ರಾಜಕೀಯ ನಾಯಕರುಗಳು ಹಾಗೂ ಸಾಮಾಜಿಕ ಹೋರಾಟಗಾರರನ್ನೊಳಗೊಂಡ ಬುದ್ದಿಜೀವಿಗಳ ಅಥವಾ ಚಿಂತಕರ ಭಾವಡಿಯು ಸಿದ್ದರಾಮಯ್ಯನವರ ಹಸಿವು ಮುಕ್ತ ರಾಜ್ಯದ ಸಾಕಾರದ ಕಾರ್ಯವೈಖರಿಯನ್ನು ಕಂಡು ಹಾಗೂ ಈ ಸಮಾಜಮುಖಿ ಕ್ರಾಂತಿಕಾರಿ ಉಚಿತ ಭಾಗ್ಯಯೋಜನೆಗಳನ್ನು ಗುರ್ತಿಸಿ ಕರ್ನಾಟಕದಲ್ಲಿ ನವ ಸಮಾಜವಾದೋತ್ತರ ಸಮಾಜವಾದ ಎಂದು ಪರಿಗಣಿಸಿದ್ದಾರೆ.

ಅಧ್ಯಾಯ– 6

ಕರ್ನಾಟಕ ಕಾಂಗ್ರೆಸ್ ಆಡಳಿತದಲ್ಲಿ ಸಾಮಾಜಿಕ ನ್ಯಾಯದ ಅನುಷ್ಠಾನಕ್ಕಾಗಿ ಜಾರಿಗೆ ತಂದ ಜನಪ್ರಿಯ "ಭಾಗ್ಯ ಯೋಜನೆ"ಗಳ ವಿಶ್ಲೇಷಣೆ ಮತ್ತು ಚರ್ಚೆ

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಮುಖ್ಯ ಅಜೆಂಡವಾದ **"ಸಾಮಾಜಿಕ ನ್ಯಾಯ"** ಯಾವ ಪ್ರಮಾಣದಲ್ಲಿ ಜಾರಿಯಾಗಿದೆ? ಮತ್ತು ಸಾಮಾಜಿಕ ನ್ಯಾಯಪರ ಯೋಜನೆಗಳನ್ನು 'ಅಹಿಂದ' ಸಮುದಾಯ ಯಾವ ರೀತಿಯಲ್ಲಿ ಬಳಸಿಕೊಂಡಿದೆ? ಹಾಗೂ ಇದರಿಂದ **ಅಹಿಂದದ ಸ್ಥಿತಿಗತಿ** ಹೇಗಿದೆ? ಎಂಬುದಕ್ಕೆ ಉತ್ತರ ಹಾಗೂ ಪಲಿತಾಂಶ ಕಂಡುಕೊಳ್ಳುವ **ಸದ್ದುದ್ದೇಶವೂ** ಸಹ ಅಡಗಿದೆ. ಕಾರಣ ಏನೆಂದರೆ ಕರ್ನಾಟಕವನ್ನು ಆಳ್ವಿಕೆ ಮಾಡಿದಂತಹ ಕಾಂಗ್ರೆಸ್ ಸರ್ಕಾರದ ಕಾಲಾವಧಿಯ ಆಡಳಿತಕ್ಕೆ ಸಂಬಂಧಿಸಿದಂತೆ ಅದರಲ್ಲೂ ವಿಶೇಷವಾಗಿ **ಡಿ. ದೇವರಾಜ ಅರಸು** ಮತ್ತು **ಸಿದ್ದರಾಮಯ್ಯನವರ ಆಡಳಿತಕ್ಕೆ ಮಾತ್ರ ಸೀಮಿತತೆಯಾಗಿ ಸಂಬಂಧಿಸಿದ್ದರಿಂದ** ಕರ್ನಾಟಕದಾದ್ಯಂತ ಹರಡಿರುವ ಅಹಿಂದ ಸಮುದಾಯವನ್ನು ಕುರಿತು **ಕ್ಷೇತ್ರಕಾರ್ಯಕ್ಕೆ** ಒಳಪಡಿಸಿರುವುದರ ಅನಿವಾರ್ಯತೆ ಈ ಶೋಧನೆಯಲ್ಲಿ ಸಾಗಿಬಂದಿದೆ. ಹಾಗೆಯೇ ಸಂಶೋಧನೆಯ ಅನುಕೂಲಕ್ಕೆಂದು ಕರ್ನಾಟಕ ಸರ್ಕಾರವು ಜನರಿಗೆ ಉತ್ತಮ ಆಡಳಿತ ನೀಡಲು ಸಹಾಯವಾಗಲೆಂದು ಆಡಳಿತಾತ್ಮಕವಾಗಿ ವಿಂಗಡಿಸಲಾದ **ಬೆಂಗಳೂರು ವಿಭಾಗ, ಬೆಳಗಾಂ ವಿಭಾಗ, ಕಲುಬುರ್ಗಿ ವಿಭಾಗ, ಹಾಗೂ ಮೈಸೂರು ವಿಭಾಗ**ಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆದ್ದರಿಂದ ಈ ನಾಲ್ಕು ವಿಭಾಗಗಳಿಂದ ತಲಾ **ನಾಲ್ಕು(4)** ಜಿಲ್ಲೆಗಳನ್ನು ಅಂದರೆ ಒಟ್ಟು **16** ಜಿಲ್ಲೆಗಳನ್ನು ಈ ಕೇಸ್ ಸ್ಟಡೀಗೆ ಅಥವಾ ಕ್ಷೇತ್ರಕಾರ್ಯಕ್ಕೆ ಒಳಪಡಿಸಲಾಗಿದೆ ಅಥವಾ ಸಂಶೋಧನೆಯ ಕ್ಷೇತ್ರಕಾರ್ಯಕ್ಕೆ ಬಳಸಿಕೊಳ್ಳಲಾಗಿದೆ. ಈ ಜಿಲ್ಲೆಗಳೆಂದರೆ **1. ಬೆಂಗಳೂರು ನಗರ 2. ಬೆಂಗಳೂರು ಗ್ರಾಮಾಂತರ 3. ಕೋಲಾರ 4. ಶಿವಮೊಗ್ಗ 5. ದಾರವಾಡ 6. ಬೆಳಗಾಂ 7. ಗದಗ 8. ಬಿಜಾಪುರ 9. ಗುಲಬರ್ಗ 10. ಬಳ್ಳಾರಿ 11. ರಾಯಿಚೂರು 12. ಯಾದಗಿರಿ 13. ಮೈಸೂರು 14. ಚಾಮರಾಜನಗರ 15. ಮಂಡ್ಯ 16. ದಕ್ಷಿಣ ಕನ್ನಡ**. ಈ 16 ಜಿಲ್ಲೆಗಳನ್ನು ಅಭಿವೃದ್ಧಿಹೊಂದಿದ ಮತ್ತು ಅನಭಿವೃದ್ಧಿ ಹೊಂದಿದ ಜಿಲ್ಲೆಗಳನ್ನಾಗಿ ವಿಭಾಗಿಸಿ ಅವುಗಳನ್ನು **ಗ್ರಾಮೀಣ ಪ್ರದೇಶ ಹಾಗೂ ನಗರ ಪ್ರದೇಶಗಳಾಗಿ** ವಿಭಾಗಿಸಿ ಮಾಹಿತಿ ಕಲೆಹಾಕಿ **SPSS ಪ್ಯಾಕೇಜ್‌ನಲ್ಲಿ ಮಾಹಿತಿಯನ್ನು ವಿಶ್ಲೇಷಣೆ ಮಾಡಲಾಗಿದೆ.**

ಅಧ್ಯಾಯ – 7

ಸಾರಾಂಶ, ಸಂಶೋಧನಾ ಪಲಿತಾಂಶಗಳು ಮತ್ತು ಸಲಹೆಗಳು

ಈ ಅಧ್ಯಾಯದಲ್ಲಿ ಬಹುಸಂಖ್ಯಾತ ಬಹುಜನ ಸಮಾಜ(ಸಮುದಾಯ)ವಾದ ಅಹಿಂದವು ಜನಸಂಖ್ಯೆಯಲ್ಲಿ ಶೇ.80%ರಷ್ಟಿದ್ದು ಬಹುತೇಕ ಅಭಿವೃದ್ಧಿ ಮತ್ತು ಸಬಲೀಕರಣದಿಂದ ವಂಚಿತ, ಶೋಷಿತ ಸಮುದಾಯಗಳಾಗಿವೆ! ಭಾರತ ಸೇರಿದಂತೆ ರಾಜ್ಯದ ಯಾವುದೇ ಸರ್ಕಾರವು ಈ ಸಮುದಾಯಗಳನ್ನು ಬಿಟ್ಟು ರಾಜಕಾರಣ ಮಾಡಲು ಸಾಧ್ಯವಿಲ್ಲ!. ಆದರೂ ಸಹ ಸ್ವಾತಂತ್ರ್ಯ ಕಳೆದು 75 ವರ್ಷಗಳು ತುಂಬಿದರೂ ಅಹಿಂದ ಹಲವು ಸಮಸ್ಯೆಗಳಿಂದ ಬಳಲುತ್ತಿವೆ. ಈ ಎಲ್ಲಾ ಅಂಶಗಳಿಗೆ ಉತ್ತರವಾಗಿ ಈ ಶೋಧನೆ ಸಾಗಿದೆ, ಏಕೆಂದರೆ ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ ಸಾಮಾಜಿಕ ನ್ಯಾಯವನ್ನು ಅನುಷ್ಠಾನವನ್ನು ಹೇಗೆ ಮತ್ತು ಎಷ್ಟರಾ ಪ್ರಮಾಣದಲ್ಲಿ ಜಾರಿಗೊಳಿಸಲಾಗಿದೆ? ಅದರ ಮಾನದಂಡಗಳು ಯಾವುವು? ಹಾಗೂ ಸಾಮಾಜಿಕ ನ್ಯಾಯದ ಆಯಾಮಗಳು ಯಾವುವು? ಎಂಬುದನ್ನು ಚರ್ಚಿಸಲಾಗಿದ್ದು. ಒಟ್ಟಾರೆಯಾಗಿ ಕಾಂಗ್ರೆಸ್ ಪಕ್ಷವು ತನ್ನ ಮೂಲ ಸಮುದಾಯಗಳಾದ ಅಹಿಂದಕ್ಕೆ ಭಾಗಶಃ ಯೋಜನೆಗಳನ್ನು ಹಾಗೂ ಪ್ರಗತಿದಾಯಕ, ಪ್ರಗತಿಪರ ಕಾರ್ಯಕ್ರಮಗಳನ್ನು ಕಾನೂನುಗಳನ್ನು ಹಂತಹಂತವಾಗಿ ಕಾರ್ಯತಃ ಜಾರಿಗೊಳಿಸುವ ಪ್ರಯತ್ನವನ್ನಂತೂ ಮಾಡಿದೆ ಎಂಬುದನ್ನು ಈ ಸಂಶೋಧನೆಯ ಮುಖ್ಯ

ಪಲಿತಾಂಶವಾಗಿ ಕಂಡುಬಂದಿರುವುದು ಸಂತಸದಾಯಕ. ಆದರೂ ಸಹ ಇನ್ನಷ್ಟು ಶಾಶ್ವತ ಯೋಜನೆಗಳು ಮತ್ತು ನಿರುದ್ಯೋಗದಂತಹ ಸಮಸ್ಯೆಗಳ ಕಡೆ ಹೆಚ್ಚಿನ ಗಮನಹರಿಸುವ ಅಗತ್ಯವಿದೆ ಇದು ಕಾಂಗ್ರೆಸ್‌ನ ವೈಫಲ್ಯವೂ ಕೂಡ ಆಗಿದೆ. ಅಹಿಂದವನ್ನು ಕೇವಲ ಓಟುಬ್ಯಾಂಕಾಗಿ ಬಳಸಿಕೊಂಡು ಸವರ ಸಹಸ್ತ್ರ ಸಮಸ್ಯೆಗಳಿಗೆ ಎಳ್ಳುನೀರು ಬಿಟ್ಟಿರುವುದು ಕಂಡುಬಂದಿದೆ. ಇದು ಸಹ ಪಲಿತವಾಗಿದೆ. ಆದರೂ ಹಸಿವು ಮಕ್ತ, ಗುಡಿಸಲು ಮಕ್ತ ರಾಜ್ಯದ ಸಾಕಾರದ ಸಂಕಲ್ಪವು ಕಾಂಗ್ರೆಸ್‌ನ್ನು ಒಂದು ಲೆವೆಲ್‌ಗೆ ತನ್ನ ಸ್ಟಾಂಡರ್ಡ್‌ನ್ನು ಹೆಚ್ಚಿಸಿಕೊಂಡಿರುವುದು ಸಹ ಈ ಅಧ್ಯಯನದ ಶೋಧನೆಯಾಗಿದೆ. ಜೊತೆಗೆ ಇನ್ನಾದರೂ ಅಹಿಂದದ ಸಮಸ್ತಾ ಸಮಸ್ಯೆಗಳ ಕಡೆ ಇತರ ರಾಜಕೀಯ ಪಕ್ಷಗಳನ್ನು ಒಳಗೊಂಡಂತೆ ಕಾಂಗ್ರೆಸ್ ಪಕ್ಷ ಅಥವಾ ಸರ್ಕಾರವು ಹೆಚ್ಚಿನ ಆದ್ಯತೆಯ ಗಮನವನ್ನು ನೀಡಬೇಕೆಂಬ ಸಲಹೆಯನ್ನು ಈ ಸಂಶೋಧನೆಯ ಮೂಲಕ ತಿಳಿಸಲು ಬಯಸುತ್ತೇನೆ.

ಸಂಶೋಧನಾ ಫಲಿತಗಳು (Findings)

- ಸ್ವಾತಂತ್ರ್ಯ ನಂತರ ಭಾರತದಾದ್ಯಂತ ಕಾಂಗ್ರೆಸ್ ಪಕ್ಷವು ಅನೇಕ ರಾಜ್ಯಗಳಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿತು. ಇದರಿಂದ ಸಹಜವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಆಡಳಿತಾತ್ಮಕ ಸಮನ್ವಯತೆಯು ಸಾಧ್ಯವಾಯಿತು. ಈ ಹಿನ್ನಲೆಯಲ್ಲಿ **ನೆಹರು, ಇಂದಿರಾ** ಮೊದಲಾದವರ ಆಳ್ವಿಕೆಯಲ್ಲಿ ಅಹಿಂದ ವರ್ಗಗಳ ಸಮಗ್ರ ಕಲ್ಯಾಣಕ್ಕಾಗಿ ಅನೇಕ ಉಪಯುಕ್ತ ಯೋಜನೆಗಳನ್ನು ಜಾರಿಗೊಳಿಸಲಾಯಿತು. **ಉದಾ: ನೆಹರುರವರ** ಕಾಲದಲ್ಲಿ ಅಸ್ಥಿತ್ವಕ್ಕೆ ಬಂದ **ಯೋಜನಾ ಆಯೋಗ** (1950) ಮತ್ತು ಅದರ ಸಹಯೋಗದೊಂದಿಗೆ 1951ರಿಂದ ಜಾರಿಗೆ ಬಂದ **ಪಂಚವಾರ್ಷಿಕ** ಯೋಜನೆಗಳಲ್ಲಿ **ಸಮಾಜ ಕಲ್ಯಾಣ ಆಡಳಿತದ ಮೂಲಕ ಇಲಾಖೆಗೆ** ಹೆಚ್ಚಿನ ಒತ್ತು ನೀಡಲಾಯಿತು. ಇದರಂದ ಅಹಿಂದ ವರ್ಗಗಳ ಸಮಗ್ರ ಅಭಿವೃದ್ಧಿಗೆ ನಾಂದಿಯಾಯಿತು.
- ಶ್ರೀಮತಿ ಇಂದಿರಾಗಾಂಧೀಯವರ ಆಡಳಿತಾವದಿಯಲ್ಲಿ ಜಾರಿಗೆ ಬಂದ 20 ಅಂಶಗಳ ಕಾರ್ಯಕ್ರಮವು ಅಹಿಂದ ವರ್ಗಗಳ ಸರ್ವತೋಮುಖ ಪ್ರಗತಿಗಾಗಿ ಅನೇಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದರಲ್ಲಿ ಕಾಂಗ್ರೆಸ್ ಪಕ್ಷದ ನಿರ್ದಾರವು ಅತ್ಯುತ್ತಮವಾದದ್ದು. ತನ್ಮೂಲಕ ಬಡತನ ರೇಖೆಗಿಂತ ಕಡಿಮೆ ಇರುವ ಅಹಿಂದ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ಮಾನ್ಯತೆ ನೀಡಲಾಯಿತು. **ಉದಾ: ಬ್ಯಾಂಕುಗಳ ರಾಷ್ಟ್ರೀಕರಣ.**
- **ಭೂಮಿಯನ್ನು ಸಮಾನವಾಗಿ ಹಂಚಿಕೊಳ್ಳುವುದೇ** ನಿಜವಾದ ಸಾಮಾಜಿಕ ನ್ಯಾಯ. ಆದರೆ ಭಾರತದಲ್ಲಿ ಸಾಮಾಜಿಕ ನ್ಯಾಯವು **ಪರಿಪೂರ್ಣಗೊಳ್ಳದಿರುವ ಒಂದು ಯೋಜನೆ**ಯಾಗಿಯೇ ಉಳಿದಿದೆ.
- **ಅನ್ನದ ಕ್ರಾಂತಿಯು** ಕರ್ನಾಟಕ ರಾಜ್ಯದಲ್ಲಿ ಸಾಮಾಜಿಕ ನ್ಯಾಯವನ್ನು ಜಾರಿಗೆ ತರುವಲ್ಲಿ ಅತ್ಯಂತ ಯಶಸ್ವಿಯಾದ ಮಾನದಂಡ ಎಂಬುದಾಗಿ ಕಂಡುಬಂದಿದೆ. ಏಕೆಂದರೆ ಬಡತನ, ಹಸಿವನ್ನು ನೀಗಿಸುವುದು ಸಾಮಾಜಿಕ ನ್ಯಾಯದ ತುರ್ತು ಕೆಲಸವಾದ್ದರಿಂದ ಕಾಂಗ್ರೆಸ್ ಈ ಅನ್ನದ ಕ್ರಾಂತಿಗಾಗಿ ಜಾರಿಗೆ ತಂದ "ಅನ್ನಭಾಗ್ಯ" ಯೋಜನೆಯು ವಿಶ್ವಸಂಸ್ಥೆಯ ಯುನೆಸ್ಕೊದಿಂದ ಹಸಿವು ಸೂಚ್ಯಾಂಕವನ್ನು ಮೇಲ್ಪದರಕ್ಕೆ ಕೊಂಡೊಯ್ದಿದ್ದರ ಹೆಗ್ಗಳಿಕೆ ಜಗಮನ್ನಣೆಗಳಿಸಿದೆ
- ಕಾಂಗ್ರೆಸ್ ತನ್ನ ಕಾರ್ಯಕ್ರಮಗಳನ್ನು **"ಎಲ್ಲರಿಗೂ ತಂದಿರುವುದು"** ಎಂದು ಮಂಡಿಸುವಲ್ಲಿ ಸೋತಿದೆ. ಏಕೆಂದರೆ ಜನಸಾಮಾನ್ಯರಿಗೆ ಕಾಂಗ್ರೆಸ್‌ನ ಎಲ್ಲಾ ಕಾರ್ಯಕ್ರಮಗಳು ಅಹಿಂದಕ್ಕೆ ಮಾತ್ರ ಸೀಮಿತವಾಗಿವೆ ಎಂದು ವಿರೋಧ ಪಕ್ಷಗಳು ಅಪಪ್ರಚಾರ ಮಾಡಿದ್ದವು ಇದನ್ನು ಸರಿಯಾದ ಮಾರ್ಗದಲ್ಲಿ ಜನತೆಗೆ ಮನವರಿಕೆ ಮಾಡಿಕೊಡುವಲ್ಲಿ ಸೋತಿದೆ
- ಎಸ್. ಬಂಗಾರಪ್ಪನವರು ಕನ್ನಡ ಮಾಧ್ಯಮಕ್ಕೆ 5% ಮೀಸಲಾತಿ ನೀಡಿ ನಿರುದ್ಯೋಗಿ ಕನ್ನಡಿಗರ ಕಣ್ಮಣಿಯಾಗಿದ್ದಾರೆ. ಇದರಿಂದ ಹಳ್ಳಿಯ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕೃಪಾಂಕ ಕೊಡುವುದರ ಮೂಲಕ ಅವರೊಬ್ಬ ಮಾನವೀಯ ಗುಣವುಳ್ಳ ಸಾಮಾಜಿಕ ಚಿಂತಕರೆಂದು ಕಂಡುಬಂದಿದೆ. ಜೊತೆಗೆ ಅನೇಕ ಭೂರಹಿತರಿಗೆ, ನಿರುದ್ಯೋಗಿಗಳಿಗೆ, ಭೂಮಿ ಕೊಡಿಸುವಲ್ಲಿ ಸಹ ಸಫಲಾಗಿದ್ದಾರೆ. ದೇವರಾಜ ಅರಸರು ಜಾರಿಗೆ ತಂದ ಗಿರಿಜನರ, ದಲಿತರ, ಹಿಂದುಳಿದವರ, ಶೋಷಿತರ ಪರವಾದ ಯೋಜನೆಗಳನ್ನು ಯತ್ತಾವತ್ತಾಗಿ ಮುಂದುವರಿಸಿ, ಸಾಮೂಹಿಕ ವಿವಾಹ ಪದ್ಧತಿಯನ್ನು ಜಾರಿಗೆ ತಂದು ಸಮಸಮಾಜದ ಸಾಕಾರಕ್ಕೆ ಹೆಜ್ಜೆ ಇಟ್ಟಿರುವುದು ಸ್ವಾಗತಾರ್ಹವಾಗಿದೆ.
- ಅಹಿಂದವು ಕೇವಲ ರಾಜಕೀಯ ಸಂಘಟನೆಯಾಗಿರದೆ ಅದೊಂದು ಪ್ರಗತಿಪರ, ಸಾಮಾಜಿಕ ಹಾಗೂ ಪ್ರಬಲ ಸಾಂಸ್ಕೃತಿಕ ಚಳುವಳಿಯಾಗದೆ ಇರುವುದೇ ಅಹಿಂದ ಹಿನ್ನಡೆಗೆ ಕಾರಣವಾಗಿದೆ.

- ಅಹಿಂದ ಎಂದರೆ ಕೇವಲ ರಾಜಕೀಯವಲ್ಲಾ! ಅಹಿಂದದ ರಾಜಕೀಯ ಯಶಸ್ವಿಯಾಗಿದೆ! ಸಿದ್ದರಾಮಯ್ಯನವರು ಅಹಿಂದದಿಂದ ಮುಖ್ಯಮಂತ್ರಿಯಾಗಿದ್ದಾರೆ, ಆದರೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಕಠೋರವಾದ ವಿರೋಧ ಏಕೆ ವ್ಯಕ್ತವಾಯಿತು? ಅದನ್ನು ಎದುರಿಸುವುದಕ್ಕೆ ಏಕೆ ಸಾಧ್ಯವಾಗಲಿಲ್ಲ ಎಂದರೆ, ಅಹಿಂದವನ್ನು ಕೇವಲ ರಾಜಕೀಯವಾಗಿ ನೋಡುವುದಲ್ಲ! ಮಾಧ್ಯಮದಲ್ಲಿ ಅಹಿಂದದವರು ಹೆಚ್ಚಿನ ಸಂಖ್ಯೆಯಲ್ಲಿ ಹೊರಹೊಮ್ಮಬೇಕು!, ಔದ್ಯಮಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಸಾಹಿತ್ಯ–ಕಲೆ ಹೀಗೆ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಬಂದಾಗ ಮಾತ್ರ ಅಹಿಂದವು ಸಂಪೂರ್ಣ ರಾಜಕೀಯವಾಗಿ ಯಶಸ್ವಿಯಾಗುತ್ತದೆ ಎಂಬುದನ್ನು ಸಂಶೋಧನಾ ಫಲಿತಾಂಶವಾಗಿ ಇದನ್ನು ಬಹುಮುಖ್ಯವಾಗಿ ಕಂಡುಕೊಳ್ಳಲಾಗಿದೆ.
- **ಹಸಿವು ಮುಕ್ತ ಕರ್ನಾಟಕದ ಸಾಕಾರಕ್ಕಾಗಿ** ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮಹತ್ವಕಾಂಕ್ಷೆ **'ಅನ್ನಭಾಗ್ಯ'** ಯೋಜನೆಯು ಕರ್ನಾಟಕ ರಾಜ್ಯವನ್ನು ಬಡತನ, ಅಪೌಷ್ಟಿಕತೆ ಹಸಿವುಮುಕ್ತ, ರಾಜ್ಯವನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿದೆ ಎಂದು ಶೇ.73.1ರಷ್ಟು ಸಂವಾದಿಗಳು ಒಲವನ್ನು ವ್ಯಕ್ತಪಡಿದ್ದಾರೆ. ಹಾಗೂ ಸಂವಿಧಾನಬದ್ಧವಾಗಿ ಸಾಮಾಜಿಕ ನ್ಯಾಯದ ಅಸ್ತ್ರವಾಗಿರುವುದರ ಜೊತೆಗೆ ಬಡವರ ಹಸಿದ ಹೊಟ್ಟೆಯನ್ನು ನೀಗಿಸಿದೆ ಎಂಬುದಾಗಿ ಸಹ ತಿಳಿದುಬಂದಿದೆ.
- ಕರ್ನಾಟಕವು ಹಸಿವು ಮುಕ್ತ ರಾಜ್ಯವಾಗಲು **ಅನ್ನಭಾಗ್ಯ ಯೋಜನೆ, ಇಂದಿರಾ ಕ್ಯಾಂಟೀನ್, ಮಾತೃಪೂರ್ಣ ಯೋಜನೆ ಹಾಗೂ ಕ್ಷೀರಭಾಗ್ಯ, ಕ್ಷೀರಧಾರೆ ಯೋಜನೆಗಳು** ಅತ್ಯಂತ ಪೂರಕವಾಗಿ ನೆರವಾಗಿದೆ ಎಂಬುದಾಗಿ ಕಂಡುಬಂದಿದೆ! ಆದರೆ ಹಸಿವು ಮುಕ್ತ ರಾಜ್ಯದ ಸಾಕಾರದಲ್ಲಿ ಭಾರತದ ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕವು ಸಂಪೂರ್ಣ ಹಸಿವುಮುಕ್ತ ರಾಜ್ಯ ಆಗದಿದ್ದರೂ ಸಹ (ಉತ್ತಮ ಸ್ಥಿತಿಯಲ್ಲಿದೆ) ಸೇಫ್‌ಜೋನ್‌ಲಿದೆ. ಕೊರೊನ ಮಹಾಮಾರಿ ಆಕ್ರಮಣದ ಸಂದರ್ಭದಲ್ಲಿ ಅನ್ನಭಾಗ್ಯವೇ ನಿರ್ಗತಿಕರನ್ನು, ಕಡುಬಡವರನ್ನು ಕಾಪಾಡಿರುವುದು ಬೆಳಕಿಗೆ ಬಂದಿದೆ.
- ಕರ್ನಾಟಕದಲ್ಲಿ ಶೇ.72.3ರಷ್ಟು ಸಂವಾದಿ ಕುಟುಂಬಗಳು **ವಸತಿಭಾಗ್ಯ ಯೋಜನೆ, ಮನೆಗೊಂದು ಸೂರು ಯೋಜನೆ, ರಾಜೀವ್ ಗಾಂಧಿ ವಸತಿ ಯೋಜನೆ, ನಿರ್ಮಲ್ ಭಾಗ್ಯ** ಯೋಜನೆಗಳ ಮೂಲಕ **ಗುಡಿಸಲು ಮುಕ್ತ ಕರ್ನಾಟಕ**ದ ಸಾಕಾರದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಭೂರಹಿತ ಮತ್ತು ವಸತಿ ಹೀನರಾದ ಅಹಿಂದದವರನ್ನು ಒಳಗೊಂಡಂತೆ ಎಲ್ಲಾ ಜಾತಿ, ಧರ್ಮದ ಬಡವರಿಗೆ ನಿವೇಶನಗಳು ಮತ್ತು ಮನೆಗಳನ್ನು ಆದ್ಯತೆ ಮೇರೆಗೆ ಜಾರಿಗೆ ತಂದಿದ್ದಾರೆಯಷ್ಟೇ. ಆದರೆ ಅಧಿಕಾರಿಶಾಹಿಯ ಅಸಡ್ಡತನ, ಲಂಚಗುಳಿತನ ಹಾಗೂ ಪಂಚಾಯತ್ ರಾಜ್ ಸಂಸ್ಥೆಯ ಬ್ರಹ್ಮಾಂಡ ಭ್ರಷ್ಟಚಾರದಿಂದ ಕಾಂಗ್ರೆಸ್ ಸರ್ಕಾರದ ಮಹತ್ವಕಾಂಕ್ಷೆಯಾದ ಗುಡಿಸಲು ಮುಕ್ತ ರಾಜ್ಯದ ಕನಸು ನನಸಾಗದೇ ಉಳಿದುಕೊಂಡಿದೆ ಎಂಬುದಾಗಿ ಕಂಡುಬಂದಿದೆ. ಅಂದರೆ ರಾಜ್ಯವು ಗುಡಿಸಲು ಮುಕ್ತ ರಾಜ್ಯವಾಗಿಲ್ಲ ಆದರೆ ಆ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿತ್ತು ಎಂದು ಕಂಡುಬಂದಿದೆ.
- ಶೇ.57.3ರಷ್ಟು ಸಂವಾದಿಗಳು **'ಧರ್ಮ'** ಮತ್ತು **'ಜಾತಿ'**ಯ ಕಾರಣಕ್ಕಾಗಿಯೇ ಅಹಿಂದ ವರ್ಗದವರು ಸಾವಿರಾರು ವರ್ಷಗಳಿಂದಲೂ ಸಮಾಜದಲ್ಲಿ ಜೀವನದ ಎಲ್ಲಾ ರಂಗಗಳಲ್ಲೂ ಹಿಂದುಳಿದಿದ್ದಾರೆ!. ಎಂಬುದಾಗಿ ತಿಳಿಸಿದ್ದಾರೆ.
- ಶೇ.64.4ರಷ್ಟು ಸಂವಾದಿ ಪೋಷಕರ ಮಕ್ಕಳು **ಕ್ಷೀರಭಾಗ್ಯ** ಮತ್ತು **ಕ್ಷೀರಧಾರೆ ಯೋಜನೆಯ** ಫಲವನ್ನು ಪಡೆದುಕೊಂಡಿದ್ದಾರೆ. ಈ ಮೂಲಕ ತಿಳಿಯುವುದೇನೆಂದರೆ. ಅಪೌಷ್ಟಿಕತೆಯಿಂದ ಬಳಲುತ್ತಿರುವ ಗ್ರಾಮೀಣ ಭಾಗದ ಬಡ ರೈತರ ಕುಟುಂಬಗಳು ಮತ್ತು ಮಕ್ಕಳಿಗೆ ಕ್ಷೀರ ಭಾಗ್ಯದಿಂದ ಉಚಿತವಾದ **ಹಾಲು, ಮೊಟ್ಟೆ, ಕಬ್ಬಿಣದ ಅಂಶವಿರುವ ಮಾತ್ರೆ, ಬಿಸಿಯೂಟದ ವ್ಯವಸ್ಥೆಯಿಂದ ಮಕ್ಕಳ ದಹಿಕ ಮತ್ತು ಮಾನಸಿಕ ಬೆಳವಣಿಗೆ**ಯ ಮೇಲೆ ಇದು ತುಂಬ ಪ್ರಭಾವ ಬೀರಿ ಮತ್ತು ಮಕ್ಕಳ ಬೆಳವಣಿಗೆಗೆ ಪುಷ್ಠಿ ನೀಡುತ್ತಿರುವುದು ಗಮನಿಸಬಹುದಾದ ವಿಷಯವಾಗಿದೆ. ಜೊತೆಗೆ **ಬೆಳಗಾವಿ ವಿಭಾಗದ ಸಂವಾದಿಗಳು ಹೆಚ್ಚಿನ ಸಂಖ್ಯೆಯ ಫಲಾನುಭವಿಗಳಾಗಿದ್ದು ರೈತರ ಮತ್ತು ಮಹಿಳೆಯರ ಸ್ವಾವಲಂಬಿ ಜೀವನಕ್ಕೆ ಪುಷ್ಟೀ ನೀಡಿದೆ ಎಂಬುದಾಗಿ ಕಂಡುಬಂದಿದೆ.**
- ಕಾಂಗ್ರೆಸ್ ಸರ್ಕಾರವು ಜಾರಿಗೆ ತಂದ **ಇಂದಿರಾ ಕ್ಯಾಂಟೀನ್** ಯೋಜನೆಯು ಹಸಿದ ಶ್ರಮಜೀವಿಗಳ ಭವಣೆಯನ್ನು ನೀಗಿಸಿದೆ ಎಂದು ಶೇ.72.5ರಷ್ಟು ಸಂವಾದಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.
- ಶೇ.40.2ರಷ್ಟು ಸಂವಾದಿ ಕುಟುಂಬಗಳು **ಮಾತೃ ಪೂರ್ಣ ಯೋಜನೆ**, ಫಲಾನುಭವ ಪಡೆದಿವೆ. ಈ ಯೋಜನೆಯ ಬಗ್ಗೆ ತೀರ ತಾತ್ಸಾರ ಭಾವನೆಯನ್ನು ಹೊಂದಿದ್ದಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಮುಂದಿನ ಸಂಶೋಧನಾ ಕಾರ್ಯಗಳ ವಿಸ್ತರಣೆಗೆ ಸಲಹೆ ಮತ್ತು ಶಿಫಾರಸ್ಸುಗಳು:

- ಅಹಿಂದ ಎನ್ನುವುದು ಒಂದು ಜಾತಿಯಲ್ಲ **ಇದೊಂದು ವರ್ಗ,** ಶೂದ್ರ ಜಾತಿಗಳು ಮತ್ತು ಅಲ್ಪಸಂಖ್ಯಾತರೆಲ್ಲರೂ ಸೇರಿ ಹೆಣೆದ ಒಂದು ವರ್ಗ, ಹೀಗೆ ಸಮಾನ ಮನಸ್ಥಿತಿಯ ಜಾತಿಗಳೆಲ್ಲವೂ ಒಟ್ಟುಗೂಡಿ ಅಹಿಂದವನ್ನು ಮುಂದುವರೆಸಬೇಕು ಇಲ್ಲದಿದ್ದರೆ ಭವಿಷ್ಯ ಅಹಿಂದಕ್ಕೆ ಕಷ್ಟಕರವಾಗಲಿದೆ. ಆದ್ದರಿಂದ **ಸೈದ್ಧಾಂತಿಕ ಜಾಗೃತ ವರ್ಗ**ವನ್ನು ಬೆಳೆಸಬೇಕು.
- ಬಡವರ, ನಿರ್ಗತಿಕರ, ಅಲ್ಪಸಂಖ್ಯಾತರ, ಹಿಂದುಳಿದವರ, ದಲಿತರ, ಮಹಿಳಾ–ಮಕ್ಕಳ, ರೈತಪರ ಕಾಳಜಿಯಿಂದ ತುಂಬಾ ಮಹತ್ವಕಾಂಕ್ಷೆಯನ್ನಿಟ್ಟು ಜಾರಿಗೆ ತಂದ **"ಭಾಗ್ಯಯೋಜನೆ"**ಗಳನ್ನು ವ್ಯವಸ್ಥಿತವಾಗಿ ತಲುಪಿಸುವಲ್ಲಿ ಮತ್ತು ಜನರಿಗೆ ಜಾಗೃತಿ ಮೂಡಿಸುವಲ್ಲಿ ಸೋತಿದೆ. ಈ "ಭಾಗ್ಯಯೋಜನೆ"ಗಳನ್ನು ನೀಡಿಯು ಕಾಂಗ್ರೆಸ್‌ನ ಹಿನ್ನಡೆಗೆ ಕಾರಣವಾಗಿರುವ ಮತ್ತು ಸದ್ಬಳಕೆಯಾಗದೆ ಉಳಿದಿರುವ ಯೋಜನೆಗಳ ಬಗ್ಗೆ ಹಳ್ಳಿ–ಪಟ್ಟಣದ ಜನರಿಗೆ ಅರಿವು ಮೂಡಿಸುವ ಹಾಗೂ ಯೋಜನೆಗಳು ಜನತೆಗೆ ತಲುಪುವಂತೆ ಅಧಿಕಾರಿ ವರ್ಗವನ್ನು ಎಚ್ಚರಿಸುವ ಕಾರ್ಯವನ್ನು ಅತ್ಯಂತ ಜಾಗರೂಕತೆಯಿಂದ ಮಾಡಬೇಕಾಗಿತ್ತು. ಜೊತೆಗೆ ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ತಮ್ಮ ಕಾರ್ಯ ಸಾಧನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ಮುಂದೆಯಾದರೂ ನಿರ್ವಹಿಸಬೇಕೆಂಬುದು ಈ ಶೋಧನೆಯ ಸಲಹೆಯಾಗಿದೆ.

ಸಂಶೋಧನಾ ಅಕಾಡೆಮಿಕ್ ಕಾರ್ಯಕ್ರಮಗಳು ಮತ್ತು ವಿಚಾರ ಸಂಕೀರ್ಣಗಳು ಹಾಗೂ ಸಮ್ಮೇಳನ, ಕಾರ್ಯಗಾರಗಳಲ್ಲಿ ಭಾಗವಹಿಸಿದ್ದರ ವಿವರ

A. ಪ್ರಬಂಧ ಮಂಡನೆ (Paper Presentation) ಮತ್ತು Publications ಮಾಡಿದ ವಿವರ:

1. ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ, ಅಂಬೇಡ್ಕರ್ ಅಧ್ಯಯನ ವಿಭಾಗ ಇವರು ದಿನಾಂಕ 4–10–2016 ರಿಂದ 6–10–2016 ಮೂರು ದಿನಗಳ ಕಾಲ ನಡೆಸಿದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ "Dalit Empowerment in India: Issues and Concerns" ಎಂಬ ವಿಷಯದ ಮೇಲೆ ಪತ್ರಿಕೆ ಮಂಡನೆ ಮಾಡಿದ್ದೇನೆ.

2. 40ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಮೈಸೂರು, ಮೈಸೂರು ವಿಶ್ವವಿದ್ಯಾನಿಲಯ ಇಲ್ಲಿ ದಿನಾಂಕ 19–12–2016 ರಿಂದ 23–12–2016 ರವರೆಗೆ ಐದು ದಿನಗಳ ಕಾಲ ನಡೆದ ಸಮ್ಮೇಳನದಲ್ಲಿ ಭಾಗವಹಿಸಿ "Social Welfare Administration and Social Justice : Issues and Challenges" ಎಂಬ ವಿಷಯದ ಮೇಲೆ ಪತ್ರಿಕೆ ಮಂಡನೆ ಮಾಡಿದ್ದೇನೆ.
3. ದಿ. 28/29 ಆಗಸ್ಟ್ 2017 ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯ ಯೋಜನಾ ಆಯೋಗ ಆಯೋಜಿಸಿದ್ದ ಎರಡು ದಿನಗಳ 5ನೇ ಅಂತರರಾಷ್ಟ್ರೀಯ ಸಮಾವೇಶದಲ್ಲಿ "Challenges and Opportunities for Sustainble Rural Development" ಎಂಬ ವಿಷಯದಲ್ಲಿ ಪ್ರಬಂಧ ಮಂಡನೆ ಮಾಡಿದ್ದೇನೆ.
4. ದಿ. 2-11-2017 ರಂದು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ **"ಕರ್ನಾಟಕದಲ್ಲಿ ಅಭಿವೃದ್ಧಿ ಆಡಳಿತ: ಒಂದು ವಿಶ್ಲೇಷಣೆ"** ಎಂಬ ವಿಷಯದ ಬಗ್ಗೆ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದೇನೆ.
5. ದಿ. 17/18, ನವೆಂಬರ್ 2017 ರಂದು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ ಎರಡು ದಿನದ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ **"ಕರ್ನಾಟಕದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಮತ್ತು ಸಮಾಜೋ–ಆರ್ಥಿಕ ಹಾಗೂ ರಾಜಕೀಯ ನ್ಯಾಯ: ವಿಶೇಷವಾಗಿ ಕರ್ನಾಟಕದ ಕಾಂಗ್ರೆಸ್ ಆಡಳಿತಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣೆ"** ಎಂಬ ವಿಷಯದಲ್ಲಿ ಪ್ರಬಂಧ ಮಂಡನೆ ಮಾಡಿದ್ದೇನೆ.
6. ದಿ. 27 ಜನವರಿ 2018 ರಂದು ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯ ಯೋಜನಾ ಆಯೋಗ ಆಯೋಜಿಸಿದ್ದ 6ನೇ ಅಂತರ್ ರಾಷ್ಟ್ರೀಯ ಅಂತರ್ ಶಿಸ್ತೀಯ ಸಮಾವೇಶದಲ್ಲಿ "Social Welfare and Justice in India: Issues and Challenges" ಎಂಬ ವಿಷಯದಲ್ಲಿ ಪ್ರಬಂಧ ಮಂಡನೆ ಮಾಡಿದ್ದೇನೆ.

7. ದಿ. 9,10 ಫೆಬ್ರವರಿ 2018 ರಂದು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ ಎರಡು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ "ಕರ್ನಾಟಕದಲ್ಲಿ ಅಹಿಂದ ಚಳುವಳಿ ಮತ್ತು ನಾಯಕತ್ವ" ಎಂಬ ವಿಷಯದಲ್ಲಿ ಪ್ರಬಂಧ ಮಂಡನೆ ಮಾಡಿದ್ದೇನೆ
8. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ ಬಳ್ಳಾರಿ, ಇಲ್ಲಿ ದಿನಾಂಕ 10–3–2017 ರಿಂದ 11–3–2017 ರವರೆಗೆ ಎರಡು ದಿನಗಳ ಕಾಲ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿ "ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ ಸಾಮಾಜಿಕ ನ್ಯಾಯ: ವಿಶೇಷವಾಗಿ 'ಅಹಿಂದ' ವರ್ಗಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ" ವಿಷಯದ ಮೇಲೆ ಪತ್ರಿಕೆ ಮಂಡನೆ ಮಾಡಿದ್ದೇನೆ.
9. ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ದಿನಾಂಕ 6–4–2017 ರಿಂದ 7–4–2017 ರವರೆಗೆ ಎರಡು ದಿನಗಳ ಕಾಲ ನಡೆದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ "Social Justice and Ahind: an Analytical Astudy of kanarnata Congress Administration" ವಿಷಯದ ಮೇಲೆ ಪತ್ರಿಕೆ ಮಂಡನೆ ಮಾಡಿದ್ದೇನೆ
10. ದಿನಾಂಕ: 04-11-2015 ಮತ್ತು ದಿನಾಂಕ: 05-11-2015 ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ನಡೆದ UGC Sponsored two day state level seminar on "Scio-politicized Economic Conesus of local Bodies in Karnataka" (as part of University Centenary Celebration) Collaboration with Mysore Zilla Panchyat. ನಲ್ಲಿ ಭಾಗವಹಿಸಿ "ಸ್ಥಳೀಯ ಸರ್ಕಾರಗಳ ಆಡಳಿತದಲ್ಲಿ ಆರ್ಥಿಕ, ರಾಜಕೀಯ, ಸಾಮಾಜಿಕ ನ್ಯಾಯ" ಎಂಬ ವಿಷಯದ ಮೇಲೆ ಲೇಖನ ಮಂಡಿಸಿದ್ದೇನೆ.
11. ದಿನಾಂಕ: 26-02-2016 ರಿಂದ 27-02-2016 ರವರೆಗೆ De Poul collage, Mysore and Association of International Resections of Indian origin (AIRIO-Karnataka chapter)Two day National Conference on Transition Towards sustainable development ವಿಷಯಕ್ಕೆ ಸಂಬಂಧಿಸಿದಂತೆ "The Role of good Governence in sustainable Development" An overview ವಿಷಯದ ಮೇಲೆ ಸಂಶೋದನಾ ಲೇಖನವನ್ನು ಮಂಡಿಸಿರುತ್ತೇನೆ.
12. ದಿನಾಂಕ 25 ಮತ್ತು 26 ಜೂನ್–2016 ರಂದು ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ Advance in collaborative Research for Economics, management, Humanities, Social Sciences and Computer Technology. ಈ ವಿಷಯದ ಕುರಿತಾದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ Research and Analysis of Comparative palitices in Political Science. ವಸ್ತು ವಿಷಯದ ಕುರಿತು paper presentation ಮಾಡಿದ್ದೇನೆ.
13. ದಿ.8/9 ಮಾರ್ಚ್2018ರಂದು ಮೈ.ವಿವಿ. ಸಾರ್ವಜನಿಕ ಆಡಳಿತ ಮತ್ತು ಐಸಿಎಸ್ಎಸ್ಆರ್ ಪ್ರಾಯೋಜಿತ 2 ದಿನಗಳ ರಾಷ್ಟ್ರೀಯ ವಿಚಾರ ಸಂಕೀರ್ಣದಲ್ಲಿ "ಕರ್ನಾಟಕದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಕಾಂಗ್ರೆಸ್ ಸರ್ಕಾರದ ಉತ್ತಮ ಆಡಳಿತ: ವಿಶೇಷವಾಗಿ 2015ರ ಗ್ರಾಮ ಸ್ವರಾಜ್ ಹಾಗೂ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣೆ. ವಸ್ತು ವಿಷಯದ ಕುರಿತು paper presentation ಮಾಡಿದ್ದೇನೆ.
14. ದಿ.22/23 ನವೆಂಬರ್ 2016ರಂದು ಬೆಂಗಳೂರು. ವಿವಿ ಮತ್ತು ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತೀರ್ಣ ಕೇಂದ್ರ ಆಯೋಜಿಸಿದ್ದ 2 ದಿನಗಳ ರಾಷ್ಟ್ರೀಯ ಕಾರ್ಯಗಾರದಲ್ಲಿ "ನೂತನ ಸಹಸ್ರಮಾನದಲ್ಲಿ ದಲಿತ ಆರ್ಥಿಕ ಸಬಲೀಕರಣ" ವಸ್ತು ವಿಷಯದ ಕುರಿತು paper presentation ಮಾಡಿದ್ದೇನೆ.
15. ದಿ.4 ನವೆಂಬರ್ 2016ರಂದು ರಾಣಿಚನ್ನಮ್ಮ ವಿವಿ. ಆಯೋಜಿಸಿದ್ದ ಒಂದು ದಿನದ ರಾಷ್ಟ್ರೀಯ ಸಮ್ಮೇಳನದಲ್ಲಿ "Globalization, Liberalization and Privatization Era; dr. B. R. Ambedkar's thoughts on Reservation for Dalits in Private Sector". ವಸ್ತು ವಿಷಯದ ಕುರಿತು paper presentation ಮಾಡಿದ್ದೇನೆ.

16. ದಿ.15.07.2017ರಂದು Mangalore University Political Science Teachers Association and University College Mangalore ಆಯೋಜಿಸಿದ್ದ ಕಾರ್ಯಗಾರದಲ್ಲಿ "Good Governace and e-Governance: a study of Karnataka ವಸ್ತು ವಿಷಯದ ಕುರಿತು paper presentation ಮಾಡಿದ್ದೇನೆ.
17. ದಿ. 27 28. ಫೆಬ್ರವರಿ 2018 ರಂದು ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯ ಯೋಜನಾ ಆಯೋಗ ಆಯೋಜಿಸಿದ್ದ ಅಂತರ್ ರಾಷ್ಟ್ರೀಯ ಅಂತರ್ ಶಿಸ್ತೀಯ ಸಮಾವೇಶದಲ್ಲಿ
Community Empowerment in Changing World: Issues and Challenges ಸಮ್ಮೇಳನದಲ್ಲಿ "Health status of Women in Slums: a Study" ವಿಷಯದ ಮೇಲೆ ಲೇಖನ ಮಂಡಿಸಿದ್ದೇನೆ.
18. ದಿ. 22/23 ಜೂನ್ 2018 ರಂದು ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯ ಯೋಜನಾ ಆಯೋಗ ಆಯೋಜಿಸಿದ್ದ 7ನೇ ಅಂತರ್ ರಾಷ್ಟ್ರೀಯ ಅಂತರ್ ಶಿಸ್ತೀಯ ಸಮಾವೇಶದಲ್ಲಿ "Social Change and Political Empoerment in Karnataka: a Special Reference to the Dalits" ಎಂಬ ವಿಷಯದಲ್ಲಿ ಪ್ರಬಂಧ ಮಂಡನೆ ಮಾಡಿದ್ದೇನೆ.
19. ದಿ.10 ಮೇ. 2016 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜ್– ಸ್ನಾತಕೋತ್ತರ ಕೇಂದ್ರ ಕೇಂದ್ರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಚಾಮರಾಜನಗರ ಇವರು ಆಯೋಜಿಸಿದ್ದ ರಾಜ್ಯ ಮಟ್ಟದ ವಿಚಾರ ಸಂಕೀರ್ಣದಲ್ಲಿ "ಡಾ. ಬಿ.ಆರ್.ಅಂಬೇಡ್ಕರ್‌ರವರ ಪರಿಕಲ್ಪನೆಯಲ್ಲಿ ಸಾಮಾಜಿಕ ನ್ಯಾಯ: ವಿಶೇಷವಾಗಿ 'ಅಹಿಂದ' ವರ್ಗಗಳಿಗೆ ಸಂಬಂಧಿಸಿದಂತೆ ಒಂದು ವಿಶ್ಲೇಷಣೆ. ವಿಷಯದ ಮೇಲೆ ಲೇಖನ ಮಂಡಿಸಿದ್ದೇನೆ.
20. ದಿ.14/15 ಮಾರ್ಚ್ 2018 ಮೈ.ವಿವಿ ಮತ್ತು CSSEIP ಆಯೋಜಿಸಿದ್ದ 2 ದಿನದ ರಾಷ್ಟ್ರೀಯ ವಿಚಾರ ಸಂಕೀರ್ಣ ಸಂಕೀರ್ಣದಲ್ಲಿ "ಕರ್ನಾಟಕದಲ್ಲಿ ಆಹಾರ ಭದ್ರತೆಗಾಗಿ ಕಾಂಗ್ರೆಸ್ ಸರ್ಕಾರದ ಕೊಡುಗೆ: ವಿಶೇಷವಾಗಿ 'ಅನ್ನಭಾಗ್ಯ ಯೋಜನೆ' ಒಂದು ವಿಶ್ಲೇಷಣೆ. ಎಂಬ ವಿಷಯದ ಮೇಲೆ ಲೇಖನ ಮಂಡಿಸಿದ್ದೇನೆ.
21. ದಿ.9 ಮಾರ್ಚ್ 2018ರಂದು ರಾಷ್ಟ್ರೀಯ ಮಾನವ ಹಕ್ಕು ಆಯೋಗ ಮತ್ತು ಮೈವಿವಿ ಆಯೋಜಿಸಿದ್ದ ಒಂದು ದಿನದ ರಾಷ್ಟ್ರೀಯ ಸಮ್ಮೇಳನವಾದ 'Poverty, Social Justice and Humn Rights' ದಲ್ಲಿ "Social Justice in Karnataka Congress Administration: with Special Reference to the 'Ahind' Classes on Analytical Study" ಎಂಬ ವಿಷಯದ ಮೇಲೆ ಲೇಖನ ಮಂಡಿಸಿದ್ದೇನೆ.
22. ದಿ.18/19 ಆಗಸ್ಟ್ 2017ರಂದು ಸರ್ಕಾರಿ ಮಹಿಳಾ ಪ್ರಥಮ ಕಾಲೇಜು ಹುಣಸೂರು ಮತ್ತು ಗಾಂಧಿ ಅಧ್ಯಯನ ಕೇಂದ್ರ ಮೈ.ವಿವಿ ಆಯೋಜಿಸಿದ್ದ 2 ದಿನಗಳ ರಾಷ್ಟ್ರ ಮಟ್ಟದ ವಿಚಾರ ಸಂಕೀರ್ಣದಲ್ಲಿ "ಗಾಂಧೀಜಿ ಪರಿಕಲ್ಪನೆಯಲ್ಲಿ ಸಾಮಾಜಿಕ ನ್ಯಾಯ: ವಿಶೇಷವಾಗಿ ಕರ್ನಾಟಕದ ಕಾಂಗ್ರೆಸ್ ಆಡಳಿತದಲ್ಲಿ ಒಂದು ವಿಶ್ಲೇಷಣೆ." ಎಂಬ ವಿಷಯದ ಮೇಲೆ ಲೇಖನ ಮಂಡಿಸಿದ್ದೇನೆ.
23. ದಿ.13/14/15.ಡಿಸೆಂಬರ್ 2019ರಂದು ತುಮಕೂರು ವಿವಿ ಮತ್ತು ರಾಷ್ಟ್ರೀಯ ಸಮಾಜ ವಿಜ್ಞಾನ ಪರಿಷತ್ ಆಯೋಜಿಸಿದ್ದ ನಾಲ್ಕನೇ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ "ನವ ರಾಜಕೀಯ ದ್ರುವೀಕರಣಕ್ಕೆ ಸಾಕ್ಷಿಯಾದ 'ಅಹಿಂದ ಚಳುವಳಿ': ವಿಶೇಷವಾಗಿ ಕರ್ನಾಟದ ಅಹಿಂದ ರಾಜಕಾರಣಕ್ಕೆ ಸಂಬಂಧಿಸಿದಂತೆ ಒಂದು ಅವಲೋಕನ" ಎಂಬ ವಿಷಯದ ಮೇಲೆ ಲೇಖನ ಮಂಡಿಸಿದ್ದೇನೆ.
24. ದಿ06/07 ಡಿಸೆಂಬರ್ 2019 ಮೈಸೂರು.ವಿವಿ ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ ಆಯೋಜಿಸಿದ್ದ dr. B.R. Ambedkar The Voice of liberation. 2 ದಿನಗಳ ರಾಷ್ಟ್ರೀಯ ವಿಚಾರ ಸಂಕೀರ್ಣದಲ್ಲಿ "ಕರ್ನಾಟಕದಲ್ಲಿ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಸಮಾಜವಾದದ ಬೆಳವಣಿಗೆ ಮತ್ತು ಅಭಿವೃದ್ಧಿ: ವಿಶೇಷವಾಗಿ ಸಮಾಜವಾದಿ ರಾಜಕಾರಣಿ ಸಿದ್ಧರಾಮಯ್ಯನವರ ಆಡಳಿತಕ್ಕೆ ಸಂಬಂಧಿಸಿದಂತೆ ಒಂದು ಅವಲೋಕನ" ಎಂಬ ವಿಷಯದ ಮೇಲೆ ಲೇಖನ ಮಂಡಿಸಿದ್ದೇನೆ.
25. ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಬನ್ನೂರು ಮತ್ತು ಪತ್ರಗಾರ ಇಲಾಖೆ ಮೈಸೂರು ಸಹಯೋಗದಲ್ಲಿ ಆಯೋಜಿಸಿರುವ ರಾಷ್ಟ್ರ ಮಟ್ಟದ ಮೈಸೂರು ಸಂಸ್ಥಾನದಲ್ಲಿ ಸಮಾಜಮುಖಿ ಆಡಳಿತ ವಿಚಾರ ಸಂಕೀರ್ಣದಲ್ಲಿ "ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಸಾಮಾಜಿಕ ನ್ಯಾಯದ ಅನುಷ್ಠಾನ: ವಿಶೇಷವಾಗಿ ಸಮಸಮಾಜ ಕಟ್ಟಿದ ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತಕ್ಕೆ ಸಂಬಂಧಿಸಿದಂತೆ ಒಂದು ವಿಶ್ಲೇಷಣೆ" ಎಂಬ ವಿಷಯದ ಮೇಲೆ ಲೇಖನ ಮಂಡಿಸಿದ್ದೇನೆ.

26. ದಿ 27 ಮಾರ್ಚ2019ರಂದು ದಾವಣಗೆರೆ ವಿವಿ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕೀರ್ಣದಲ್ಲಿ "ಸಮಕಾಲಿನ ಭಾರತದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ: ವಿಶೇಷವಾಗಿ ದಲಿತರು, ಮಹಿಳೆ-ಮಕ್ಕಳು ಹಾಗೂ ಅಲ್ಪಸಂಖ್ಯಾತರ ಮೇಲಿನ ದಾಳಿಗೆ ಸಂಬಂಧಿಸಿದಂತೆ ಒಂದು ಅಧ್ಯಯನ" ಎಂಬ ವಿಷಯದ ಮೇಲೆ ಲೇಖನ ಮಂಡಿಸಿದ್ದೇನೆ.
27. ದಿ.25 ಮಾರ್ಚ್2019 ಕುವೆಂಪು ವಿಶ್ವವಿದ್ಯಾನಿಲಯ, ಸಹ್ಯಾದ್ರಿ ಕಾಲೇಜ್ ಶಿವಮೊಗ್ಗ. ಆಯೋಜಿಸಿದ್ದ ನಮ್ಮ ಸಂವಿಧಾನ ನಮ್ಮ ಹೆಮ್ಮೆ ವಿಚಾರ ಸಂಕೀರ್ಣದಲ್ಲಿ "ಭಾರತ ಸಂವಿಧಾನ ಮತ್ತು ಅಹಿಂದ ವರ್ಗಗಳು: ವಿಶೇಷವಾಗಿ ಸಂವಿಧಾನಾತ್ಮಕ ರಕ್ಷಣೆ ಹಾಗೂ ಹಕ್ಕುಗಳ ಕುರಿತು ಒಂದು ಅಧ್ಯಯನ" ಎಂಬ ವಿಷಯದ ಮೇಲೆ ಲೇಖನ ಮಂಡಿಸಿದ್ದೇನೆ.

B. ವಿಚಾರ ಸಂಕೀರ್ಣ ಮತ್ತು ಕಾರ್ಯಗಾರಗಳಲ್ಲಿ ಭಾಗವಹಿಸಿದ್ದರ ವಿವರ:

1. ದಿ.21-23 ಜುಲೈ 2017ರಂದು ಬೆಂಗಳೂರಿನಲ್ಲಿ ನಡೆದ ಡಾ. ಬಿ.ಆರ್. ಅಂಬೇಡ್ಕರ್ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿದ್ದೇನೆ.
2. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮೈಸೂರು ಇವರ ವತಿಯಿಂದ ದಿನಾಂಕ 10-8-2016 ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ 125ನೇ ಜನ್ಮ ದಿನಾಚರಣೆ ಅಂಗವಾಗಿ "ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ ಸಿದ್ಧಾಂತ" ಕುರಿತು ಹಮ್ಮಿಕೊಳ್ಳಲಾದ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದೇನೆ.
3. ಮಂಗಳೂರು ವಿಶ್ವವಿದ್ಯಾನಿಲಯ, ನೆಹರು ಚಿಂತನ ಕೇಂದ್ರ ಇವರು ದಿನಾಂಕ 29-09-2018 ರಂದು ಭಾರತೀಯ ಸೆಕ್ಯುಲರ್‌ವಾದ: ಸಹಚಿಂತನೆ ಎಂಬ ಒಂದು ದಿನದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ.

ಪರಾಮರ್ಶನಾ ಗ್ರಂಥಗಳು (Bibliography):

- ಅಂಬೇಡ್ಕರ್, (2015) ಶೂದ್ರರು ಯಾರು? ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಕನ್ನಡ ಪುಸ್ತಕ ಪ್ರಾಧಿಕಾರ, ಕುವೆಂಪು ಭಾಷ ಸಮಿತಿ, ಬೆಂಗಳೂರು.
- ಅಂಬೇಡ್ಕರ್ ಬಿ.ಆರ್. ಸಮಗ್ರ ಬರಹಗಳು ಮತ್ತು ಭಾಷಣಗಳು ಸಂಪುಟ-5 (2010) ಕನ್ನಡ & ಸಂಸ್ಕೃತಿ ಇಲಾಖೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳುರು, ಪು.ಸಂ.399
- ಅಗ್ನಿ ಶ್ರೀಧರ್, (2015) ಅಗ್ನಿ ಪತ್ರಿಕೆ, "ಸಮಾಜವಾದದಿಂದ ಮುಖ್ಯಮಂತ್ರಿವರೆಗೆ" ಪುಟ. ಸಂ 17
- ಅಸ್ಸಾದಿ ಮುಜಾಫರ್, (1997) "ಪೆಸೆಂಟ್ ಮೂವ್‌ಮೆಂಟ್ ಇನ್ ಕರ್ನಾಟಕ", ದೆಹಲಿ,
- ಅಸ್ಸಾದಿ ಮುಜಾಫರ್(2011) "ಐಡೆಂಟಿಟಿ ಹಾಗೂ ಕಾಲ-ಮಾನದ ಚಿಂತನೆಗಳು" ಮುದ್ದಪ್ಪ ಸ್ಮಾರಕ ಟ್ರಸ್ಟ್ ಬೆಂಗಳೂರು.ಪು.ಸಂ.9.22
- ಅಸ್ಸಾದಿ ಮುಜಾಫರ್ (2011) "ಇನ್ನೊಂದು ಮುಖ" ಮುದ್ದಪ್ಪ ಸ್ಮಾರಕ ಟ್ರಸ್ಟ್ ಬೆಂಗಳೂರು. ಪು.ಸಂ.110
- ಇಂದಿರಾ.ಆರ್ "ಸಾಮಾಜಿಕ ಸಂಶೋಧನಾ ವಿಧಾನಗಳು".
- ಕೂಸಣ್ಣ ದಾಸನೂರು, (2005) "ರೈತರ ಆತ್ಮಹತ್ಯೆ ಮತ್ತು ದಲಿತರ ನವ ಬ್ರಾಹ್ಮಣಿಕೆ?, ಮಾತಂಗ ಪ್ರಕಾಶನ, ಮೈಸೂರು 19, ಪು.ಸಂ. 30, 32, 210, 213.
- ಗಂಗಾಧರಯ್ಯ ಎಸ್.ಎಂ, (2005)ಸಂಪಾದಕರು, "ಸದನದಲ್ಲಿ ಎಂ.ಪಿ. ಪ್ರಕಾಶ್" ಪ್ರಣವ ಪ್ರತಿಷ್ಠಾನ ಬೆಂಗಳೂರು 2005. ಪು.ಸ. 505.
- ಗೋಪಿನಾಥ್ ಎಂ. (2015) "ದಲಿತರು, ಹಿಂದುಳಿದ ವರ್ಗ ಮತ್ತು ಧಾರ್ಮಿಕ ಅಲ್ಪ ಸಂಖ್ಯಾತರು ಸರ್ಕಾರಿ ನೌಕರರ ಸಮಸ್ಯೆಗಳೇನು ಮತ್ತು ಪರಿಹಾರ ಮಾರ್ಗಗಳೆನು", ಘನನೀಲಿ ಪ್ರಕಾಶಕರು,
- ಗೋಲ್ಡ್. ಎಸ್.ಎಮ್.ವಿ. (2015) "ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳು", ಎಸ್.ಎಮ್.ವಿ.ಪ್ರಕಾಶನ, ಬೆಂಗಳೂರು. ಪು.ಸಂ. 3. & 4

- ಚಂದ್ರ ಪೂಜಾರಿ ಎಂ., (2005) "ಸಮಾಜ ಸಂಶೋಧನೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 41.
- ಚಂದ್ರಶೇಖರ್ ಬಿ.ಎಸ್. (2001) "ಸಮಾಜ ವಿಜ್ಞಾನಗಳಲ್ಲಿ ಸಂಶೋಧನ ವಿಧಾನಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 22–34.
- ಚಂದ್ರಶೇಖರ ಟಿ.ಆರ್. (2005) ಸಂಪಾದಕರು, "ದಲಿತ ಅಧ್ಯಯನ", ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 128–151.
- ಚಂದ್ರ ಪೂಜಾರಿ, ಎಂ. (2005) "ಸಮಾಜ ಸಂಶೋಧನೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,
- ಜವರಯ್ಯ ಮ.ನ. (1995) "ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ", ಪ್ರಕಾಶಕರು ಸಿದ್ದಾರ್ಥ ಗ್ರಂಥ ಮಾಲೆ, ಕುವೆಂಪುನಗರ, ಮೈಸೂರು, ಪು.ಸಂ. 355, 389, 405.
- ಜಾಫೆಟ್(2017) "ಪ್ರಭುತ್ವ ಮತ್ತು ಅಲ್ಪಸಂಖ್ಯಾತರು" ಅಂಬೇಡ್ಕರ ಚಿಂತನೆಗಳ ಪ್ರವೇಶಿಕೆ ಮಾಲೆ ಕರ್ನಾಟಕ ಸರ್ಕಾರ ಬೆಂಗಳೂರು.ಪು,ಸ.77.78.79.
- ಡೊಮಿನಿಕ್ ಡಿ. (2007) "ಜಾಗತೀಕರಣದ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು", ಸಖಿ ಪ್ರಕಾಶನ, ಹೊಸಪೇಟೆ.
- ತೇಲ್ತುಂಬ್ಡೆ ಆನಂದ(2015) "ಅಂಬೇಡ್ಕರ್ ಮತ್ತು ಮುಸ್ಲಿಮರು ಸುಳ್ಳುಗಳು ಮತ್ತು ಸತ್ಯಾಂಶಗಳು" ಲಡಾಯಿ ಪ್ರಕಾಶನ ಗದಗ.ಪು.ಸಂ25.27
- ತೋಲ್ಪಾಡಿ ರಾಜರಾಮ್, (2011) "ಮತ್ತೆ ಮತ್ತೆ ಲೋಹಿಯಾ" ಅಹರ್ನಿಶಿ ಪ್ರಕಾಶನ, ಶಿವಮೊಗ್ಗ. ಪು.ಸಂ.77
- ದೇವಿಕ ಎನ್.ಸಿ (2019) "ಕರ್ನಾಟಕದ ರಾಜಕೀಯದಲ್ಲಿ ಜನತಾದಳ ಪಕ್ಷ ಪಾತ್ರ ಒಂದು ಅಧ್ಯಯನ" ಬೆಂಗಳೂರು ವಿವಿ.
- ದ್ವಾರಕನಾಥ್. ಸಿ.ಎಸ್.(2018) "ಮೂಕ ನಾಯಕ" ಸಿದ್ದರಾಮಯ್ಯ ಮತ್ತು ಸಾಮಾಜಿಕ ನ್ಯಾಯ, ಅವಿರತಪುಸ್ತಕ, ಬೆಂಗಳೂರು.ಪು.ಸಂ.120.121
- ಧನಗೆರೆ ಡಿ.ಎನ್. (2012)ರವರ "ಭಾರತದಲ್ಲಿ ರೈತ ಚಳುವಳಿಗಳು 1920–1950' ಅನುವಾದ ರಾಮಚಂದ್ರ ಉಡುಪ, ಅನಂತಕೃಷ್ಣ ಹೆಬ್ಬಾರ, ಪ್ರತೀಪ್ ಶೆಟ್ಟಿ ಕೆ., ಕ್ರಿಯಾ ಪ್ರಕಾಶನ, ನಂ. 12, 18ನೇ ಅಡ್ಡ ರಸ್ತೆ, ಸಲಿಪಂಗಿರಾಮನಗರ, ಬೆಂಗಳೂರು 560027.
- ದೇವರಾಜು.ಪಿ.(2005) "ಹಿಂದುಳಿದ ಜಾತಿಗಳು ಮತ್ತು ಸಂವಿಧಾನ" ಜಸ್ಟೀಸ್ ಪಬ್ಲಿಕೇಷನ್, ಮೈಸೂರು.
- ದಯಾನಂದ ಎ ಮಾನೆ(2012) "ದಲಿತ ಪ್ಯಾಂಥರ್ಸ್ ಚಳುವಳಿ" ಕಾಯಕ ಕ್ರಿಯೇಷನ್ಸ್ ಮೈಸೂರು.
- ದುರ್ಗದಾಸ ಬಸು (2008) ಭಾರತ ಸಂವಿಧಾನಕ್ಕೆ ಪೀಠಿಕೆ. ನ್ಯೂಡೆಲ್ಲಿ.ಪು.ಸಂ.79,143,144, 153
- ನಾರಾಯಣ ಕೆವಿ,(2018) " ನಾಮ್ ಚಾಮ್‌ಸ್ಕಿ ಜೊತೆಗೆ ಒಂದು ಎರಡು ಹೆಜ್ಜೆ" ಅನರ್ಹಿಶಿ ಪ್ರಕಾಶನ ಶಿವಮೊಗ್ಗ ಪು.ಸಂ.24.56
- ನಾಗಮೋಹನ್‌ದಾಸ್ ಹೆಚ್.ಎನ್(2018) "ಸಂವಿಧಾನ ಓದು" ಸಹಯಾನ, ಹೊನ್ನಾವರ. ಪು.ಸಂ.34.35
- ನಾಡಕರ್ಣಿ ಎಂ.ವಿ. (1986) "ಕರ್ನಾಟಕದ ರೈತ ಹೋರಾಟಗಳು" (ರಾಷ್ಟ್ರೀಯ ಹಿನ್ನೆಲೆಯಲ್ಲಿ ಒಂದು ಅಧ್ಯಯನ) ಪ್ರೆಟರ್ಸ್ ಪ್ರಕಾಶನ 75 ಮಹಾತ್ಮಾಗಾಂಧಿ ರಸ್ತೆ ಬೆಂಗಳೂರು.
- ನಿರ್ಮಲ್ ರಾಜ್,{2011}.ಪ್ರೊ.ಮಹೇಶ್ ಚಂದ್ರಗುರು,ಪ್ರೊ.ನಿರ್ಮಲ್ ರಾಜ್.{ಸಂಪಾದಕರು} ಅಂತ್ಯೋದಯ. ಕಾರ್ಯದರ್ಶಿ,sc\st ನೌಕರರ ಸಂಘ,ಮೈ,ವಿವಿ,ಪು.ಸಂ.106.107
- ಪ್ರಸನ್ನಕುಮಾರ್ ಅಂಶಿ, {2017} ಮೈಸೂರು ಚಾಮರಾಜನಗರ ರಾಜಕೀಯ ಇತಿಹಾಸ, ಚಿಂತನ ಚಿತ್ತಾರ ಮುದ್ರಣ ಮೈಸೂರು,ಪು.ಸಂ 290.291
- ಪ್ರಕಾಶ್ ಮಹದೇವ (2015) "ಇಟ್ಟಗುರಿ–ದಿಟ್ಟಹೆಜ್ಜೆ ಸಮಾನತೆಯ ಸಾಧಕನ ಸಂಕಲ್ಪದ ಹಾದಿ" ಕರ್ನಾಟಕ ಸಾಹಿತ್ಯ ವೇದಿಕೆ(ರಿ) ಬೆಂಗಳೂರು, ಪು.ಸಂ. 3.& 4
- ಪೋತೆ ಹೆಚ್.ಟಿ. ಮತ್ತು ಸಿಂಧೆ ಜಗನ್ನಾಥ, ಸಂಪಾದಕರು, "ಮೀಸಲಾತಿ, ಸಮಸ್ಯೆ, ಸವಾಲುಗಳು" ತಿಪ್ಪಣ್ಣಂಬು ಪ್ರಕಾಶನ, ಗುಲ್ಬರ್ಗ, 2006, ಪು.ಸಂ. 128–146.

- ಪ್ರಸನ್ನಕುಮಾರ್ ಅಂಶಿ, (2018) "ಸಮುದಾಯ ನಾಯಕರು" ರೂಪ ಪ್ರಕಾಶನ, ಮೈಸೂರು, ಪು.ಸಂ.89.
- ಪ್ರಹ್ಲಾದಪ್ಪ, "Emerging political leadership of backward classes in Karnataka".
- ಪ್ರಭಾಕರ್ ಎ.ಎಸ್& ಶ್ರೀಪಾದ ಶೆಟ್ಟಿ(2012) "ಲೋಹಿಯಾ ವರ್ತಮಾನದ ಮುಖಾಮುಖಿ"
- ಪುನ್ನೆಪ್ಪ ಎಸ್. ಮಾಳ್ಗೆ, (2004)–"ಬಸವೇಶ್ವರ ಮತ್ತು ಅಂಬೇಡ್ಕರ್ ಚಿಂತನೆಗಳಲ್ಲಿ ಸಾಮಾಜಿಕ ನ್ಯಾಯ" ರಾಜ್ ಪ್ರಕಾಶಕರು, ನಂ. 83, ಕೆ.ಎಸ್.ಆರ್.ಟಿ.ಸಿ. ಬಡಾವಣೆ ಹನುಮಂತನಗರ, ಬನ್ನಿ ಮಂಟಪ, ಮೈಸೂರು–570015 ಪುಟ–17–21.
- ಪ್ರಕಾಶ್ ಎಂ.ಪಿ ಅನುವಾದಕರು "ನನ್ನನ್ನು ಜೀವನ ಮತ್ತು ರಾಜಕೀಯ" ಎಸ್.ನಿಜಲಿಂಗಪ್ಪ (ಆತ್ಮಕಥ ಧನ) ಪ್ರಣವ ಪ್ರತಿಷ್ಠಾನ ಪ್ರಕಾಶನ ಬೆಂಗಳೂರು,
- ಪೋತೆ ಹೆಚ್.ಟಿ. ಮತ್ತು ಸಿಂಧೆ ಜಗನ್ನಾಥ, ಸಂಪಾದಕರು, "ಮೀಸಲಾತಿ, ಸಮಸ್ಯೆ, ಸವಾಲುಗಳು" ತಿಪ್ಪಣ್ಣಂಬು ಪ್ರಕಾಶನ, ಗುಲ್ಬರ್ಗ, ಪು.ಸಂ. 227–237.
- ಪೋತೆ ಹೆಚ್.ಟಿ. ಮತ್ತು ಸಿಂಧೆ ಜಗನ್ನಾಥ, (2006) ಸಂಪಾದಕರು, "ಮೀಸಲಾತಿ, ಸಮಸ್ಯೆ, ಸವಾಲುಗಳು" ತಿಪ್ಪಣ್ಣಂಬು ಪ್ರಕಾಶನ, ಗುಲ್ಬರ್ಗ, 2006, ಪು.ಸಂ. 128–146.
- ಪೋತೆ ಎಚ್.ಟಿ. (2005) "ಅವೈದಿಕ ಚಿಂತನೆ", ತಿಪ್ಪಣ್ಣಂಬು ಪ್ರಕಾಶನ, ಗುಲ್ಬರ್ಗ 6, ಪು.ಸಂ. 107.
- ಪೋತೆ ಹೆಚ್.ಟಿ. (2016) ಮತ್ತು ಸಿಂಧೆ ಜಗನ್ನಾಥ, ಸಂಪಾದಕರು "ಮೀಸಲಾತಿ ಸಮಸ್ಯೆ–ಸವಾಲುಗಳು" ತಿಪ್ಪಣ್ಣಂಬು ಪ್ರಕಾಶನ, ಗುಲ್ಬರ್ಗ, ಪು.ಸಂ. 212.
- ಬಸವರಾಜು ಎಲ್. (1952) "ಬಸವಣ್ಣನವರ ವಚನಗಳು" ಗೀತ ಬುಕ್‌ಹೌಸ್ ಮೈಸೂರು.
- ಬೋರಲಿಂಗಯ್ಯ, ಹಿ.ಚಿ (2007) "ಸ್ವಾತಂತ್ರ್ಯೋತ್ತರ –ಕನಾಟಕ ಒಂದು ನೋಟ"
- ಮಂಜು ಎಸ್.ಕೆ. (2017) "ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳುವಳಿ ಮತ್ತು ರಾಜಕೀಯ ನಾಯಕತ್ವ: ವಿಶೇಷವಾಗಿ ಮೈಸೂರು ಜಿಲ್ಲೆಯ ಒಂದು ಅಧ್ಯಯನ" ಮೈಸೂರು, ವಿವಿ.ಪು.ಸಂ 268
- ಮಹಾದೇವಯ್ಯ ತುಮಕೂರು, ನಾಗರಾಜ ಜಿ.ಜಿ. ಸಂಪಾಧಕರು. (2015) "ಇಟ್ಟಗುರಿ–ದಿಟ್ಟಹೆಜ್ಜೆ" ಕರ್ನಾಟಕ ಸಾಹಿತ್ಯ ವೇದಿಕೆ(ರಿ) ಬೆಂಗಳೂರು.ಪು.ಸಂ.219
- ಮಲ್ಲಿಕಾರ್ಜುನ ಮೇಟಿ (2017) "ದಲಿತ ನೋಟ" ಕರ್ನಾಟಕ ಸಬಾಲ್ಟ್ರನ್ ಓದು ಮಾಲಿಕೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳುರು. ಪು.ಸಂ.433.435
- ಮಹೇಶ್‌ಚಂದ್ರಗುರು ಬಿ.ಪಿ. ಮತ್ತು ಪ್ರೊ.ನಿರ್ಮಲ್‌ರಾಜ್–(2011)ಸಂಪಾದಕರು, "ಅಂತ್ಯೋದಯ" (ದಲಿತರ ಹೋರಾಟ ಹಾಗೂ ವಿಮೋಚನೆಯ ಕುರಿತಾದ ಲೇಖನಗಳ ಸಂಗ್ರಹ) ಪ್ರಕಾಶಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನೌಕರರ ಸಂಘ (ನೋಂ) ಕಾಫರ್ಡ್ ಭವನದ ಆವರಣ, ಮೈಸೂರು ವಿಶ್ವವಿದ್ಯಾನಿಲಯ,
- ಮಾನಸ (2013) ಸಂಪಾದಕರು, "ಸದನದಲ್ಲಿ ಸಿದ್ದರಾಮಯ್ಯ" ಕನ್ನಡ ಸಾಹಿತ್ಯ ಪರಿಷತ್ ಪ್ರಕಾಶನ, ಬೆಂಗಳೂರು,
- ಮಹೇಶ್ ಎನ್. (2015) "ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್", (ಮೈಸೂರು ಸಂಸ್ಥಾನದ ಸಾಮಾಜಿಕ ಪರಿವರ್ತನಾ ಚಳುವಳಿಯ ರುವಾರಿ) ಪ್ರಕಾಶನ ಎನ್. ಮಹೇಶ್, ಜೆ.ಪಿ. ನಗರ, ಬೆಂಗಳೂರು–72, 7ನೇ ಸಂಪುಟ, ಪು.ಸಂ. 27–37.
- ಮಹೇಶ್ ಎನ್. (2016) "ಬಾಬಾ ಸಾಹೇಬ್ ಡಾ. ಅಂಬೇಡ್ಕರ್" ಪ್ರಬುದ್ಧ ಪ್ರಕಾಶನ, ಮೈಸೂರು.
- ಮಹೇಶ್ ಎನ್. (2016) "ಸಾಮಾಜಿಕ ಪರಿವರ್ತನ ಚಳುವಳಿಯ ಇತಿಹಾಸ" ಪ್ರಬುದ್ಧ ಪ್ರಕಾಶನ,
- ಮುನಿವೆಂಕಟಪ್ಪ ವಿ, (2009) ಸಂಪಾದಕರು "ದಲಿತ ಚಳುವಳಿ ಚರಿತ್ರೆ" ತನುಮನು ಪ್ರಕಾಶನ, ಕುವೆಂಪು ನಗರ ಮೈಸೂರು ಪು.ಸಂ. 150–153.
- ಮಹಾದೇವ ನಾರಾಯಣ ರಾವ್ ಜೋಶಿ ಮತ್ತು ಗುರುರಾಜ ನಾರಾಯಣ ರಾವ್ ಜೋಶಿ, (1998) "ಸಾಮಾಜಿಕ ವಿಜ್ಞಾನಗಳಲ್ಲಿ ಸಂಶೋಧನೆ", ಶೀಲಾ ಪ್ರಕಾಶನ, ಧಾರವಾಡ, ಪು.ಸಂ. 26–44.

- ಮರಡ್ಡಿ ಶ್ರೀನಿವಾಸ ಮತ್ತು ಬೇವಿನ ಬೆಂಚಿ ವೆಂಕಟೇಶ (2014) ಮತ್ತು ಅರೋಲಿ ರಮೇಶ, ನರಸಿಂಹ ಗುಂಜಹಳ್ಳಿ, ಸಂಪಾದಕರು, "ಒಳ ಮೀಸಲಾತಿ – ಮುಟ್ಟಲಾರದವನ ಒಡಲಾಳ", ಲಡಾಯಿ ಪ್ರಕಾಶನ, ಗದಗ, ಪು.ಸಂ. 35–38.
- ಮೂರ್ತಿಶ್ವರಯ್ಯ ಬೆ.ಕಾ. (2008) "ಸಮಾಜ ಮತ್ತು ಕಾನೂನು", ಸಪ್ನ ಬುಕ್ ಹೌಸ್, 3ನೇ ಮುಖ್ಯರಸ್ತೆ ಗಾಂಧಿನಗರ, ಬೆಂಗಳೂರು 560009.
- ರಂಜಾನ್ ದರ್ಗಾ (2016) 'ಅಹಿಂದ ಏಕೆ' ಭಾರತೀ ಪ್ರಕಾಶನ, ಮೈಸೂರು. ಪು.ಸಂ. 5
- ರಾಮಚಂದ್ರಗೌಡ ಹಿ.ಶಿ. (2010) "ರೈತ ಚಳುವಳಿ ಸುಮ್ಮನೆ", ದಾರಿದೀಪ ಪ್ರಕಾಶನ, ದಾರಿದೀಪ ಸಂಶೋಧನ ಕೇಂದ್ರ 114, ಬೋಗಾದಿ ಬಡಾವಣೆ (ದಕ್ಷಿಣ) ಮೈಸೂರು–570026.
- ಲಕ್ಷ್ಮಣ್ ತೆಲಗವಿ, (2012)ಹಿಂದುಳಿದ ವರ್ಗಗಳು ಹಾಗೂ ದಲಿತ ಚಳುವಳಿಗಳು, ಪು.46
- ವಿಜಯ ಮಹೇಶ್(2012) " ಮೂಲನಿವಾಸಿ ಬಹುಜನರ ಇತಿಹಾಸ" ಪ್ರಬುದ್ಧ ಪ್ರಕಾಶನ, ಮೈಸೂರು.
- ವಿಜಯಾ ಮಹೇಶ್, (2014) "ನೆಲದ ಮಾತು", ಪ್ರಕಾಶನ ನರಸಿಂಹಯ್ಯ ಗಾರ್ಡನ್, 5ನೇ ಹಂತ, ಜೆ.ಪಿ. ನಗರ, ಬೆಂಗಳೂರು 72, ಪು.ಸಂ. 1–4.
- ವೆಂಕಟೇಶ್ ಹೆಚ್, ಎ [2000] "ಕರ್ನಾಟಕದ ಅರಸು" ವಿಸ್ಮಯ ಪ್ರಕಾಶನ ಮೈಸೂರು.
- ಸುರೇಶ್ ಕೆ.ಎಂ. 2013 "ಭಾರತೀಯ ಸಂವಿಧಾನ" ಸ್ಪರ್ಧಾ ವಿಜೇತ ಪ್ರಕಾಶನ, ಬೆಂಗಳೂರು.
- ಸೋಸಲೆ ಚಿನ್ನಸ್ವಾಮಿ ಎನ್. (2012) "ದಲಿತರ ಬದುಕು–ಮೆಲುಕು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪು.ಸಂ. 37–41.
- ಸುರಕೋಡ ಹಸನ್ ನಯೀಂ, (2010) "ಡಾ. ರಾಮಮನೋಹರ ಲೋಹಿಯ ಜಾತಿ ಪದ್ಧತಿ", ಲಂಕೇಶ್ ಪ್ರಕಾಶನ, ಬೆಂಗಳೂರು, ಪು.ಸಂ. 46, 152, 132.
- ವೆಂಕಟೇಶ್ ಹೆಚ್.ಎ. (2011) ಪ್ರಧಾನ ಸಂಪಾದಕರು, ಡಾ. ಹಿ.ಶಿ. ರಾಮಚಂದ್ರೆಗೌಡ, ಡಾ. ಕೃಷ್ಣ ಮೂರ್ತಿ ಹನೂರು, ಸಂಪಾದಕರು "ಕರ್ನಾಟಕದ ಅರಸು" ವಿಸ್ಮಯ ಪ್ರಕಾಶನ, ಮೈಸೂರು.
- ಸೋಸಲೆ, ಚಿನ್ನಸ್ವಾಮಿ ಎನ್. (2013) "ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು" ಪುಟ–15, ಯಾಜಿ ಪ್ರಕಾಶನ, ಹೊಸಪೇಟೆ.
- ಶ್ರೀನಿವಾಸ್‌ರಾವ್.ಎಸ್.ವಿ. ಮಹದೇವಯ್ಯ ತುಮಕೂರು, (2013) "ಕನಾಟಕದ ಮುಖ್ಯ ಮಂತ್ರಿಗಳು", ಕರ್ನಾಟಕ ಸಾಹಿತ್ಯ ವೇದಿಕೆ, ಬೆಂಗಳೂರು, ಪು.ಟ.386. 387
- ಶಂಕರ್ ರಾವ್ ಚ.ನ (2013) "ಸಾಮಾಜಿಕ ಚಿಂತನೆಯ ಅಧ್ಯಯನ. ಜೈ ಭಾರತ್ ಪ್ರಕಾಶನ ಮಂಗಳೂರು. ಪು.ಸಂ. 65.
- ಶಿವಕುಮಾರ (2016) "ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಯಾಕೆ ಬೇಕು?", ಪ್ರಬುದ್ಧ ಪ್ರಕಾಶನ್, ನಂ. 9/1 ಮೇನ್ ಡಾ. ಅಂಬೇಡ್ಕರ್ ರಸ್ತೆ, ಜೆ.ಪಿ.ನಗರ, ಮೈಸೂರು, ಮೂರನೇ ಮುದ್ರಣ.
- ಶಿವಕುಮಾರ, (2016) "ಹಿಂದುಳಿದ ಜಾತಿಗಳ ಮೀಸಲಾತಿ ತ/ ಮನುವಾದಿಗಳ ಮೆರಿಟ್" ಪ್ರಬುದ್ಧ ಪ್ರಕಾಶನ, ಜೆ.ಪಿ. ನಗರ ಮೈಸೂರು, 6ನೇ ಮುದ್ರಣ. ಪು.ಸಂ. 5–20.
- ಶಿವಕುಮಾರ, (2016) "ಸಾಮಾಜಿಕ ಪ್ರಜಾಪ್ರಭುತ್ವದ ಸಂಸ್ಥಾಪಕ ಛತ್ರಪತಿ ಶಾಹುಮಹಾರಾಜ್", ಪ್ರಬುದ್ಧ ಪ್ರಕಾಶನ, ಜೆ.ಪಿ.ನಗರ, ಮೈಸೂರು–08, ಪು.ಸಂ. 2–22.
- ಶಂಕರ್‌ರಾವ್ ಚ.ನ. (2008) "ಭಾರತೀಯ ಸಮಾಜ–2" (ಪರಂಪರೆ ಮತ್ತು ಪರಿವರ್ತನೆ), ಜೈ ಭಾರತ್ ಪ್ರಕಾಶನ, ಮಂಗಳೂರು, ಪು.ಸಂ. 126–154.
- ಶಂಕರ್‌ರಾವ್ ಚ.ನ. (1999) "ಭಾರತದಲ್ಲಿ ಸಾಮಾಜಿಕ ಸಮಸ್ಯೆ ಮತ್ತು ಸಾಮಾಜಿಕ ವಿಘಟನೆ", ಜೈ ಭಾರತ್ ಪ್ರಕಾಶನ, ಮಂಗಳೂರು, ಪು.ಸಂ. 1–19.
- ಶಿವಕುಮಾರ, (2016) "ಮನುವಾದಿ ಸರ್ಕಾರಗಳಿಗೆ ನೂರೊಂದು ಪ್ರಶ್ನೆಗಳು" ಹಿಂದುಳಿದ ಜಾತಿಗಳ (OBC/SC/ST) ಮೀಸಲಾತಿ, ಪ್ರಬುದ್ಧ ಪ್ರಕಾಶನ, ಜೆ.ಪಿ.ನಗರ, ಮೈಸೂರು, ಪು.ಸಂ.
- ಶಂಕರ್‌ರಾವ ಚ.ನ (2011)"ಸಾಮಾಜಿಕ ಸಂಶೋಧನೆಯ ಕೈಪಿಡಿ" ಆವೃತ್ತಿ 2011–12, ಜೈ ಭಾರತ್ ಪ್ರಕಾಶನ, ಮಂಗಳೂರು, ಪು.ಸಂ. 36–40.

- ಶರ್ಮ ಎ.ಆರ್. (1990) "ಕುಲ ಜನಾಂಗ ಮತ್ತು ಅಲ್ಪಸಂಖ್ಯಾತರ ಸಂಬಂಧಗಳು", ಚೇತನ ಬುಕ್ ಹೌಸ್, ಮೈಸೂರು ಪು.ಸಂ. 74–90.
- ಶಾಂತಕುಮಾರ್ ಕೆ.ಎನ್. (2016) ಪ್ರಧಾನ ಸಂಪಾದಕರು ಮತ್ತು ದೇವನೂರ ಮಹಾದೇವ ಅತಿಥಿ ಸಂಪಾದಕರು "ಸಮಾನತೆ ಕನಸ್ಸನ್ನು ಮತ್ತೆ ಕಾಣುತ್ತಾ!" ಪ್ರಜಾವಾಣಿ ಪ್ರಕಾಶನ, ಬೆಂಗಳೂರು
- ಶಾಂತಕುಮಾರ್ ಕೆ.ಎನ್. (2016) ಪ್ರಧಾನ ಸಂಪಾದಕರು ಮತ್ತು ದೇವನೂರ ಮಹಾದೇವ ಅತಿಥಿ ಸಂಪಾದಕರು "ಸಮಾನತೆ ಕನಸ್ಸನ್ನು ಮತ್ತೆ ಕಾಣುತ್ತಾ"!, ಪ್ರಜಾವಾಣಿ ಪ್ರಕಾಶನ, ಬೆಂಗಳೂರು,
- ಶ್ರೀನಿವಾಸ್ ರಾವ್ ಎಸ್,ವಿ [2016] " ಕರ್ನಾಟಕದ ಮುಖ್ಯಮಂತ್ರಿಗಳು" ಕರ್ನಾಟಕ ಸಾಹಿತ್ಯ ವೇದಿಕೆ, ಬೆಂಗಳೂರು.
- ಶಿರೂರ ಬಿ.ವ್ಹಿ. (2015) "ಸಂಶೋಧನ ಸ್ವರೂಪ" ಪ್ರಕಾಶಕರು ಅನ್ನಪೂರ್ಣ ಪ್ರಕಾಶನ, ನಂ. 13, ಮಂಜುನಾಥನಗರ, ಹುಬ್ಬಳ್ಳಿ.
- ನ್ಯಾ. ಶಿವರಾಂ ವಿ. (2011) ಪಾಟೀಲರವರ "ಮಾನವ ಘನತೆಯ ಪರವಾದ ಮಾನವೀಯ ಹಕ್ಕುಗಳ ಚಿಂತನೆಗಳು" (ಆಯ್ದ ಭಾಷಣಗಳ ಸಂಕಲನ), ಪ್ರಕಾಶಕರು ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ಅನುವಾದ ಡಾ. ಎಸ್.ಕೆ. ಜ್ಯೋಶಿ,
- ಶ್ವೇತಾ ಟಿ.ಸಿ. ಮತ್ತು ವಿಜಯರಾಜು ಬಿ.ಟಿ (2012) "ಸಂಶೋಧನೆಯ ಮೂಲಾಂಶಗಳು", ವಿಜಯಲಕ್ಷ್ಮಿ ಪ್ರಕಾಶನ, 11/1 ಸಾಹುಕಾರ್ ಚನ್ನಯ್ಯ ರಸ್ತೆ, ವಿಜಯಬ್ಯಾಂಕ್ ಎದುರು, ಜನತಾನಗರ ಮೈಸೂರು.
- ಶ್ವೇತ ಟಿ.ಸಿ. ಮತ್ತು ವಿಜಯ್‌ರಾಜು ಬಿ.ಪಿ. (2012) "ಸಂಶೋಧನೆಯ ಮೂಲಾಂಶಗಳು", ವಿಜಯಲಕ್ಷ್ಮಿ ಪ್ರಕಾಶನ, ಜನತಾನಗರ ಮೈಸೂರು, ಪು.ಸಂ. 62–63.
- ಶಂಕರ್‌ರಾವ್, ಚ.ನಾ. (2011) "ಸಾಮಾಜಿಕ ಸಂಶೋಧನೆಯ ಕೈಪಿಡಿ"
- ಹಣಮಂತ್ರಾಯ ದೊಡ್ಡಮನಿ, (2011) ದೇವರಾಜ ಅರಸು ಮತ್ತು ಕರ್ನಾಟಕದ ರಾಜಕಾರಣ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ಪುಟ ಸಂ.11,12,13
- ಹರೀಶ್‌ಕುಮಾರ್ ವಿ, (2018) "ಮೂಕ ನಾಯಕ ಸಿ.ಎಸ್. ದ್ವಾರಕನಾಥ್ ಸಾಂಧರ್ಭಿಕ ಲೇಖನಗಳು" ಅವಿರತ ಪುಸ್ತಕ, ಬೆಂಗಳೂರು. ಪ.ಸಂ120. 125
- ಹೊಸಗೂರು ಮಂಜುನಾಥ್ (2018) "ಕರ್ನಾಟಕದ ರಾಜಕೀಯದಲ್ಲಿ ಸಿದ್ದರಾಮಯ್ಯನವರ ಪಾತ್ರ ಒಂದು ಅಧ್ಯಯನ" ಕರ್ನಾಟಕ ವಿವಿ ದಾರವಾಡ.
- ಹಾದಿಗೆ ಭಾರತಿ, ಬಿ.ಎಂ. 2012 "ಸಮಾಜಶಾಸ್ತ್ರದ ಚಿಂತಕರು" ಚೇತನ್ ಬುಕ್ ಹೌಸ್, ಮೈಸೂರು.
- ಸಂವಿಧಾನ –60 ಸಾಮಾಜಿಕ ನ್ಯಾಯ ಮತ್ತು ಕರ್ನಾಟಕ.
- ಎಸ್ ಚಂದ್ರಶೇಖರ್, "ಅಭಿವೃದ್ಧಿ ಪಥ"
- ಪ್ರಸರಾಂಗ. ಕನ್ನಡ ವಿವಿ, ಹಂಪಿಪು,ಸಂ459.460:
- ವಾರ್ತಾಭಾರತಿ ದಿನ ಪತ್ರಿಕೆ (2018) ಸಂಪಾಧಕೀಯ "ಕರುಣಾಡಿನ ಭಾಗ್ಯದ ಬಾಗಿಲು ತೆರದ ಸರ್ಕಾರ" ವಾರ್ತಾಭಾರತಿ ಕನ್ನಡ ಡೈಲಿ, ಬೆಂಗಳೂರು ಪು.ಸಂ.6,8,9,22
- ವಾರ್ತಭಾರತಿ [feb 2018] "ಕರುನಾಡಿನ ಭಾಗ್ಯದ ಬಾಗಿಲು ತೆರದ ಸರ್ಕಾರ" ವಾರ್ತಬಾರತಿ ಕನ್ನಡ ಡೈಲಿ, ಬೆಂಗಳೂರು.

English Reference books:

- *Austin Michael J (2015) "social justice and social work" saje publication new dehli. pg23.*
- *Bhattacharyya Dipak Kumar, 2009, "Research Methodology", Excel Books publications, New Delhi, P. 1.*
- *Camilla Orjuela, 2008 "The identity politics of peace building", Sage publications, New Delhi, PP. 49-66.*
- *Dasharath n. (2009) "A Vision for Social justice" pfo.vb.countinho trust Bangalore.pg 45*

- *Dubey k anand (1989) "social justice and bonded force in india" priniwel publication Jaipur. Pg.71*
- *Ensyclopedia, National Congress Party,*
- *Gokulesh sharma (2015) "Human Rights and Social Justice" deep & deep publication new dehli. Pg.23*
- *Google – Dictionary Social justice.*
- *Kothari C.R., and Gaurav Garg, 2016 "Research Methodology", Methods and Techniques, New age International publications, Delhi,.*
- *Mahajan Gurupreet (1998) "Democrocy, Difference in Social justice" oxford publication pg. 12. 16*
- *Michael Dusche, 2010,"Identity politics in India and Europe", Sage publications, New Delhi, PP. 1-3, 51-56.*
- *Miditala ran , (2003) "Karnataka gournament and politics" chethan publication. Bangalore.*
- *Mohanty B.B., Editor and Jacob John Kattakayan, 2012, "Agrarian change and Mobilisation", Sage publications, New Delhi, PP. 3-21.*
- *Mujawar R. Wasiyoddin, 2009 "Social Justice and Human Rights", Manglam publications, Delhi, PP. 27-34.*
- *Oneil biswas (1985) "from justice to welfare" intellectual publishing house new dehli.pg.44.*
- *Prasad kiran kamal (2005) "In Search of an Identity" jana jagruti prakashan banglore.pg.21*
- *Purohit B.R., Sandeep joshi (2015) "Social justice in india" rawat publication new dehli. Pg 65*
- *Raiyani R. Jagadish, 2012, "Research Methodology", Theory and Techniques, New Century publications, New Delhi, P. 1-18.*
- *Rajesh kr.jha (2010) "Social justice and Empowerment" surendra publication new dehli pg.67*
- *Rajini Kothari, 2010, "Caste in Indian Politics", Orient Black Swan Private Limited, New Delhi, PP. 1.*
- *Sahu D.R., and Jacob John Kattakayam, 2012 "Sociology of Social Movement", Sage publications, New Delhi, PP. 1-5.*
- *Sampathkumar M., Ph.d – Dr.B.R.Ambedkar and Social justice.*
- *Shodha Ganga. Infibenet.ac, Dr,B.R Ambedkar Vission- Social Justice*
- *Wikipedia, D.Devaraj urs*

Journals and Magazines:

- 'ಅಂಬೇಡ್ಕರ್ ವಾಯ್ಸ್' (2016) ಶೋಷಿತ ಸಮುದಾಯಗಳ ಪ್ರತಿಧ್ವನಿ, ಕನ್ನಡ ಮಾಸಿಕ, ಸಂಪುಟ 19, ಸಂಚಿಕೆ–2, ಫೆಬ್ರವರಿ.
- *Centre for Jawaharlal Nehru studies, July 2015. Jamia, Millia Islamia "History and Sociology of south Asia", Vol. 9, No. 2,*
- *IJPS – "The Indian Journal of Political Science", 2015. Vol. LXXVI, No.4, December-*

ಪತ್ರಿಕೆಗಳ ಪ್ರಕಟಣಾ ವರದಿ:

- ಕೆ.ಎಂ. ವಿಶ್ವನಾಥ ಮರತೂರ, (2016) **"**ಡಾ. ಅಂಬೇಡ್ಕರ್ ದಲಿತರಿಗೆ ಮಾತ್ರ ಸೀಮಿತವೆ?**"**, ವಾರ್ತಾ ಭಾರತಿ, ದಿ–06–05–ಪು.ಸಂ.5.

- ಗುರುರಾಜ ಎನ್. (2016) ದಾವಣಗೆರೆ, "ಖಾಸಗಿ ರಂಗದಲ್ಲಿ ಮೀಸಲಾತಿ ಅಗತ್ಯ", ವಾರ್ತಾಭಾರತಿ, ಜನವರಿ15
- ವಿಜಯ ಕರ್ನಾಟಕ ಏಪ್ರಿಲ್ 2016 "ರಾಜ್ಯದ ಜನ ಸಂಖ್ಯೆಯಲ್ಲಿ ದಲಿತರೆ ನಂ.1" ಪು–1
- 'ವಾರ್ತಾ ಭಾರತಿ', ಫೆಬ್ರವರಿ 11, 2016, "ಧೈರ್ಯ, ಛಲ, ಸ್ವಂತಿಕೆಗಳ ಸಾತ್ವಿಕ ಅರಸು – ಪಿ.ರಾಮಯ್ಯ".
- ವಾರ್ತಾ ಭಾರತಿ, ಮೇ 25, 2015, "ಇಂದಿರಾರ ಗೆಲುವೇ ಅರಸರಿಗೆ ಮುಳುವಾಯಿತು", ಎಂ. ರಘುಪತಿ ಸಂದರ್ಶನಕಾರ.
- 'ವಿಜಯ ಕರ್ನಾಟಕ', ಮೇ 19, 2016, "ಹೊರಳು ನೋಟ", ಮಹಾದೇವ ಪ್ರಕಾಶ್‌ರ "ಕಾಂಗ್ರೆಸ್ ಆಡಳಿತದ ಏಳುಬೀಳಿನ ಪರ್ವ".
- ಎಂ. ನಾರಾಯಣ ಸ್ವಾಮಿ, "ಅಹಿಂದ ಸರ್ಕಾರದಲ್ಲಿ ದಲಿತರ ಸೌಲಭ್ಯಗಳ ಮೊಟಕು".
- ಕನ್ನಡ ಪ್ರಭ, 19–03–2016, ಸಿ.ಎಸ್.ದ್ವಾರಕನಾಥ್, ಚಿಂತಕರು, ಹಿರಿಯ ವಕೀಲರು, "ತಣ್ಣಗಾಗಲೇ ಇಲ್ಲ ಅಲೆಮಾರಿಗಳ ಒಡಲುರಿ".
- ವಾರ್ತಾ ಭಾರತಿ, ಎಪ್ರಿಲ್ 16, 2016, ಬಸು ಮೇಗಲ್ಕೇರಿರವರ "ಸಾಮಾಜಿಕ ನ್ಯಾಯದ ಹರಿಕಾರ ಅರಸು – ಎಂ. ರಘುಪತಿ".
- ವಾರ್ತಾ ಭಾರತಿ ವರದಿ, ಎಪ್ರಿಲ್ 22, 2016, "ಸಿದ್ಧರಾಮಯ್ಯನ ಮನದಾಳದ ಮಾತು".

ಮಾರ್ಗದರ್ಶಕರು. **ಸಂಶೋಧಕರು**

(ದಯಾನಂದ ನಾಯ್ಕ್) **(ಲೋಕೇಶ ಐ.ಡಿ.)**